# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨sÁUÀ4 ಎ<br>**Part – IV A** | ಬೆಂಗಳೂರು, ಬುಧವಾರ, 07, ಡಿಸೆಂಬರ್, 2022(ಮಾರ್ಗಶಿರ, 16, ಶಕವರ್ಷ, 1944)<br>**BENGALURU, WEDNESDAY, 07, DECEMBER, 2022(MARGASHIRA, 16, SHAKAVARSHA, 1944)** | ನಂ. **596**<br>**No. 596** |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಸಂಖ್ಯೆ: ಸಂವ್ಯಶಾಇ 61 ರಾಶಾಪ್ರು 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 07.12.2022.

## ಅಧಿಸೂಚನೆ

The Karnataka Court-Fee and Suits Valuation Act, 1958 (Karnataka Act 16 of 1958) ಇದರ ಅಧಿಕೃತ ಕನ್ನಡ ಭಾಷಾಂತರವನ್ನು the Karnataka Official Language Act, 1963 (Karnataka Act 26 of 1963)ರ ಪ್ರಕರಣ 5Aರ ಅಡಿಯಲ್ಲಿ ರಾಜ್ಯಪಾಲರ ಅಧಿಕಾರದ ಮೇರೆಗೆ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ (ಭಾಗ-IV A) ಪ್ರಕಟಿಸಲು ಆದೇಶಿಸಲಾಗಿದೆ,-

### ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958

### ವಿಷಯಾನುಕ್ರಮಣಿಕೆ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

**ಅಧ್ಯಾಯ I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅಧಿನಿಯಮದ ಅನ್ವಯ
3. ಪರಿಭಾಷೆಗಳು

## ಅಧ್ಯಾಯ II

### ಫೀಜು ಪಾವತಿಸುವ ಹೊಣೆಗಾರಿಕೆ

4. ನ್ಯಾಯಾಲಯಗಳಲ್ಲಿ ಮತ್ತು ಸಾರ್ವಜನಿಕ ಕಚೇರಿಗಳಲ್ಲಿ ಫೀಜು ವಿಧಿಸುವುದು
5. ಅಜಾಗರೂಕತೆಯಿಂದ ಸ್ವೀಕರಿಸಲಾದ ದಸ್ತಾವೇಜುಗಳ ಮೇಲೆ ಫೀಜು
6. ಬಹು ರೀತಿಯ ದಾವೆಗಳು
7. ಮಾರುಕಟ್ಟೆ ಮೌಲ್ಯದ ನಿರ್ಧರಣೆ
8. ವಜಾ ವಟ್ಟು ಅಥವಾ ಎದುರು ಕ್ಲೇಮು
9. ಎರಡು ಅಥವಾ ಹೆಚ್ಚು ಅರ್ಥವಿವರಣೆಗಳಡಿಯಲ್ಲಿ ಬರುವ ದಸ್ತಾವೇಜುಗಳು

## ಅಧ್ಯಾಯ III

### ಫೀಜುಗಳ ನಿರ್ಧರಣೆ

10. ದಾವೆಯ ವಸ್ತು ವಿಷಯದ ವಿವರಗಳ ತಃಖ್ತೆ ಮತ್ತು ಅದರ ಬಗ್ಗೆ ವಾದಿಯು ಮಾಡುವ ಮೌಲ್ಯ ನಿಗದಿ
11. ಯುಕ್ತವಾದ ಫೀಜುಗಳ ಬಗ್ಗೆ ನ್ಯಾಯಾಲಯಗಳಲ್ಲಿ ತೀರ್ಮಾನ
12. ರೂಪಿತ ವಿವಾದಾಂಶಗಳ ಮೇಲೆ ಹೆಚ್ಚಿನ ಫೀಜು
13. ಕ್ಲೇಮಿನ ಭಾಗವನ್ನು ಬಿಟ್ಟುಕೊಡುವುದು
14. ಲಿಖಿತ ವಿವರಣ ಪತ್ರಗಳ ಮೇಲೆ ಪಾವತಿಮಾಡಬಹುದಾದ ಫೀಜು
15. ಅಪೀಲು, ಇತ್ಯಾದಿಗಳ ಮೇಲೆ ಪಾವತಿಸಬಹುದಾದ ಫೀಜು
16. ಮನವಿಗಳು, ಆವೇದನ ಪತ್ರಗಳು, ಇತ್ಯಾದಿಗಳ ಮೇಲೆ ಪಾವತಿಸಬಹುದಾದ ಫೀಜು.
17. ನ್ಯಾಯಾಲಯ ಫೀಜು ಪರೀಕ್ಷಕರು
18. ತನಿಖೆ ಮತ್ತು ಕಾರ್ಯಾಜ್ಞೆ (ಕಮೀಷನ್)
19. ರಾಜ್ಯ ಸರ್ಕಾರಕ್ಕೆ ನೋಟೀಸು

## ಅಧ್ಯಾಯ IV

### ಫೀಜಿನ ಪರಿಗಣನೆ

20. ಫೀಜನ್ನು ಹೇಗೆ ಲೆಕ್ಕಮಾಡುವುದು
21. ಹಣಕ್ಕೆ ಸಂಬಂಧಿಸಿದ ದಾವೆಗಳು

22. ಜೀವನಾಂಶ ಮತ್ತು ವರ್ಷಾಶನಗಳಿಗೆ ಸಂಬಂಧಿಸಿದ ದಾವೆಗಳು
23. ಚರ ಸ್ವತ್ತಿಗೆ ಸಂಬಂಧಿಸಿದ ದಾವೆಗಳು
24. ಘೋಷಣೆಗೆ ಸಂಬಂಧಿಸಿದ ದಾವೆಗಳು
25. ದತ್ತಕದ ದಾವೆಗಳು
26. ನಿರ್ಬಂಧಕಾಜ್ಞೆಗಾಗಿ ದಾವೆಗಳು
27. ನ್ಯಾಸದ ಸ್ವತ್ತಿಗೆ ಸಂಬಂಧಪಟ್ಟ ದಾವೆಗಳು
28. ನಿರ್ದಿಷ್ಟ ಪರಿಹಾರ ಅಧಿನಿಯಮ, 1877ರ ಮೇರೆಗೆ ಸ್ವಾಧೀನಕ್ಕಾಗಿನ ದಾವೆಗಳು
29. ಅನ್ಯಥಾ ಉಪಬಂಧಿಸಿರದ ಸ್ವಾಧೀನಕ್ಕಾಗಿ ದಾವೆಗಳು
30. ಅನುಭೋಗಗಳಿಗೆ ಸಂಬಂಧಿಸಿದ ದಾವೆಗಳು
31. ಪೂರ್ವ ಕ್ರಯಾಧಿಕಾರಕ್ಕೆ ಸಂಬಂಧಿಸಿದ ದಾವೆಗಳು
32. ಅಡಮಾನಗಳಿಗೆ ಸಂಬಂಧಿಸಿದ ದಾವೆಗಳು
33. ಲೆಕ್ಕಪತ್ರಗಳಿಗೆ ಸಂಬಂಧಿಸಿದ ದಾವೆಗಳು
34. ಪಾಲುಗಾರಿಕೆಯ ವಿಘಟನೆಗೆ ಸಂಬಂಧಿಸಿದ ದಾವೆಗಳು
35. ವಿಭಜನೆಯ ದಾವೆಗಳು
36. ಜಂಟಿ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಗಳು
37. ಆಡಳಿತಕ್ಕೆ ಸಂಬಂಧಿಸಿದ ದಾವೆಗಳು
38. ಡಿಕ್ರಿಗಳು, ಇತ್ಯಾದಿಗಳ ರದ್ದಿಯಾತಿಗೆ ಸಂಬಂಧಿಸಿದ ದಾವೆಗಳು
39. ಜಪ್ತಿ, ಇತ್ಯಾದಿಗಳನ್ನು ತಳ್ಳಿ ಹಾಕುವುದಕ್ಕೆ ಸಂಬಂಧಿಸಿದ ದಾವೆಗಳು
40. ನಿರ್ದಿಷ್ಟ ನಿರ್ವಹಣೆಗೆ ಸಂಬಂಧಿಸಿದ ದಾವೆಗಳು
41. ಭೂ ಮಾಲೀಕರ ಮತ್ತು ಗೇಣಿದಾರರ ನಡುವಿನ ದಾವೆಗಳು
42. ಮಧ್ಯಕಾಲೀನ ಲಾಭಗಳಿಗೆ ಸಂಬಂಧಿಸಿದ ದಾವೆಗಳು
43. ರೆವಿನ್ಯೂ ರಿಜಿಸ್ಟರುಗಳಲ್ಲಿರುವ ನಮೂದನೆಯನ್ನು ಬದಲಾಯಿಸುವ ಅಥವಾ ರದ್ದುಮಾಡುವುದಕ್ಕಾಗಿ ದಾವೆಗಳು ಮತ್ತು ರೆವಿನ್ಯೂ ನ್ಯಾಯಾಲಯಗಳಲ್ಲಿಯ ಕೆಲವು ದಾವೆಗಳು
44. ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ದಾವೆಗಳು

45. ಅಂತರ್ವಾದ ದಾವೆಗಳು

46. ತೃತೀಯ ಪಕ್ಷಕಾರನ ವ್ಯವಹರಣೆಗಳು

47. ಅನ್ಯಥಾ ಉಪಬಂಧಿಸಿರದ ದಾವೆಗಳು

48. ಪರಿಹಾರಕ್ಕೆ ಸಂಬಂಧಿಸಿದಂತೆ ತೀರ್ಮಾನ, ಐತೀರ್ಪು ಅಥವಾ ಆದೇಶದ ವಿರುದ್ಧವಾಗಿರುವ ಅಪೀಲು ವಿವರಣಪತ್ರದ ಮೇಲೆ ಫೀಜು

49. ಅಪೀಲುಗಳು

**ಅಧ್ಯಾಯ V**

**ದಾವೆಗಳ ಮೌಲ್ಯ ನಿಗದಿ**

50. ಬೇರೆ ರೀತಿ ಉಪಬಂಧಿಸಲಾಗಿರದ ದಾವೆಗಳು

51. ಅಧಿಕಾರವ್ಯಾಪ್ತಿಯ ಉದ್ದೇಶಗಳಿಗಾಗಿ ದಾವೆಯ ಅಥವಾ ಅಪೀಲಿನ ಮೌಲ್ಯವನ್ನು ಯುಕ್ತವಾಗಿ ಮಾಡಿರಲಿಲ್ಲವೆಂದು, ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಆಕ್ಷೇಪ ಎತ್ತಿದಲ್ಲಿ ಪ್ರಕ್ರಿಯೆ

**ಅಧ್ಯಾಯ VI**

**ಪ್ರೊಬೇಟ್ ಗಳು, ಆಡಳಿತ ಅಧಿಕಾರ ಪತ್ರಗಳು ಮತ್ತು ಆಡಳಿತ ಅಧಿಕಾರ ಪ್ರಮಾಣಪತ್ರಗಳು.**

52. ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳಿಗೆ ಸಂಬಂಧಿಸಿದ ಅರ್ಜಿ

53. ಫೀಜು ವಿಧಿಸುವುದು

54. ಪ್ರೊಬೇಟಿನ ಮಂಜೂರಾತಿ

55. ಹಲವಾರು ಮಂಜೂರಾತಿಗಳ ಸಂದರ್ಭಗಳಲ್ಲಿ ಪರಿಹಾರ

56. ಡೆಪ್ಯುಟಿ ಕಮೀಷನರರಿಂದ ವಿಚಾರಣೆ

57. ನ್ಯಾಯಾಲಯಕ್ಕೆ ಅರ್ಜಿ ಮತ್ತು ನ್ಯಾಯಾಲಯದ ಅಧಿಕಾರ

58. ಅತಿ ಕಡಿಮೆ ಫೀಜನ್ನು ಸಂದಾಯ ಮಾಡಿದ್ದ ಪ್ರಕರಣಗಳಲ್ಲಿ ಉಪಬಂಧ

59. [XXX] ಆಡಳಿತಗಾರನು ಯುಕ್ತ ಭದ್ರತೆ ಕೊಡುವುದು

60. ಅತಿ ಹೆಚ್ಚು ಫೀಜನ್ನು ಸಲ್ಲಿಸಿದಾಗ ಪರಿಹಾರ

61. ದಂಡಗಳು, ಇತ್ಯಾದಿಗಳ ವಸೂಲಾತಿ

62. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ಅಧಿಕಾರಗಳು

## ಅಧ್ಯಾಯ VII

### ಮರುಪಾವತಿಗಳು ಮತ್ತು ಮಾಫಿಗಳು


63. ವಾದಪತ್ರ, ಇತ್ಯಾದಿಗಳನ್ನು ಹಾಜರುಪಡಿಸುವುದರಲ್ಲಾದ ವಿಳಂಬದ ಸಂದರ್ಭದಲ್ಲಿ ಮರುಪಾವತಿ

64. ಹಿಂದಕ್ಕೆ ಕಳುಹಿಸುವ ಸಂದರ್ಭಗಳಲ್ಲಿ ಮರುಪಾವತಿ

65. ಪ್ರಮಾದದ ಕಾರಣದ ಮೇಲೆ ಮುಂಚಿನ ತೀರ್ಮಾನವನ್ನು ನ್ಯಾಯಾಲಯವು ವಿಪರ್ಯಯಗೊಳಿಸಿದಲ್ಲಿ ಅಥವಾ ಮಾರ್ಪಾಡಿಸಿದಲ್ಲಿ ಮರುಪಾವತಿ

66. ಸುನಾವಣೆಗೆ ಮುಂಚಿನ ಇತ್ಯರ್ಥದ ಮೇಲೆ ಮರುಪಾವತಿ

67. ಪ್ರಮಾದದಿಂದ ಅಥವಾ ಅಜಾಗರೂಕತೆಯಿಂದ ಸಂದಾಯ ಮಾಡಿದ ಫೀಜಿನ ಮರುಪಾವತಿ

68. ವಿಭಜನಾ ಪತ್ರಗಳು

68ಎ. ಎಲ್ಲಾ ಮರುಪಾವತಿಗಳು ಹಾಗೂ ಮಾಫಿಗಳನ್ನು ಇ-ಪಾವತಿಗಳ ಮೂಲಕವೇ ಮಾಡತಕ್ಕದ್ದು

69. ಕೆಲವು ದಸ್ತಾವೇಜುಗಳಿಗೆ ವಿನಾಯಿತಿ

70. ಫೀಜುಗಳನ್ನು ಕಡಿಮೆ ಮಾಡುವ ಅಥವಾ ಮಾಫಿ ಮಾಡುವ ಅಧಿಕಾರ


## ಅಧ್ಯಾಯ VIII

### ಸಂಕೀರ್ಣ


71. ಫೀಜುಗಳ ಸಂಗ್ರಹಣೆ

72. [xxx]

73. ತಿದ್ದುಪಡಿಯಾದ ದಸ್ತಾವೇಜು

74. [xxx]

75. [xxx]

76. [xxx]

76ಎ. ಕಾನೂನು ಸಹಾಯಾರ್ಥ ನಿಧಿ

77. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ

78. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ

79. ನಿರಸನ ಮತ್ತು ಉಳಿಸುವಿಕೆಗಳು

ಅನುಸೂಚಿ I

ಅನುಸೂಚಿ II

ಅನುಸೂಚಿ III

# ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1958ರ ಅಧಿನಿಯಮ 16.-** 1956ರ ನವೆಂಬರ್ 1 ರಂದು ರಾಜ್ಯದ ಪುನರ್ ರಚನೆಯಿಂದಾಗಿ, ಸಂಯೋಜಿತಗೊಂಡ ಹಲವಾರು ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ನ್ಯಾಯಾಲಯ ಫೀಜಿಗೆ ಸಂಬಂಧಿಸಿದ ಹಲವಾರು ಕಾನೂನುಗಳು ಜಾರಿಯಲ್ಲಿರುವುದು ಮುಂದುವರಿದಿದೆ. ಈ ಕಾನೂನುಗಳು, ಹಲವಾರು ಆಯಾಮಗಳಲ್ಲಿ ಒಂದಕ್ಕೊಂದು ಭಿನ್ನವಾಗಿರುತ್ತವೆ. ಪ್ರಸ್ತುತ ವಿಧೇಯಕವು, ಹೊಸ ಮೈಸೂರು ರಾಜ್ಯದಾದ್ಯಂತ ಕಾನೂನಿನಲ್ಲಿ ಹಾಗೂ ನ್ಯಾಯಾಲಯ ಫೀಜುಗಳನ್ನು ವಿಧಿಸುವುದು ಮತ್ತು ದಾವೆಗಳ ಮೌಲ್ಯ ನಿಗದಿಗೆ ಸಂಬಂಧಿಸಿದಂತೆ ದರ ರಚನೆಯಲ್ಲಿ ಏಕರೂಪತೆಯನ್ನು ತರುವ ಉದ್ದೇಶ ಹೊಂದಿದೆ.

ದಾವೆಗಳ ಮೌಲ್ಯ ನಿಗದಿ ಮತ್ತು ನ್ಯಾಯಾಲಯ ಫೀಜುಗಳು, ಇವೆರಡಕ್ಕೂ ಒಂದೇ ಅಧಿನಿಯಮ ಇರುವುದು ಅಪೇಕ್ಷಣೀಯ ಮತ್ತು ಅನುಕೂಲಕರವೆಂದು ಪರಿಗಣಿಸಲಾಗಿದೆ ಮತ್ತು ಆದ್ದರಿಂದ ಎಲ್ಲ ಪ್ರದೇಶಗಳಲ್ಲಿ ಜಾರಿಯಲ್ಲಿರುವ ನ್ಯಾಯಾಲಯ ಫೀಜುಗಳ ಅಧಿನಿಯಮಗಳನ್ನು ಮಾತ್ರವಲ್ಲದೆ, ದಾವೆಗಳ ಮೌಲ್ಯ ನಿಗದಿ ಅಧಿನಿಯಮಗಳನ್ನು ಕೂಡ ನಿರಸನಗೊಳಿಸಲು ಪ್ರಸ್ತಾಪಿಸಲಾಗಿದೆ.

ಅಲ್ಲದೇ, ಯುಕ್ತ ಫೀಜುಗಳನ್ನು ದಶಮಾಂಶ ನಾಣ್ಯಪದ್ಧತಿಗೆ ಸಂಪೂರ್ಣವಾಗಿ ಬದಲಾಯಿಸುವ ದೃಷ್ಟಿಯಿಂದ ಆಣೆ ಮತ್ತು ಪೈಸೆಗಳ ಬದಲಾಗಿ ನಯಾ ಪೈಸೆ ರೂಪದಲ್ಲಿ ನಿಗದಿಪಡಿಸಬೇಕಾಗಿರುತ್ತದೆ.

ಮೇಲೆ ನಮೂದಿಸಲಾದ ಉದ್ದೇಶಗಳನ್ನು ಸಾಧಿಸುವುದು ಈ ವಿಧೇಯಕದ ಉದ್ದೇಶವಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ, ದಿನಾಂಕ 14ನೇ ಜೂನ್ 1957, ಸಂಖ್ಯೆ.173 ಎಂದು ಪುಟ.48 ರಲ್ಲಿ ಪ್ರಕಟಿಸಲಾಗಿದೆ.)

### II

**1958ರ ತಿದ್ದುಪಡಿ ಅಧಿನಿಯಮ 24.-** ಲಭ್ಯವಿಲ್ಲ.

### III

**1964ರ ತಿದ್ದುಪಡಿ ಅಧಿನಿಯಮ 10.-** ಮೈಸೂರು ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಈ ಕೆಳಗೆ ನೀಡಲಾದ ಖಂಡಗಳ ಬಗೆಗಿನ ಟಿಪ್ಪಣಿಗಳು ಪ್ರಸ್ತಾವಿತ ತಿದ್ದುಪಡಿಗಳಿಗೆ ಸಂಬಂಧಿಸಿದ ಕಾರಣಗಳನ್ನು ಸೂಚಿಸುತ್ತವೆ.

ಟಿಪ್ಪಣಿಗಳು ಮತ್ತು ಖಂಡಗಳು.

ಖಂಡ 2.- ಮೈಸೂರು ಸ್ಟಾಂಪು (ತಿದ್ದುಪಡಿ) ಅಧಿನಿಯಮ, 1962ರ ಮೂಲಕ ಮೈಸೂರು ಸ್ಟಾಂಪು ಅಧಿನಿಯಮ, 1957ರಲ್ಲಿ ಸೇರಿಸಲಾದ ಪದಾವಳಿಯ ಪರಿಭಾಷೆಯ ರೀತಿಯಲ್ಲೇ ìಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿî ಎಂಬ ಪರಿಭಾಷೆ ಇರುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಖಂಡ 3.- ಮೈಸೂರು ಸ್ಟಾಂಪು ಅಧಿನಿಯಮದ 3ನೇ ಪ್ರಕರಣದ ಅನುಸಾರವಾಗಿ, ಸರ್ಕಾರದ ಮೂಲಕ ಅಥವಾ ಪರವಾಗಿ ಅಥವಾ ಅದರ ಹೆಸರಿನಲ್ಲಿ ಬರೆದುಕೊಡಲಾದ ಲಿಖಿತ ಪತ್ರಗಳಿಗೆ ಸಂಬಂಧಿಸಿದಂತೆ ಸ್ಟಾಂಪ್ ಸುಂಕವನ್ನು ವಿಧಿಸುವಂತಿರುವುದಿಲ್ಲ. ರಾಜ್ಯ ಸರ್ಕಾರವು ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ತಮ್ಮ ಪದೀಯ ಸಾಮರ್ಥ್ಯದಲ್ಲಿ ಸಂದಾಯಮಾಡತಕ್ಕ ನ್ಯಾಯಾಲಯ ಫೀಜುಗಳಿಗೆ, ಸಂಬಂಧಿಸಿದಂತೆ ಸದೃಶ ವಿನಾಯಿತಿ ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಖಂಡ 4.- 50ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ, ಯಾವ ದಾವೆಯ ಮೌಲ್ಯಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಧಿನಿಯಮದಲ್ಲಿ ಅಥವಾ ಯಾವುದೇ ಇತರೆ ಕಾನೂನಿನಲ್ಲಿ ಅನ್ಯಥಾ ನಿರ್ದಿಷ್ಟ ಉಪಬಂಧವನ್ನು ಉಪಬಂಧಿಸಿರದಿದ್ದಲ್ಲಿ, ಆ ಉದ್ದೇಶಕ್ಕಾಗಿ ಮೌಲ್ಯವು ಮತ್ತು ಅಧಿನಿಯಮದ ಮೇರೆಗೆ ಸಂದಾಯಮಾಡತಕ್ಕ ಫೀಜನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಮೌಲ್ಯವು ಒಂದೇ ಆಗಿರತಕ್ಕದ್ದು. 7ನೇ ಪ್ರಕರಣದ ಮೇರೆಗೆ, ತೋಟದ ಭೂಮಿಯಾಗಿರದಿದ್ದ ಕೃಷಿ ಭೂಮಿಯ ಸಂದರ್ಭದಲ್ಲಿ, ನ್ಯಾಯಾಲಯ ಫೀಜಿನ ಉದ್ದೇಶಕ್ಕಾಗಿ ಮಾರುಕಟ್ಟೆ ಮೌಲ್ಯವು, ಆ ಭೂಮಿಗೆ ಸಂದಾಯಮಾಡತಕ್ಕ ಭೂ ಕಂದಾಯದ ಗುಣಕವಾಗಿರುವುದು. ಈ ಗುಣಕವು ಆ ಭೂಮಿಗಾಗಿನ ವಾಸ್ತವಿಕ ಮಾರುಕಟ್ಟೆ ಮೌಲ್ಯಕ್ಕಿಂತ ತೀರಾ ಕಡಿಮೆಯಾಗಿರುತ್ತದೆ. ತತ್ಪರಿಣಾಮವಾಗಿ ಅತಿ ಹೆಚ್ಚಿನ ಮೌಲ್ಯವಿರುವ ಭೂಮಿಗೆ ಸಂಬಂಧಿಸಿದ ದಾವೆಗಳನ್ನು ಅಧೀನ ನ್ಯಾಯಾಲಯಗಳಲ್ಲಿ ಹೂಡಬೇಕಾಗುತ್ತದೆ. ಅಧಿಕಾರವ್ಯಾಪ್ತಿಯ ಉದ್ದೇಶಕ್ಕಾಗಿ ಅಂಥ ಭೂಮಿಗಳ ವಾಸ್ತವಿಕ ಮಾರುಕಟ್ಟೆ ಮೌಲ್ಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮತ್ತು ನ್ಯಾಯಾಲಯ ಫೀಜುಗಳ ಸಂದಾಯದ ಉದ್ದೇಶಗಳಿಗಾಗಿ ನಿರ್ಧರಿಸಲಾದ ಮಾರುಕಟ್ಟೆ ಮೌಲ್ಯವಲ್ಲದೆಂದು ಪರಿಗಣಿಸಲಾಗಿದೆ. ಇದು ಹಿರಿಯ ನ್ಯಾಯಿಕ ಅಧಿಕಾರಿಯಿಂದ ವಿವಾದದ ನ್ಯಾಯ ನಿರ್ಣಯ ಪಡೆಯಲು ಪಕ್ಷಕಾರರಿಗೆ ಸಾಧ್ಯವಾಗುವಂತೆ ಮಾಡುತ್ತದೆ.

ಖಂಡ 6.- 70ನೇ ಪ್ರಕರಣದ (1)ನೇ ಉಪಪ್ರಕರಣವು ಅಧಿನಿಯಮದ ಮೇರೆಗೆ ವಿಧಿಸಬಹುದಾದ ಎಲ್ಲ ಅಥವಾ ಯಾವುದೇ ಫೀಜುಗಳನ್ನು ಕಡಿಮೆ ಮಾಡುವ ಅಥವಾ ಮಾಫಿ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತದೆ. ಇದು, ದಸ್ತಾವೇಜುಗಳ ನಿರ್ದಿಷ್ಟ ವರ್ಗಗಳ ಅಥವಾ ಯಾವುದೇ ವರ್ಗಕ್ಕೆ ಸೇರಿದ ದಸ್ತಾವೇಜುಗಳ ಸಂಬಂಧದಲ್ಲಿ ಅಥವಾ ಅಂಥ ವರ್ಗದ ವ್ಯಕ್ತಿಗಳ ಅಥವಾ ಸದಸ್ಯರ ಯಾವುದೇ ನಿರ್ದಿಷ್ಟ ವರ್ಗವು ಸಲ್ಲಿಸಿದ, ಪ್ರದರ್ಶಿಸಿದ ಅಥವಾ ದಾಖಲು ಮಾಡಿದ ಅಥವಾ ಅದರ ಮೇರೆಗೆ ಕಾರ್ಯನಿರ್ವಹಿಸಿದ ಅಥವಾ ಅವರಿಗೆ ಒದಗಿಸಿದ ದಸ್ತಾವೇಜುಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದಾಯಮಾಡತಕ್ಕ ಫೀಜುಗಳನ್ನು

ಕಡಿಮೆ ಮಾಡಲು ಅಥವಾ ಅವುಗಳನ್ನು ಮಾಫಿ ಮಾಡಲು ರಾಜ್ಯ ಸರ್ಕಾರವನ್ನು ಸಮರ್ಥಗೊಳಿಸುವುದಿಲ್ಲ. ಆದ್ದರಿಂದ, ಅಂಥ ದಸ್ತಾವೇಜುಗಳ ವರ್ಗಕ್ಕೆ ಸಂಬಂಧಿಸಿದಂತೆ ಅಥವಾ ವ್ಯಕ್ತಿಗಳ ನಿರ್ದಿಷ್ಟ ವರ್ಗವು ದಸ್ತಾವೇಜಿಗೆ ಸಂಬಂಧಿಸಿದಂತೆ ಸಂದಾಯಮಾಡತಕ್ಕ ನ್ಯಾಯಾಲಯ ಫೀಜನ್ನು ಕಡಿಮೆ ಮಾಡಲು ಅಥವಾ ಅವುಗಳನ್ನು ಮಾಫಿ ಮಾಡಲು ಸಾಧ್ಯವಾಗಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಫೀಜುಗಳನ್ನು ಕಡಿಮೆ ಮಾಡಲು ಅಥವಾ ಅವುಗಳನ್ನು ಮಾಫಿ ಮಾಡಲು ಸರ್ಕಾರಕ್ಕೆ ಸಾಧ್ಯವಾಗುವಂತೆ ಮೈಸೂರು ಸ್ಟಾಂಪು ಅಧಿನಿಯಮ, 1957ರ 9ನೇ ಪ್ರಕರಣದ (1) (ಎ) ಉಪಪ್ರಕರಣಕ್ಕೆ ಮಾಡಲಾದ ತಿದ್ದುಪಡಿಯ ರೀತಿಯಲ್ಲಿಯೇ ಈ ಉಪಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಖಂಡ 7.- 75ನೇ ಪ್ರಕರಣದ ಮೇರೆಗೆ, ಹಾನಿಗೊಂಡ ಅಥವಾ ಹಾಳಾದ ಸ್ಟಾಂಪುಗಳಿಗಾಗಿ ರಿಯಾಯಿತಿ ನೀಡಲಾಗಿರುವಲ್ಲಿ ಅಥವಾ ಈಗಾಗಲೇ ಸಂದಾಯ ಮಾಡಿದ ಫೀಜನ್ನು ಯಾರೇ ವ್ಯಕ್ತಿಗೆ ಮರುಪಾವತಿಸಬೇಕೆಂದು ನಿರ್ದೇಶಿಸಿದಲ್ಲಿ, ಮರುಪಾವತಿಯನ್ನು ಮಾಡುವಾಗ, ಪ್ರತಿಯೊಂದು ರೂಪಾಯಿ ಅಥವಾ ಅದರ ಭಾಗಕ್ಕೆ ಆರು ನಯಾ ಪೈಸದ ದರದಲ್ಲಿ ಕಡಿತವನ್ನು ಮಾಡಲಾಗುತ್ತದೆ. ಮೈಸೂರು ಸ್ಟಾಂಪು ಅಧಿನಿಯಮದ ಮೇರೆಗೆ ನ್ಯಾಯಿಕವಲ್ಲದ ಸ್ಟಾಂಪುಗಳ ಮರುಪಾವತಿ ಮಾಡುವಂತಹುದೇ ಸಂದರ್ಭಗಳಲ್ಲಿ ಕಳೆಯಲಾದ ದರವನ್ನು, ಒಂದು ರೂಪಾಯಿಗೆ ಅಥವಾ ಅದರ ಭಾಗಕ್ಕೆ ಹತ್ತು ನಯಾ ಪೈಸದಂತೆ ನಿಗದಿಪಡಿಸಲಾಗಿರುವುದರಿಂದ, ಎರಡೂ ಸಂದರ್ಭಗಳಲ್ಲಿ ಕಳೆಯಲಾದ ದರದಲ್ಲಿ ಏಕರೂಪತೆಯನ್ನು ತರುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಈ ಉದ್ದೇಶಕ್ಕಾಗಿ 75ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಖಂಡ 8.- ಉಚ್ಚ ನ್ಯಾಯಾಲಯವು, 77ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡಕ್ಕೆ ಅನುಸಾರವಾಗಿ, ತನ್ನ ಅಪೀಲು ಅಧಿಕಾರವ್ಯಾಪ್ತಿಯಲ್ಲಿ ಸಂದಾಯಮಾಡತಕ್ಕ ಫೀಜುಗಳಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಲು ಉಚ್ಚ ನ್ಯಾಯಾಲಯವು ನಿಯಮಗಳನ್ನು ರಚಿಸಬಹುದು. ಉಚ್ಚ ನ್ಯಾಯಾಲಯವು ಮೂಲ ಅಧಿಕಾರವ್ಯಾಪ್ತಿಯಲ್ಲಿ ಅದು ಹೊರಡಿಸಿದ ಆದೇಶಿಕೆಗಳನ್ನು ಜಾರಿ ಮಾಡುವುದಕ್ಕಾಗಿ ಮತ್ತು ಕಾರ್ಯಗತಗೊಳಿಸುವುದಕ್ಕಾಗಿ ಪಾವತಿಸತಕ್ಕ ಫೀಜುಗಳಿಗಾಗಿ ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸುವುದಕ್ಕಾಗಿ ಯಾವುದೇ ಉಪಬಂಧವಿರುವುದಿಲ್ಲ. ಆದ್ದರಿಂದ, ಈ ಖಂಡದಲ್ಲಿ, "ಅದರ ಅಪೀಲು ಅಧಿಕಾರವ್ಯಾಪ್ತಿಯಲ್ಲಿ" ಎಂಬ ಪದಗಳನ್ನು ತೆಗೆದುಹಾಕಲು ಪ್ರಸ್ತಾವಿಸಲಾಗಿದೆ.

ಖಂಡ 9, ಬಾಬು (1).- 1ನೆಯ ಅನುಸೂಚಿಯ 5ನೇ ಅನುಚ್ಛೇದದ ಅನುಸಾರವಾಗಿ, ತೀರ್ಪಿನ ಪುನರವಲೋಕನಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯ ಮೇಲೆ, ಪುನರವಲೋಕನಕ್ಕಾಗಿನ ಅರ್ಜಿಯಲ್ಲಿ ಕೋರಿದ ಪರಿಹಾರವೂ ಒಳಗೊಳ್ಳುವ ಅಪೀಲಿನ ವಾದಪತ್ರ ಅಥವಾ ವಿವರಣ ಪತ್ರದ ಮೇಲೆ ವಿಧಿಸತಕ್ಕ ಫೀಜಿನ ಅರ್ಧದಷ್ಟು ಸಂದಾಯ ಮಾಡಬೇಕಾಗಿರುತ್ತದೆ. ಪುನರವಲೋಕನಕ್ಕಾಗಿನ ಅರ್ಜಿಯಲ್ಲಿ ಕೋರಿದ ಪರಿಹಾರಕ್ಕೆ ಸಂಬಂಧಿಸಿದಂತೆ ವಿಧಿಸತಕ್ಕ ಫೀಜನ್ನು ನಿರ್ಧರಿಸುವುದು ಕಷ್ಟಕರವಾಗಿದೆ. ಆದ್ದರಿಂದ, "ಪುನರವಲೋಕನಕ್ಕೆ ಸಲ್ಲಿಸಿದ

ಅರ್ಜಿಯಲ್ಲಿ ಕೋರಿದ ಪರಿಹಾರವೂ ಒಳಗೊಂಡಂತೆ" ಎಂಬ ಪದಗಳನ್ನು ತೆಗೆದುಹಾಕಲು ಮತ್ತು ಅರ್ಜಿಯನ್ನು ಡಿಕ್ರಿಯ ದಿನಾಂಕದಿಂದ ತೊಂಭತ್ತನೇ ದಿನಕ್ಕೆ ಮೊದಲು ಸಲ್ಲಿಸಿದಾಗ ಮಾತ್ರ ಫೀಜಿನ ಅರ್ಧದಷ್ಟು ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸಲು ಸಹ ಪ್ರಸ್ತಾಪಿಸಲಾಗಿದೆ.

ಬಾಬು (2).- ಡಿಕ್ರಿಯ ದಿನಾಂಕದಿಂದ ತೊಂಭತ್ತನೇ ದಿನದಂದು ಅಥವಾ ತರುವಾಯ ಪುನರವಲೋಕನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಸಲ್ಲಿಸಿದ ಅರ್ಜಿಯ ಮೇಲೆ ಪೂರ್ತಿ ಫೀಜನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದಕ್ಕೆ ಪ್ರಸ್ತಾವಿಸಲಾಗಿದೆ.

**ಖಂಡ 10, ಬಾಬು (1).-** ಯಾವುದೇ ನ್ಯಾಯಾಲಯದಿಂದ ಅಥವಾ ಸಾರ್ವಜನಿಕ ಕಚೇರಿಯಿಂದ ಪಡೆದುಕೊಂಡ ಆದೇಶಗಳ ಪ್ರತಿಗಳಿಗೂ ಸಹ ಅದರಲ್ಲಿ ನಿರ್ದಿಷ್ಟಪಡಿಸಿದಂತೆ ನ್ಯಾಯಾಲಯ ಫೀಜು ಸ್ಟಾಂಪುಗಳೊಂದಿಗೆ ಮುದ್ರೆಯೊತ್ತಿರಬೇಕೆಂಬುದನ್ನು ಸ್ಪಷ್ಟಪಡಿಸಲು, IIನೇ ಅನುಸೂಚಿಯ 9ನೇ ಅನುಚ್ಛೇದದಲ್ಲಿ ಉಪಬಂಧ ಕಲ್ಪಿಸಿರುವುದನ್ನು ಸ್ಪಷ್ಟಪಡಿಸುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಬಾಬು (2).- 10ನೇ ಅನುಚ್ಛೇದದಲ್ಲಿನ (ಎ) ಖಂಡದಲ್ಲಿ, ಪಾನನಿರೋಧ ಇಲಾಖೆಗೂ ಸಹ ಉಲ್ಲೇಖಿಸುವುದು ಅವಶ್ಯಕವಾಗಿದೆ.

ಖಂಡ (ಸಿ) ಯಲ್ಲಿ, ಬೇರೆ ಬೇರೆ ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಆ ಪ್ರಾಧಿಕಾರಗಳ ಅಧಿಕಾರಿಗಳಿಗೆ ಉಲ್ಲೇಖಿಸುವುದು ಅವಶ್ಯಕವಾಗಿದೆ. ಈ ಖಂಡವನ್ನು, ತದನುಸಾರವಾಗಿ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಖಂಡ (ಜೆ) ಯಲ್ಲಿ, ರೆವಿನ್ಯೂ ಮಂಡಳಿಯ ಉಲ್ಲೇಖವು, ರೆವಿನ್ಯೂ ಅಪೀಲು ನ್ಯಾಯಾಧಿಕರಣದ ಉಲ್ಲೇಖವಾಗಿರಬೇಕು. ಆದ್ದರಿಂದ, ಈ ಖಂಡವನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಬಾಬು (3).- 11ನೇ ಅನುಚ್ಛೇದದಲ್ಲಿ (ಬಿ) ಖಂಡದಲ್ಲಿ, ನ್ಯಾಯಾಲಯಕ್ಕೆ ಅಥವಾ ಯಾವುದೇ ಮಂಡಳಿಗೆ ಅಥವಾ ಯಾರೇ ಕಾರ್ಯನಿರ್ವಾಹಕ ಅಧಿಕಾರಿಗೆ ಉಲ್ಲೇಖವಿರುತ್ತದೆ. ಮಂಡಳಿ, ನ್ಯಾಯಾಧಿಕರಣ, ಶಾಸನಬದ್ಧ ಪ್ರಾಧಿಕಾರ ಅಥವಾ ಸರ್ಕಾರಿ ಅಧಿಕಾರಿಗೆ ಉಲ್ಲೇಖಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಈ ಖಂಡವನ್ನು ತದನುಸಾರವಾಗಿ ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಖಂಡ (ಇ)ಯಲ್ಲಿ, ಡೆಪ್ಯುಟಿ ಕಮೀಷನರ್‌ರ ಕಚೇರಿಗೆ ಉಲ್ಲೇಖವಿರುತ್ತದೆ. ಇತರೆ ರೆವಿನ್ಯೂ ಅಧಿಕಾರಿಗಳ ಕಚೇರಿಗಳನ್ನು ಸಹ ಇದರಲ್ಲಿ ಸೇರ್ಪಡೆ ಮಾಡುವುದು ಅವಶ್ಯವಾಗಿದೆ. ಆದ್ದರಿಂದ ಈ ಖಂಡವನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಖಂಡ (ಎಫ್)ನ ಅನುಸಾರವಾಗಿ, ಇದರಲ್ಲಿ ಉಲ್ಲೇಖಿಸಲಾದ ಅರ್ಜಿಗೆ ಅಥವಾ ಮನವಿಗೆ, ಅರವತ್ತೆರಡು ನಯಾಪೈಸೆ ಮೌಲ್ಯದ ನ್ಯಾಯಾಲಯ ಫೀಜಿನೊಂದಿಗಿನ ಮುದ್ರೆಯೊತ್ತಿರಬೇಕಾಗಿರುತ್ತದೆ. ಈ ಫೀಜು, ಐದು

ನಯಾಪೈಸೆ ಗುಣಕದಲ್ಲಿರಬೇಕಾಗಿರುವುದರಿಂದ. ಈ ಅರ್ಜಿಗಳಿಗಾಗಿ ಅಥವಾ ಮನವಿಗಳಿಗಾಗಿ ಎಪ್ಪತ್ತೈದು ನಯಾ ಪೈಸೆಯಷ್ಟು ಫೀಜನ್ನು ನಿಗದಿಪಡಿಸಲು ಪ್ರಸ್ತಾಪಿಸಲಾಗಿದೆ.

ಪ್ರಸ್ತುತ, ನ್ಯಾಯವಾದಿಗಳು, ನ್ಯಾಯವಾದಿಗಳ ಅಧಿನಿಯಮದ ಮೇರೆಗೆ ವಕೀಲರ ಪರಿಷತ್ತಿನಿಂದ ನೋಂದಣಿಯಾಗುವುದರಿಂದ (ಪಿ) ಖಂಡವನ್ನು ಬಿಟ್ಟುಬಿಡಲು ಪ್ರಸ್ತಾಪಿಸಲಾಗಿದೆ.

(ವಿ) ಖಂಡದಲ್ಲಿ, ಹುಬ್ಬಳಿ-ಧಾರವಾಡ ನಗರಪಾಲಿಕೆಯ ಮತ್ತು ತಾಲ್ಲೂಕು ಮಂಡಳಿಗಳ ಅಸ್ತಿತ್ವವನ್ನು ಪರಿಗಣಿಸಿ, ತಿದ್ದುಪಡಿಗಳನ್ನು ಮಾಡುವುದು ಅವಶ್ಯವೆಂದು ಪ್ರಸ್ತಾಪಿಸಲಾಗಿದೆ.

ಬಾಬು (4).- 16ನೇ ಅನುಚ್ಛೇದ, ಬಾಬು (ಎ) ನಲ್ಲಿ, ವಕಾಲತ್ತನ್ನು, ಯಾವುದೇ ಶಾಸನಾತ್ಮಕ ಅಥವಾ ಇತರೆ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಸಲ್ಲಿಸಿದಾಗ, ಒಂದು ರೂಪಾಯಿಯ ನ್ಯಾಯಾಲಯ ಫೀಜಿನೊಂದಿಗೆ ಸಹ ಮುದ್ರೆಯೊತ್ತಿರಬೇಕಾಗಿರುತ್ತದೆಂಬುದನ್ನು ಸ್ಪಷ್ಟಪಡಿಸಲು ತಿದ್ದುಪಡಿ ಮಾಡಬೇಕೆಂದು ಪ್ರಸ್ತಾಪಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 16ನೇ ಡಿಸೆಂಬರ್ 1963ರ ಸಂಖ್ಯೆ. 166 ಎಂದು ಪುಟ.6-9 ರಲ್ಲಿ ಪ್ರಕಟಿಸಲಾಗಿದೆ.)

**IV**

**1966ರ ತಿದ್ದುಪಡಿ ಅಧಿನಿಯಮ 27.- ಟಿಪ್ಪ tÂ** ಈ ಅಧಿನಿಯಮದ ಮೂಲಕ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 27)ನ್ನು ಅಧಿನಿಯಮಿಸಲಾಗಿದೆ. ಇದರಲ್ಲಿ ಸದರಿ ಅಧಿನಿಯಮಕ್ಕೆ ಕೆಲವು ತತ್ಪರಿಣಾಮವಾದ ತಿದ್ದುಪಡಿಗಳನ್ನು ಮಾಡಲಾಗಿದೆ.

**V**

**1969ರ ತಿದ್ದುಪಡಿ ಅಧಿನಿಯಮ 11.-** ಮೈಸೂರು ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ರ 48ನೇ ಪ್ರಕರಣಕ್ಕೆ ಅನುಸಾರವಾಗಿ, ಸಾರ್ವಜನಿಕ ಉದ್ದೇಶಕ್ಕಾಗಿ ಸ್ವತ್ತಿನ ಆರ್ಜನೆಗಾಗಿ ಯಾವುದೇ ಅಧಿನಿಯಮದ ಮೇರೆಗೆ ನೀಡಲಾದ ನಷ್ಟ ಪರಿಹಾರಕ್ಕೆ ಸಂಬಂಧಿಸಿದ ಆದೇಶದ ವಿರುದ್ಧ ಅಪೀಲು ವಿವರಣ ಪತ್ರಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜನ್ನು, ನೀಡಲಾದ ಐತೀರ್ಪಿನ ಮೊಬಲಗು ಮತ್ತು ಅಪೀಲುದಾರನು ಕ್ಲೇಮು ಮಾಡಿದ ಮೊಬಲಗು-ಇವುಗಳ ನಡುವಿನ ವ್ಯತ್ಯಾಸದ ಮೇಲೆ ಲೆಕ್ಕಹಾಕತಕ್ಕದ್ದು. ನರಸಿಯಪ್ಪ ಹಾಗೂ ಇತರರು, ಮೊಕದ್ದಮೆಯಲ್ಲಿ ಮೊದಲನೇ ಸಂಕೀರ್ಣ ಅಪೀಲುಗಳಲ್ಲಿ, ಉಚ್ಚ ನ್ಯಾಯಾಲಯವು, ಈ ಪ್ರಕರಣವು ಸಿವಿಲ್ ನ್ಯಾಯಾಲಯಗಳ ಆದೇಶಗಳಿಗೆ ಮಾತ್ರ ಅನ್ವಯವಾಗುತ್ತದೆಯೇ ಹೊರತು ನಷ್ಟಪರಿಹಾರಕ್ಕೆ ಸಂಬಂಧಿಸಿದ ಮಧ್ಯಸ್ಥಿಕೆದಾರರ ಐತೀರ್ಪುಗಳಿಗಲ್ಲವೆಂದು ತೀರ್ಮಾನಿಸಿತು. ಆದ್ದರಿಂದ 48ನೇ ಪ್ರಕರಣದ ವ್ಯಾಪ್ತಿಯೊಳಗೆ, ಐತೀರ್ಪುಗಳ ಹಾಗೂ ನಿರ್ಣಯಗಳು ಒಳಗೊಳ್ಳುವಂತೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 18ನೇ ಜುಲೈ 1968ರ ಪುಟ ಸಂಖ್ಯೆ: 33ರಲ್ಲಿ ಪ್ರಕಟಿಸಲಾಗಿದೆ.)

### VI

**1973ರ ತಿದ್ದುಪಡಿ ಅಧಿನಿಯಮ 3.-** ಸಂವಿಧಾನದ 227ನೇ ಅನುಚ್ಛೇದದ ಮೇರೆಗೆ ಹೇಬಿಯಸ್ ಕಾರ್ಪಸ್ ರಿಟ್ ಅಥವಾ ಅರ್ಜಿಯನ್ನು ಹೊರತುಪಡಿಸಿ ರಿಟ್‌ಗಾಗಿ, ಸಂವಿಧಾನದ 228ನೇ ಅನುಚ್ಛೇದದ ಮೇರೆಗಿನ ಅರ್ಜಿಗಾಗಿ, ಮೈಸೂರು ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ರ ಮೇರೆಗೆ ಸಂದಾಯ ಮಾಡಬೇಕಾದ ನ್ಯಾಯಾಲಯ ಫೀಜನ್ನು ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 14ನೇ ಸೆಪ್ಟೆಂಬರ್ 1972ರ ಪುಟಸಂಖ್ಯೆ. 30 ರಲ್ಲಿ ಪ್ರಕಟಿಸಲಾಗಿದೆ.)

### VII

**1973ರ ತಿದ್ದುಪಡಿ ಅಧಿನಿಯಮ 12.-** ಪ್ರಸ್ತುತ ಭಾರತ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡದ ಮತ್ತು ಅನುಚ್ಛೇದ 227 ಮತ್ತು 228ರ ಮೇರೆಗೆ ಎಲ್ಲ ಅರ್ಜಿಗಳನ್ನು ಕುರಿತಂತೆ, ಇಬ್ಬರು ನ್ಯಾಯಾಧೀಶರ ನ್ಯಾಯಪೀಠದ ಮೂಲಕ ವ್ಯವಹರಿಸಲಾಗುತ್ತಿದೆ. ಕೇರಳ, ಮದ್ರಾಸ್, ನಾಗಪುರ, ಅಲಹಾಬಾದ್, ದೆಹಲಿ, ಕಲ್ಕತ್ತಾ, ಆಂಧ್ರ ಪ್ರದೇಶ ಮತ್ತು ಬಾಂಬೆ ಉಚ್ಚ ನ್ಯಾಯಾಲಯಗಳಲ್ಲಿ, ಅಂಥ ಅರ್ಜಿಗಳನ್ನು ಕುರಿತಂತೆ ಏಕಸದಸ್ಯ ಪೀಠದ ನ್ಯಾಯಾಧೀಶರು ವ್ಯವಹರಿಸುತ್ತಿದ್ದು, ಅಪೀಲು ಮಾಡುವ ಹಕ್ಕನ್ನು ಬಾಧಿತ ವ್ಯಕ್ತಿಗೆ ನೀಡಲಾಗಿದ್ದು, ಅಂಥ ಅಪೀಲುಗಳನ್ನು ಕುರಿತಂತೆ ಇಬ್ಬರು ನ್ಯಾಯಾಧೀಶರ ನ್ಯಾಯಪೀಠವು ವ್ಯವಹರಿಸುತ್ತಿರುತ್ತಿದೆ. 1957ರಲ್ಲಿ ಮತ್ತು 1960ರಲ್ಲಿ ನಡೆದ ಕಾನೂನು ಸಚಿವರುಗಳ ಸಮ್ಮೇಳನದಲ್ಲಿ, ಅಂಥ ಅರ್ಜಿಗಳ ಬಗ್ಗೆ, ಇಬ್ಬರು ನ್ಯಾಯಾಧೀಶರ ನ್ಯಾಯಪೀಠಕ್ಕೆ ಅಪೀಲನ್ನು ಸಲ್ಲಿಸುವ ಹಕ್ಕು ಸಹಿತ, ಏಕಸದಸ್ಯ ಪೀಠದ ನ್ಯಾಯಾಧೀಶನು ವ್ಯವಹರಿಸಬೇಕೆಂಬ ಅಭಿಪ್ರಾಯಕ್ಕೆ ಬರಲಾಯಿತು. ಕಾನೂನು ಆಯೋಗವು, ತನ್ನ ಹದಿನಾಲ್ಕನೇ ವರದಿ ಸಂಪುಟ-II ರಲ್ಲಿ ಈ ಪ್ರಶ್ನೆಯನ್ನು ಪರ್ಯಾಲೋಚಿಸುವಾಗ, ನಿರ್ದಿಷ್ಟ ಮದ್ರಾಸಿಗೆ ಸಂಬಂಧಿಸಿದಂತೆ ಉಲ್ಲೇಖ ಮಾಡುತ್ತಾ ಅಂಥ ಕಾರ್ಯವಿಧಾನದಿಂದ ತೃಪ್ತಿಕರವಾದ ಫಲಿತಾಂಶವನ್ನು ಪಡೆಯಲಾಗಿದೆ ಎಂದು ತಿಳಿಸಿತು. ರಿಟ್ ಅರ್ಜಿಗಳ ಮತ್ತು ಸಂಬಂಧಿಸಿದ ವಿಷಯಗಳ ವಿಲೆ ಮಾಡುವ ತತ್ವಗಳನ್ನು, ವಿವಿಧ ಉಚ್ಚ ನ್ಯಾಯಾಲಯಗಳ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳ ಮೂಲಕ ಈಗ ಸಾಕಷ್ಟು ಸ್ಪಷ್ಟಪಡಿಸಲಾಗಿರುವುದರಿಂದ, ಅಪೀಲನ್ನು ಸಲ್ಲಿಸುವ ಹಕ್ಕಿನೊಂದಿಗೆ, ಭಾರತ ಸಂವಿಧಾನದ 226ನೇ ಅನುಚ್ಛೇದ ಖಂಡ (1)ರ ಮೇರೆಗಿನ ಅರ್ಜಿಗಳಿಗೆ (ಕೋರಿಕೆಯು ಹೇಬಿಯಸ್ ಕಾರ್ಪಸ್ ಸ್ವರೂಪದಲ್ಲಿಯ ರಿಟ್ ಹೊರಡಿಸುವುದಕ್ಕಾಗಿದ್ದ ಹೊರತು) ವ್ಯವಹರಿಸಲು ಏಕಸದಸ್ಯ ಪೀಠದ ನ್ಯಾಯಾಧೀಶನಿಗೆ ಮತ್ತು 227 ಹಾಗೂ 228ನೇ ಅನುಚ್ಛೇದಗಳ ಮೇರೆಗಿನ ಅರ್ಜಿಗಳಿಗೆ ಸಂಬಂಧಿಸಿದಂತೆ

ವ್ಯವಹರಿಸಲು ಇಬ್ಬರು ನ್ಯಾಯಾಧೀಶರ ನ್ಯಾಯಪೀಠಕ್ಕೆ ಅಧಿಕಾರ ಕೊಡುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ. ಈ ಕಾರ್ಯವಿಧಾನದಿಂದಾಗಿ, ಅಂಥ ಅರ್ಜಿಗಳನ್ನು ಅತಿ ಶೀಘ್ರವಾಗಿ ವಿಲೇವಾರಿ ಮಾಡಬಹುದಾಗಿದೆ ಮತ್ತು ಸಂವಿಧಾನದ (ಮೂವತ್ತನೇ) ತಿದ್ದುಪಡಿಯನ್ನು ಗಮನಿಸಿಲಾಗಿ ಬಾಧಿತ ವ್ಯಕ್ತಿಯು, ಸರ್ವೋಚ್ಚ ನ್ಯಾಯಾಲಯಕ್ಕೆ ಮೊರೆಹೋಗುವ ಹಕ್ಕನ್ನು, ನಿರ್ಬಂಧಿಸಲಾಗಿದ್ದರೂ ಆತನಿಗೆ ಅಪೀಲು ಸಲ್ಲಿಸುವ ಹಕ್ಕನ್ನು ನೀಡುತ್ತದೆ.

ಆದ್ದರಿಂದ ಈ ವಿಧೇಯಕ.

**ಟಿಪ್ಪ tÂ** 1973ರ ಅಧಿನಿಯಮ 12, ಮುಖ್ಯವಾಗಿ ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮಕ್ಕೆ ಮಾಡಿದ ತಿದ್ದುಪಡಿಗಳಿಗೆ ಸಂಬಂಧಿಸಿದೆ. ಅದರಲ್ಲಿ 1958ರ ಅಧಿನಿಯಮ 16ಕ್ಕೆ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2 ಎ ದಿನಾಂಕ 2ನೇ ಮೇ 1973ರ ಸಂಖ್ಯೆ. 432 ಎಂದು ಪುಟ.4 ರಲ್ಲಿ ಪ್ರಕಟಿಸಲಾಗಿದೆ).

**VIII**

**1976 ರ ತಿದ್ದುಪಡಿ ಅಧಿನಿಯಮ 80.-** ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ಣ ನ್ಯಾಯಪೀಠವು, ಮೊದಲನೇ ಸಂಕೀರ್ಣ ಅಪೀಲು ಸಂಖ್ಯೆ 159/65 ರಲ್ಲಿ, ಭೂಸ್ವಾಧೀನ ಅಧಿನಿಯಮದ 54ನೇ ಪ್ರಕರಣದ ಮೇರೆಗೆ ನಷ್ಟಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಸಲ್ಲಿಸಿದ್ದ ಅಪೀಲುಗಳಲ್ಲಿ, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ ಸಂಖ್ಯೆ 16)ರ 48ನೇ ಪ್ರಕರಣದ ಅಡಿಯಲ್ಲಿ ನೀಡಲಾದ ಮೊಬಲಗು, ಹೆಚ್ಚಿನ ನಷ್ಟಪರಿಹಾರವನ್ನು ಒಳಗೊಂಡಿರುವುದಿಲ್ಲ ಎಂಬ ಪದಾವಳಿಯ ಆಧಾರದ ಮೇಲೆ ಕಡ್ಡಾಯ ಸ್ವಾಧೀನತೆಗಾಗಿ ನೀಡಲಾದ ಹೆಚ್ಚಿನ ನಷ್ಟಪರಿಹಾರದ ಮೇಲೆ, ನ್ಯಾಯಾಲಯ ಫೀಜನ್ನು ಪಾವತಿಸುವಂತಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತದೆ. ಮೇಲಿನ ಅಭಿಪ್ರಾಯ ದೋಷಪೂರ್ಣವಾಗಿದ್ದು, 1970 (1) ಮೈಸೂರು ಎಲ್.ಜೆ. 91ರಲ್ಲಿನ ಉಚ್ಚ ನ್ಯಾಯಾಲಯದ ಈ ಮುಂಚಿನ ತೀರ್ಮಾನಕ್ಕೆ ವಿರುದ್ಧವಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಮುಂದೆ ತೀರ್ಪಿನ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದ್ದು, ಅದು ಇತ್ಯರ್ಥದಲ್ಲಿದೆ.

ಅಪೀಲಿನ ವಿಲೆಗೆ ಕಾಲಾವಕಾಶ ಬೇಕಾಗುತ್ತದೆ. ಆದುದರಿಂದ, ಅದೇ ರೀತಿಯ ಅಪೀಲುಗಳಲ್ಲಿ ಹೆಚ್ಚಿನ ನಷ್ಟಪರಿಹಾರದ ಮೇಲೆ ಸಂದಾಯವಾಗದಿರುವ ನ್ಯಾಯಾಲಯ ಫೀಜನ್ನು ಹಾಗೂ ಈಗಾಗಲೇ ಸಂದಾಯ ಮಾಡಿರುವ ನ್ಯಾಯಾಲಯ ಫೀಜಿನ ಮರುಪಾವತಿಗೆ ಸಂಬಂಧಿಸಿದ ಕ್ಲೇಮುಗಳನ್ನು ತಡೆಯುವುದಕ್ಕಾಗಿ, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ಅಧ್ಯಾದೇಶ, 1976 (1976 ರ ಕರ್ನಾಟಕ ಅಧ್ಯಾದೇಶ 18) ನ್ನು ಪ್ರಖ್ಯಾಪಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ಮಂಡಿಸಿದೆ ಮತ್ತು ಹದಿನೈದು ವರ್ಷಗಳಿಗಿಂತ ಹಿಂದೆ ನ್ಯಾಯಾಲಯ ಫೀಜನ್ನು ನಿಗದಿಪಡಿಸಿರುವುದರಿಂದ ಕೆಲವು ಅರ್ಜಿಗಳ ಸಂಬಂಧದಲ್ಲಿ ಸಂದಾಯಮಾಡಬೇಕಾದ ನ್ಯಾಯಾಲಯ ಫೀಜನ್ನು ಪರಿಷ್ಕರಿಸಲು ಮತ್ತು ಅಧಿನಿಯಮದ ಕಾರ್ಯನಿರ್ವಹಣೆಯಲ್ಲಿ ಅನುಭವಕ್ಕೆ ಬಂದಿರುವ ತೊಂದರೆಗಳನ್ನು ನಿವಾರಿಸಲು ಕೆಲವು ಇತರೆ ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಲು ಅವಕಾಶ ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 8ನೇ ನವೆಂಬರ್ 1976ರ ಸಂಖ್ಯೆ 4422 ಎಂದು ಪುಟ 5-6 ರಲ್ಲಿ ಪ್ರಕಟಿಸಲಾಗಿದೆ)

**IX**

**1979 ರ ತಿದ್ದುಪಡಿ ಅಧಿನಿಯಮ 21.-** ರಾಜ್ಯದ ರಾಜಸ್ವಗಳನ್ನು ಹೆಚ್ಚಿಸುವುದಕ್ಕಾಗಿ ತೆರಿಗೆ ಮತ್ತು ಇತರೆ ಕಾನೂನುಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ. ಕೆಲವು ಇತರೆ ತಿದ್ದುಪಡಿಗಳನ್ನು ಸಹ ಮಾಡಲು ಅವಕಾಶವನ್ನು ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ: 27.03.1979 ರ ಸಂಖ್ಯೆ 259 ಎಂದು ಪ್ರಕಟಿಸಲಾಗಿದೆ).

**X**

**1981ರ ತಿದ್ದುಪಡಿ ಅಧಿನಿಯಮ 13.-** ಧಾರ್ಮಿಕ ದತ್ತಿಗಳ ಅಧಿನಿಯಮ, 1863 ರ 14ನೇ ಪ್ರಕರಣದ ಮೇರೆಗೆ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 91ನೇ ಅಥವಾ 92ನೇ ಪ್ರಕರಣದ ಮೇರೆಗೆ ಪರಿಹಾರಕ್ಕಾಗಿನ ದಾವೆಗೆ ಸಂಬಂಧಿಸಿದಂತೆ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ರ ಮೇರೆಗೆ ಐವತ್ತು ರೂಪಾಯಿಗಳ ನಿಗದಿತ ನ್ಯಾಯಾಲಯ ಫೀಜು ಸಂದಾಯ ಮಾಡಬೇಕಾಗಿದೆ. ಸದರಿ 50ನೇ ಪ್ರಕರಣವು ಸಿವಿಲ್ ಪ್ರಕ್ರಿಯಾ ಸಂಹಿತೆಯ 92ನೇ ಪ್ರಕರಣಕ್ಕೆ ಸದೃಶವಾಗಿದ್ದಾಗ್ಯೂ, ಬಾಂಬೆ ಸಾರ್ವಜನಿಕ ನ್ಯಾಸಗಳ ಅಧಿನಿಯಮದ 50ನೇ ಪ್ರಕರಣದ ಮೇರೆಗೆ ದಾವೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಂಥ ನಿಗದಿತ ನ್ಯಾಯಾಲಯ ಫೀಜನ್ನು ನಿಗದಿಪಡಿಸಿರುವುದಿಲ್ಲ. ಅಂಥ ದಾವೆಗಳಲ್ಲಿ ಮೌಲ್ಯಾನುಸಾರ ನ್ಯಾಯಾಲಯ ಫೀಜನ್ನು ಸಂದಾಯಮಾಡಬಹುದಾಗಿರುತ್ತದೆ. ಬಾಂಬೆ ಸಾರ್ವಜನಿಕ ನ್ಯಾಸಗಳ ಅಧಿನಿಯಮದ 50ನೇ ಪ್ರಕರಣದ ಮೇರೆಗೆ ಸಹಾ, ದಾವೆಯ ಮೇಲೆ ಐವತ್ತು ರೂಪಾಯಿಗಳ ನಿಗದಿತ ನ್ಯಾಯಾಲಯ ಫೀಜಿನ ಸಂದಾಯಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. 1ನೇ ಜನವರಿ 1976 ರ ತರುವಾಯ ಸಲ್ಲಿಸಿರುವಂಥ ಕೆಲವು ದಾವೆಗಳಲ್ಲಿ, ಸಂದಾಯಮಾಡಬೇಕಾದ ನ್ಯಾಯಾಲಯ ಫೀಜಿನ ಪ್ರಶ್ನೆಯನ್ನು ಎತ್ತಲಾಗಿದ್ದು, ದಾವೆಗಳು

ಇತ್ಯರ್ಥದಲ್ಲಿವೆ ಮತ್ತು 1ನೇ ಜನವರಿ 1976 ರಿಂದ ಈ ತಿದ್ದುಪಡಿಯನ್ನು ಜಾರಿಗೆ ತರುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಎಲ್ಲ ಕೇವಿಯಟ್ ಅರ್ಜಿಗಳ ಮೇಲಿನ ನ್ಯಾಯಾಲಯ ಫೀಜಿನ ಪಾವತಿಗಾಗಿ ಉಪಬಂಧ ಕಲ್ಪಿಸುವುದು ಸಹ ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 6ನೇ ಫೆಬ್ರವರಿ 1981 ರ ಸಂಖ್ಯೆ.115 ಎಂದು ಪುಟ-4 ರಲ್ಲಿ ಪ್ರಕಟಿಸಲಾಗಿದೆ.)

**XI**

**1982ರ ತಿದ್ದುಪಡಿ ಅಧಿನಿಯಮ 13.-** 1982-83 ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ಮಾನ್ಯ ಹಣಕಾಸು ಮತ್ತು ಪ್ರವಾಸೋದ್ಯಮ ಸಚಿವರು, ರಾಜ್ಯದ ರಾಜಸ್ವವನ್ನು ಹೆಚ್ಚಿಸುವುದಕ್ಕಾಗಿ ಹಲವಾರು ಪ್ರಸ್ತಾವನೆಗಳನ್ನು ಸೂಚಿಸುತ್ತಾರೆ. ಈ ವಿಧೇಯಕವನ್ನು ಸದರಿ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು ಮಂಡಿಸಿದೆ. ಕೆಲವೊಂದು ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡುವ ಅವಕಾಶವನ್ನು ತೆಗೆದುಕೊಳ್ಳಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ದಿನಾಂಕ 27ನೇ ಮಾರ್ಚ್ 1982 ರ ಸಂಖ್ಯೆ. 223 ಎಂದು ಪುಟ-4 ರಲ್ಲಿ ಪ್ರಕಟಿಸಲಾಗಿದೆ).

**XII**

**1984ರ ತಿದ್ದುಪಡಿ ಅಧಿನಿಯಮ 16.-** ಕರ್ನಾಟಕ ಆಡಳಿತ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ರ 75ನೇ ಪ್ರಕರಣದ ಮೇರೆಗೆ, ಮರುಪಾವತಿಸಬೇಕೆಂದು ನ್ಯಾಯಾಲಯವು ಆದೇಶಿಸಿದ ನ್ಯಾಯಾಲಯ ಫೀಜಿನ ಸಂದಾಯವನ್ನು ಪಡೆಯಲು, ಡೆಪ್ಯುಟಿ ಕಮೀಷನರ್ ಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

ಈ ಕಾರ್ಯವಿಧಾನವು ಕಕ್ಷಿದಾರನಿಗೆ ಅನಾನುಕೂಲತೆಯನ್ನು ಉಂಟುಮಾಡುತ್ತಿದ್ದು, ಮರುಪಾವತಿ ಪಡೆಯುವಲ್ಲಿ ವಿಳಂಬವುಂಟಾಗುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ತಿದ್ದುಪಡಿ ಮಾಡಲು ಮತ್ತು ಅವರಿಗೆ ಮರುಪಾವತಿಸಬೇಕೆಂದು ಆದೇಶಿಸಲಾದ, ನ್ಯಾಯಾಲಯ ಫೀಜನ್ನು ಕಕ್ಷಿಗಾರನಿಗೆ ನೇರವಾಗಿ ಪಾವತಿಸಲು ನ್ಯಾಯಾಲಯಗಳಿಗೆ ಅಧಿಕಾರವನ್ನು ನೀಡುವ ಮೂಲಕ ಕಾರ್ಯವಿಧಾನವನ್ನು ಸರಳಗೊಳಿಸಲು ಪ್ರಸ್ತಾವಿಸಲಾಗಿದೆ. ಆದ್ದರಿಂದ ಈ ವಿಧೇಯಕ.

(1983ರ ವಿಧಾನಸಭೆಯ ವಿಧೇಯಕ ಸಂಖ್ಯೆ.39 ರಿಂದ ಪಡೆಯಲಾಗಿದೆ.)

**XIII**

**1985ರ ತಿದ್ದುಪಡಿ ಅಧಿನಿಯಮ 2.-** ಈ ಅಧಿನಿಯಮದ ಮೂಲಕ, ಕರ್ನಾಟಕ ನ್ಯಾಯವಾದಿಗಳ ಕ್ಷೇಮಾಭಿವೃದ್ಧಿ ನಿಧಿ ಅಧಿನಿಯಮ, 1985 ನ್ನು ಈ ಅಧಿನಿಯಮವನ್ನು ಅಧಿನಿಯಮಿತಗೊಳಿಸಲಾಗಿದ್ದು, ಅದರಲ್ಲಿ ಕೆಲವು ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಮಾಡಲಾಗಿದೆ.

**XIV**

**1989ರ ತಿದ್ದುಪಡಿ ಅಧಿನಿಯಮ 5.-** ಆಡಳಿತ ನ್ಯಾಯಾಧಿಕರಣ ಅಧಿನಿಯಮ, 1985 ರ ಮೂಲಕ ಒಳಗೊಂಡಿರುವ ವಿಷಯಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರವು, ಕರ್ನಾಟಕ ಆಡಳಿತ ನ್ಯಾಯಾಧಿಕರಣವು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಬದಲೀ ವ್ಯವಸ್ಥೆಯಾಗಿದೆ. ಸದರಿ ಅಧಿನಿಯಮದ 35 (ಡಿ) ಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಿ, ರಚಿಸಿದ ಕರ್ನಾಟಕ ಆಡಳಿತ ನ್ಯಾಯಾಧಿಕರಣ (ಪ್ರಕ್ರಿಯೆ) ನಿಯಮಗಳು, 1986ರ ಮಧ್ಯಕಾಲೀನ ಆದೇಶಕ್ಕಾಗಿ ಮತ್ತು ಪ್ರಕ್ರಿಯೆ ಶುಲ್ಕಕ್ಕಾಗಿ ಮಾತ್ರವೇ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯ ಫೀಜಿನ ಪಾವತಿಗಾಗಿ ಉಪಬಂಧ ಕಲ್ಪಿಸಿದೆ. ಆಡಳಿತ ನ್ಯಾಯಾಧಿಕರಣ ಅಧಿನಿಯಮಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಲು ಭಾರತ ಸರ್ಕಾರವನ್ನು ಸಶಕ್ತಗೊಳಿಸದಂಥ ಇತರೆ ಅಂಶಗಳಿದ್ದು, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮವು ಇತರೆ ಸನ್ನಿವೇಶಗಳಿಗೆ ಅನ್ವಯವಾಗುವುದು. ಕರ್ನಾಟಕ ಆಡಳಿತ ನ್ಯಾಯಾಧಿಕರಣ (ಪ್ರಕ್ರಿಯೆ) ನಿಯಮಗಳು, 1986 ರ ಮೂಲಕ ಒಳಗೊಂಡಿರದ ವಿಷಯಗಳಿಗಾಗಿ ನ್ಯಾಯಾಲಯ ಫೀಜುಗಳ ವಿಧಿಸುವಿಕೆ ಮತ್ತು ಸಂಗ್ರಹಣೆಗೆ ಸಂಬಂಧಿಸಿದಂತೆ ಏಕರೂಪತೆಯನ್ನು ತರುವ ಉದ್ದೇಶದಿಂದ, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ರಲ್ಲಿ ಅಂಥ ಉಪಬಂಧಗಳನ್ನು ಕಲ್ಪಿಸುವುದು ಅತ್ಯಾವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1988ರ ವಿಧಾನಸಭೆ ವಿಧೇಯಕ 25 ರಿಂದ ಪಡೆಯಲಾಗಿದೆ.)

**XV**

**1993ರ ತಿದ್ದುಪಡಿ ಅಧಿನಿಯಮ 2.-** ಎ.ಐ.ಆರ್ 1989 ಎಸ್ ಸಿ 100 ಯಲ್ಲಿ ವರದಿಯಾದ ಪಿ.ಎಂ. ಅಶ್ವತ್ಥನಾರಾಯಣ ಶೆಟ್ಟಿ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ನ್ನು ಯುಕ್ತವಾಗಿ ತಿದ್ದುಪಡಿ ಮಾಡುವುದು ಅತ್ಯಾವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1992ರ ವಿಧಾನಸಭೆ ವಿಧೇಯಕ 26 ರಿಂದ ಪಡೆಯಲಾಗಿದೆ.)

**XVI**

**1996ರ ತಿದ್ದುಪಡಿ ಅಧಿನಿಯಮ 7.-** ಈ ಮುಂದಿನವುಗಳಿಗಾಗಿ ಸಂದಾಯ ಮಾಡಬೇಕಾದ ನ್ಯಾಯಾಲಯ ಫೀಜುಗಳನ್ನು, ಎಂದರೆ:-

1. ಕಂದಾಯ ಸಲ್ಲಿಸುವ ಎಸ್ಟೇಟಿನ ಮಾಲೀಕರ ಹೆಸರುಗಳಿಗಿರುವ ರೆವಿನ್ಯೂ ಅಥವಾ ಸರ್ವೆ ರಿಜಿಸ್ಟರುಗಳಲ್ಲಿ ಅಥವಾ ದಾಖಲೆಗಳಲ್ಲಿನ ಯಾವುದೇ ನಮೂದನೆಯನ್ನು ಬದಲಾಯಿಸುವುದಕ್ಕಾಗಿ ಅಥವಾ ರದ್ದು ಮಾಡುವುದಕ್ಕಾಗಿನ ದಾವೆಗಳ ಸಂಬಂಧದಲ್ಲಿ,
2. ಗ್ರಾಮಾಧಿಕಾರಿ ಹುದ್ದೆಗೆ ಸಂಬಂಧಿಸಿದ ರೆವಿನ್ಯೂ ನ್ಯಾಯಾಲಯಗಳಲ್ಲಿನ ದಾವೆಗಳ ಸಂಬಂಧದಲ್ಲಿ,
3. ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ರ 43 ಮತ್ತು 47ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದ ರೆವಿನ್ಯೂ ನ್ಯಾಯಾಲಯದಲ್ಲಿರುವ ದಾವೆಗಳ ಸಂಬಂಧದಲ್ಲಿ

- ಹದಿನೈದು ರೂಪಾಯಿಗಳಿಂದ ಐವತ್ತು ರೂಪಾಯಿಗಳಿಗೆ ಹೆಚ್ಚಿಸುವುದು ಅತ್ಯಾವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1996ರ ವಿಧಾನಸಭೆಯ ವಿಧೇಯಕ 3 ರಿಂದ ಪಡೆಯಲಾಗಿದೆ.)

**XVII**

**1998ರ ತಿದ್ದುಪಡಿ ಅಧಿನಿಯಮ 15.-** ಫಲಾನುಭವಿಗಳು ಸಹ ಸಲ್ಲಿಸಿದ ಅಪೀಲು, ಜ್ಞಾಪನ ಪತ್ರದ ಮೇಲೆ ನ್ಯಾಯಾಲಯ ಫೀಜುಗಳನ್ನು ಸಂದಾಯ ಮಾಡಬೇಕೆಂದು ಉಪಬಂಧ ಕಲ್ಪಿಸುವಂತೆ, ಮಾನ್ಯ ಉಚ್ಚ ನ್ಯಾಯಾಲಯವು, ಸಂಕೀರ್ಣ ಮೊದಲ ಅಪೀಲು ಸಂಖ್ಯೆ. 2805/95 ರಿಂದ 2807/95 ರಲ್ಲಿ ದಿನಾಂಕ: 7ನೇ ಡಿಸೆಂಬರ್ 1995 ರ ಆದೇಶದ ಅಭಿಪ್ರಾಯಗಳ ಹಿನ್ನಲೆಯಲ್ಲಿ, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯನಿರ್ಣಯ ಅಧಿನಿಯಮ, 1958 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 17-03-1998 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV-2ಎ ನಲ್ಲಿ ಸಂ.301 ಎಂದು ಪ್ರಕಟವಾಗಿದೆ.)

**XVIII**

**2000ದ ತಿದ್ದುಪಡಿ ಅಧಿನಿಯಮ 12.-** ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ರ 1ನೇ ಅನುಸೂಚಿಯ 6ನೇ ಅನುಚ್ಛೇದವು ಪ್ರೊಬೇಟ್ ಅಥವಾ ಆಡಳಿತ ಪತ್ರಗಳ ಮೇಲೆ ಮೂರು ಲಕ್ಷ ರೂಪಾಯಿಗಳವರೆಗಿನ ಮೊಬಲಗು ಅಥವಾ ಮೌಲ್ಯ, ಇರುವಲ್ಲಿ ಶೇಕಡಾ ಐದರ ದರದಲ್ಲಿ

ಮತ್ತು ಯಾವುದೇ ಗರಿಷ್ಠ ಮಿತಿ ಇಲ್ಲದೆ ಮೂರು ಲಕ್ಷಗಳಿಗಿಂತ ಹೆಚ್ಚಿನ ಮೊಬಲಗು ಅಥವಾ ಮೌಲ್ಯದ ಭಾಗದ ಮೇಲೆ ಶೇಕಡಾ ಹತ್ತರ ದರದಲ್ಲಿ, ಫೀಜನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸುತ್ತದೆ.

ಪ್ರಸ್ತುತ ದರಗಳು ಹೆಚ್ಚಾಗಿರುವುದರಿಂದ ಮತ್ತು ಸಂಕಷ್ಟಗಳನ್ನು ತಂದೊಡ್ಡುತ್ತಿರುವುದರಿಂದ ನ್ಯಾಯಾಲಯ ಫೀಜುಗಳನ್ನು ಕಡಿಮೆ ಮಾಡುವಂತೆ ಕೋರಿ ಮನವಿಗಳು ಬಂದಿದೆ. ಮನವಿಗಳನ್ನು ಪರಿಶೀಲಿಸಿದ ತರುವಾಯ, ಮೂವತ್ತು ಸಾವಿರ ರೂಪಾಯಿಗಳ ಗರಿಷ್ಠ ಮಿತಿಯೊಂದಿಗೆ, ದರವನ್ನು ಶೇಕಡಾ ಐದರಿಂದ ಶೇಕಡಾ ಮೂರಕ್ಕೆ ಮತ್ತು ಶೇಕಡಾ ಹತ್ತರಿಂದ ಶೇಕಡಾ ಐದಕ್ಕೆ ಕಡಿತಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ದ ವಿಧಾನಸಭೆ ವಿಧೇಯಕ ಸಂ. 15 ರಿಂದ ಪಡೆಯಲಾಗಿದೆ.)

**XIX**

**2003ರ ತಿದ್ದುಪಡಿ ಅಧಿನಿಯಮ 10.-** 2002-2003 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ, ಸ್ಟಾಂಪುಗಳ ಮತ್ತು ಸ್ಟಾಂಪು ಪೇಪರ್ ಗಳ ಬಳಕೆಯನ್ನು ಬಿಟ್ಟುಬಿಡಲು ಮತ್ತು ಮುದ್ರೆ ಹಾಕಲಾದ ಸ್ಟಾಂಪುಗಳ ಬಳಕೆಯನ್ನು ಪ್ರಾರಂಭಿಸಲು, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಸಂವ್ಯಶಾಇ 16 ಶಾಸನ 2003)

**XX**

**2015ರ ತಿದ್ದುಪಡಿ ಅಧಿನಿಯಮ 09.-** ದಾವೆಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 89ನೇ ಪ್ರಕರಣದ ಮೇರೆಗೆ ಮತ್ತು ಪಕ್ಷಕಾರರ ಒಪ್ಪಂದದ ಪ್ರಕಾರ ಇತ್ಯರ್ಥಗೊಂಡಿದ್ದಲ್ಲಿ ಯಾವುದೇ ದಾವೆಯು ವಜಾಗೊಂಡಿದ್ದಲ್ಲಿ, ರಾಜಿಮಾಡಿಕೊಂಡಿದ್ದಲ್ಲಿ ಅಥವಾ ಅಂಥ ಅಪೀಲಿನ ಸುನಾವಣೆಯ ಪ್ರಾರಂಭಕ್ಕೂ ಮೊದಲು ಅಪೀಲು ವಿಲೆ ಆಗಿರುವಲ್ಲಿ, ಪಕ್ಷಕಾರರಿಗೆ ನ್ಯಾಯಾಲಯ ಫೀಜಿನ ಶೇಕಡಾ ಎಪ್ಪತ್ತೈದರಷ್ಟು ಮರುಪಾವತಿಗಾಗಿ ಉಪಬಂಧವನ್ನು ಕಲ್ಪಿಸಲು ಮತ್ತು "ಎಲ್ಲಾ ಫೀಜುಗಳು"ಎಂಬ ಪದಾವಳಿಯ ಬಳಕೆಯಿಂದ ಉಂಟಾಗುವ ಸಂದಿಗ್ಧತೆಯನ್ನು ತಪ್ಪಿಸಲು, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 16)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭೆ ವಿಧೇಯಕ ಸಂ.62, ಸಂವ್ಯಶಾಇ 36 ಶಾಸನ 2014]

[ಭಾರತ ಸಂವಿಧಾನದ ಏಳನೇ ಅನುಸೂಚಿಯ 11ನೇ ಪಟ್ಟಿಯ 3ನೇ ನಮೂದು.]

XXI

**2020ರ ತಿದ್ದುಪಡಿ ಅಧಿನಿಯಮ 37.-** ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 (1958 ರ ಕರ್ನಾಟಕ ಅಧಿನಿಯಮ 16)ನ್ನು ಈ ಕೆಳಗಿನ ಉದ್ದೇಶಗಳಿಗಾಗಿ, ಎಂದರೆ.-

1. ದಾವೆಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 89ನೇ ಪ್ರಕರಣದಡಿಯಲ್ಲಿ ಇತ್ಯರ್ಥಗೊಂಡಿದ್ದಲ್ಲಿ ಹಾಗೂ ಪಕ್ಷಕಾರರ ಒಪ್ಪಂದದ ಮೂಲಕ, ಯಾವುದೇ ದಾವೆಯು ನ್ಯಾಯಾಲಯದ ಹೊರಗೆ ಇತ್ಯರ್ಥವಾಗಿ ವಜಾಗೊಂಡಿದ್ದಲ್ಲಿ, ಸಾಕ್ಷ್ಯವನ್ನು ನೀಡುವುದಕ್ಕೆ ಮೊದಲೇ ಡಿಕ್ರಿಯ ಸಂಬಂಧದಲ್ಲಿ ರಾಜಿಮಾಡಿಕೊಂಡಿದ್ದಲ್ಲಿ ಅಥವಾ ಅಂಥ ಅಪೀಲಿನ ಸುನಾವಣೆಯ ಪ್ರಾರಂಭಕ್ಕೂ ಮೊದಲು ಅಪೀಲು ವಿಲೆಯಾಗಿದ್ದಲ್ಲಿ, ಪಕ್ಷಕಾರರಿಗೆ ನ್ಯಾಯಾಲಯ ಫೀಜುಗಳ ಪೂರ್ಣ ಮೊಬಲಗನ್ನು ಪಾವತಿ ಮಾಡುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುವುದಕ್ಕಾಗಿ 6 ಎಸ್‌ಸಿಸಿ 344 (2005)ರಲ್ಲಿ ವರದಿಯಾದ, ಸೇಲಂ ವಕೀಲರ ಪರಿಷತ್ತು, ತಮಿಳುನಾಡು ವಿರುದ್ಧ ಭಾರತ ಸರ್ಕಾರ, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನೊಂದಿಗೆ ಓದಲಾದ ರಿಟ್ ಅರ್ಜಿ ಸಂಖ್ಯೆ: 33768/2009 (ಜಿ.ಎಂ. ಸಿಪಿಸಿ) ರಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ನಿರ್ದೇಶನವನ್ನು ಅನುಪಾಲನೆ ಮಾಡಿ; ಮತ್ತು

2. ಇ-ಪಾವತಿಯ ಮೂಲಕವು ಸಹ ಮರುಪಾವತಿ ಮಾಡಲು ಮತ್ತು ಫೀಜನ್ನು ಪಾವತಿಸಲು ಉಪಬಂಧ ಕಲ್ಪಿಸಲು

- ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳೂ ಅಧಿವೇಶನದಲ್ಲಿ ಇಲ್ಲದೇ ಇದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ಅಧ್ಯಾದೇಶ, 2020 (2020 ರ ಕರ್ನಾಟಕ ಅಧ್ಯಾದೇಶ 18)ನ್ನು ದಿನಾಂಕ 31.07.2020 ರಂದು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆ ವಿಧೇಯಕ ಸಂ.49, ಕಡತ ಸಂ. ಸಂವ್ಯಶಾಇ 64 ಶಾಸನ 2020]

[ಭಾರತ ಸಂವಿಧಾನದ ಏಳನೇ ಅನುಸೂಚಿಯ II ಪಟ್ಟಿಯ ನಮೂದು 3.]

## 1958ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 16

(1958ರ ಮೇ, ಇಪ್ಪತ್ತಾರನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟವಾಗಿದೆ)

## [1][ಕರ್ನಾಟಕ][1] ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958.

(1958ರ ಮೇ ಇಪ್ಪತ್ತೊರನೇ ರಂದು ರಾಷ್ಟ್ರಪತಿಯವರ ಅನುಮೋದನೆ ಪಡೆಯಲಾಗಿದೆ)

(1958ರ 24, 1964ರ 10, 1966ರ 27, 1969ರ 11, 1973ರ 3 ಮತ್ತು 12, 1976ರ 80, 1979ರ 21, 1981ರ 13, 1982ರ 13, 1984ರ 16, 1985ರ 2, 1989ರ 5, 1993ರ 2, 1996ರ 7, 1998ರ 15, 2000ದ 12, 2003ರ 10, 2015ರ 09 ಮತ್ತು 2020ರ 37ನೇ ಕರ್ನಾಟಕ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ.)

[1][ಕರ್ನಾಟಕ ರಾಜ್ಯ][1]ದಲ್ಲಿ ನ್ಯಾಯಾಲಯದ ಫೀಜುಗಳಿಗೆ ಮತ್ತು ದಾವೆಗಳ ಮೌಲ್ಯ ನಿಗದಿಗೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಅಧಿನಿಯಮ.

[1][ಕರ್ನಾಟಕ ರಾಜ್ಯ][1]ದಲ್ಲಿ ನ್ಯಾಯಾಲಯ ಫೀಜುಗಳಿಗೆ ಮತ್ತು ದಾವೆಗಳ ಮೌಲ್ಯ ನಿಗದಿಗೆ ಸಂಬಂಧಿಸಿದ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಮತ್ತು ಕ್ರೋಡೀಕರಿಸುವುದು ಅವಶ್ಯಕವೂ ಮತ್ತು ಯುಕ್ತವೂ ಆಗಿರುವುದರಿಂದ;

ಭಾರತ ಗಣರಾಜ್ಯದ ಒಂಬತ್ತನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ದ ವಿಧಾನ ಮಂಡಲದಿಂದ ಮುಂದೆ ಹೇಳಿರುವಂತೆ ಅಧಿನಿಯಮಿತಗೊಳ್ಳತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ದಿನಾಂಕ: 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

### ಅಧ್ಯಾಯ I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 ಎಂದು ಕರೆಯತಕ್ಕದ್ದು.

(2) ಇದು, ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗತಕ್ಕದ್ದು.

1. 1973 ರ ಕರ್ನಾಟಕ ಕಾನೂನುಗಳ ಅಳವಡಿಕೆಗಳು ಆದೇಶದ ಮೂಲಕ ದಿನಾಂಕ: 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು, ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಬಹುದಾದ [1][ದಿನಾಂಕ][1]ದಿಂದ ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಮೂಲಕ ದಿನಾಂಕ: 15.10.1960 ರಂದು ಜಾರಿಗೆ ಬಂದಿರುತ್ತದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ.

**2. ಅಧಿನಿಯಮದ ಅನ್ವಯ.-** (1) ಈ ಅಧಿನಿಯಮದ ಉಪಬಂಧಗಳು ಕೇಂದ್ರ ಸರ್ಕಾರದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಯ ಮುಂದೆ ಹಾಜರುಪಡಿಸಲಾದ ಅಥವಾ ಹಾಜರುಪಡಿಸಲಾಗುವ ದಸ್ತಾವೇಜುಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಬೇರೆ ಇತರ ಯಾವುದೇ ಕಾನೂನು, ಅಂಥ ಬೇರೆ ಕಾನೂನಿನ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಫೀಜು ವಿಧಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಿದ್ದಲ್ಲಿ, ಅಂಥ ವ್ಯವಹರಣೆಗಳಿಗಾಗಿ ಫೀಜು ವಿಧಿಸುವುದಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದಲ್ಲಿರುವ ಉಪಬಂಧಗಳು, ಅಂಥ ಇತರೆ ಕಾನೂನಿನ ಸದರಿ ಉಪಬಂಧಗಳಿಗೊಳಪಟ್ಟು ಅನ್ವಯವಾಗತಕ್ಕದ್ದು.

**3. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಅಪೀಲು" ಎಂಬ ಪದವು ಎದುರು-ಆಕ್ಷೇಪವನ್ನು ಒಳಗೊಂಡಿರುತ್ತದೆ;

[1][(iಎ) "ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿ"ಎಂದರೆ, [2][ಕರ್ನಾಟಕ][2]ದ ಮುದ್ರಾಂಕ ಆಯುಕ್ತರು ಎಂದು ರಾಜ್ಯ ಸರ್ಕಾರವು ನೇಮಕ ಮಾಡಿದ ಅಧಿಕಾರಿ;][1]

(ii) "ನ್ಯಾಯಾಲಯ"ಎಂದರೆ, ಯಾವುದೇ ಸಿವಿಲ್, ರಾಜಸ್ವ ಅಥವಾ ಕ್ರಿಮಿನಲ್ ನ್ಯಾಯಾಲಯ ಮತ್ತು ಪಕ್ಷಕಾರರ ಹಕ್ಕುಗಳ ಮೇಲೆ ಬಾಧಕವುಂಟು ಮಾಡುವ ಪ್ರಶ್ನೆಗಳನ್ನು ತೀರ್ಮಾನಿಸಲು ಯಾವುದೇ ವಿಶೇಷ ಅಥವಾ ಸ್ಥಳೀಯ ಕಾನೂನಿನ ಮೇರೆಗೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಧಿಕರಣವನ್ನು ಅಥವಾ ಇತರೆ ಪ್ರಾಧಿಕಾರವನ್ನು ಒಳಗೊಳ್ಳುತ್ತದೆ.

(iii) "ನಿಯಮಿಸಲಾದುದು"ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಂದ ನಿಯಮಿಸಲಾದುದು; ಮತ್ತು

(iv) ಈ ಅಧಿನಿಯಮದಲ್ಲಿ ಅಥವಾ [2][ಕರ್ನಾಟಕ][2] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899 [2][ಕರ್ನಾಟಕ][2] ಅಧಿನಿಯಮ III)ರಲ್ಲಿ ಬಳಸಿದ ಮತ್ತು ಪರಿಭಾಷಿಸಿರದ, ಆದರೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ V) ರಲ್ಲಿ ಪರಿಭಾಷಿಸಿರುವ ಪದಾವಳಿಗಳು, ಸದರಿ ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ: 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳು ಆದೇಶದ ಮೂಲಕ ದಿನಾಂಕ: 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಾಯ II

## ಫೀಜು ಪಾವತಿಸುವ ಹೊಣೆಗಾರಿಕೆ

**4. ನ್ಯಾಯಾಲಯಗಳಲ್ಲಿ ಮತ್ತು ಸಾರ್ವಜನಿಕ ಕಚೇರಿಗಳಲ್ಲಿ ಫೀಜು ವಿಧಿಸುವುದು.-** ಈ ಅಧಿನಿಯಮದ ಮೇರೆಗೆ ವಿಧಿಸಬಹುದೆಂದು ಸೂಚಿಸಿರುವುದಕ್ಕಿಂತ ಕಡಿಮೆಯಾಗದಷ್ಟು ಫೀಜಿನ ಮೊಬಲಗನ್ನು ಸಂದಾಯ ಮಾಡಿದ ಹೊರತು, ಈ ಅಧಿನಿಯಮದ ಮೇರೆಗೆ ಯಾವ ದಸ್ತಾವೇಜಿನ ಮೇಲೆ ಫೀಜನ್ನು ವಿಧಿಸತಕ್ಕದ್ದೋ ಆ ದಸ್ತಾವೇಜನ್ನು,-

(i) ಉಚ್ಚ ನ್ಯಾಯಾಲಯವು ಒಳಗೊಂಡಂತೆ, ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ದಾಖಲಿಸತಕ್ಕದ್ದಲ್ಲ ಅಥವಾ ನ್ಯಾಯಾಲಯವು ಅದರಂತೆ ವರ್ತಿಸತಕ್ಕದ್ದಲ್ಲ ಅಥವಾ ಅದನ್ನು ಒದಗಿಸತಕ್ಕದ್ದಲ್ಲ; ಅಥವಾ

(ii) ಯಾವುದೇ ಸರ್ಕಾರಿ ಕಚೇರಿಯಲ್ಲಿ ಸಲ್ಲಿಸತಕ್ಕದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ದಾಖಲಿಸತಕ್ಕದ್ದಲ್ಲ ಅಥವಾ ಯಾರೇ ಸರ್ಕಾರಿ ಅಧಿಕಾರಿಯು ಅದರಂತೆ ವರ್ತಿಸತಕ್ಕದ್ದಲ್ಲ ಅಥವಾ ಒದಗಿಸತಕ್ಕದ್ದಲ್ಲ:

ಪರಂತು, ಯುಕ್ತ ಫೀಜು ಸಂದಾಯ ಮಾಡದಿರುವಂಥ ದಸ್ತಾವೇಜನ್ನು ಕ್ರಿಮಿನಲ್ ನ್ಯಾಯಾಲಯದಲ್ಲಿ ಸಲ್ಲಿಸುವುದು ಅಥವಾ ಪ್ರದರ್ಶಿಸುವುದು, ನ್ಯಾಯ ವಿಫಲತೆಯನ್ನು ತಡೆಯುವುದಕ್ಕಾಗಿ ಅವಶ್ಯಕವಾಗಿದೆಯೆಂದು ಆ ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದರೆ, ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಸಲ್ಲಿಸುವಿಕೆಯನ್ನು ಅಥವಾ ಪ್ರದರ್ಶಿಸುವುದನ್ನು ನಿಷೇಧಿಸುತ್ತದೆಂದು ಭಾವಿಸತಕ್ಕದ್ದಲ್ಲ:

[1][ಮತ್ತೂ ಪರಂತು, ರಾಜ್ಯ ಸರ್ಕಾರವು ಅಥವಾ ಅದರ ಪರವಾಗಿ ಅಥವಾ ರಾಜ್ಯ ಸರ್ಕಾರದ ಅಧಿಕಾರ ಬಲದಿಂದ ಯಾರೇ ಅಧಿಕಾರಿಯು ಅಥವಾ ಆತನ ಪರವಾಗಿ ಸಲ್ಲಿಸಲಾದ, ಪ್ರದರ್ಶಿಸಲಾದ ಅಥವಾ ದಾಖಲಿಸಲಾದ ಅಥವಾ ರಾಜ್ಯ ಸರ್ಕಾರದ ಅಥವಾ ಅಧಿಕಾರದ ಬಲದಿಂದ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ಕೋರಿಕೆಯ ಮೇರೆಗೆ ವರ್ತಿಸಲಾದ ಅಥವಾ ಅವರಿಗೆ ಒದಗಿಸಲಾದ ದಸ್ತಾವೇಜಿನ ಬಗ್ಗೆ ಯಾವುದೇ ಫೀಜು ಸಂದಾಯಮಾಡತಕ್ಕದ್ದಲ್ಲ.][1]

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ: 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**5. ಅಜಾಗರೂಕತೆಯಿಂದ ಸ್ವೀಕರಿಸಲಾದ ದಸ್ತಾವೇಜುಗಳ ಮೇಲೆ ಫೀಜು.-** ಈ ಅಧಿನಿಯಮದ ಮೂಲಕ ನಿಯಮಿಸಲಾದ ಎಲ್ಲ ಫೀಜಿನ ಸಂಪೂರ್ಣ ಅಥವಾ ಅದರ ಯಾವೊಂದು ಭಾಗವನ್ನು ಸಲ್ಲಿಸದೆ ಹಾಜರುಪಡಿಸಿದಾಗ ಅಥವಾ ಯಾವುದೇ ನ್ಯಾಯಾಲಯದಲ್ಲಿ ಅಥವಾ ಸರ್ಕಾರಿ ಕಚೇರಿಯಲ್ಲಿ ಪ್ರಮಾದದಿಂದ ಅಥವಾ ಅಜಾಗರೂಕತೆಯಿಂದ ಸ್ವೀಕರಿಸಿರುವಾಗ, ಆ ನ್ಯಾಯಾಲಯವು ಅಥವಾ ಆ ಕಚೇರಿಯ ಮುಖ್ಯಸ್ಥನು ತನ್ನ ವಿವೇಚನೆಯ ಮೇರೆಗೆ ತಾನು ನಿಗದಿ ಮಾಡಬಹುದಾದ ಕಾಲದೊಳಗಾಗಿ ಸಂದರ್ಭಾನುಸಾರ, ಅಂಥ ಫೀಜನ್ನು ಅಥವಾ ಅದರ ಯಾವೊಂದು ಭಾಗವನ್ನು ಪಾವತಿಸಲು ಅದನ್ನು ಸಂದಾಯ ಮಾಡಬೇಕಾದ ವ್ಯಕ್ತಿಗೆ ಅವಕಾಶ ಕೊಡಬಹುದು ಮತ್ತು ಅಂಥ ಸಂದಾಯದ ಬಳಿಕ, ಆ ದಸ್ತಾವೇಜು, ಮೊದಲೇ ಪೂರ್ತಿ ಫೀಜನ್ನು ಪಾವತಿಸಿದ್ದರೆ ಹೇಗೋ ಹಾಗೇ ಅದೇ ಬಲ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದು.

**6. ಬಹು ರೀತಿಯ ದಾವೆಗಳು.-** (1) ದಾವೆಯಲ್ಲಿ ಒಂದೇ ವ್ಯಾಜ್ಯ ಕಾರಣವನ್ನು ಆಧರಿಸಿ ಪ್ರತ್ಯೇಕವಾದ ಮತ್ತು ವಿಶಿಷ್ಟವಾದ ಪರಿಹಾರಗಳು ಕೋರಲ್ಪಟ್ಟಿದ್ದರೆ, ಪರಿಹಾರಗಳ ಒಟ್ಟು ಮೌಲ್ಯವನ್ನನುಸರಿಸಿ ವಾದಪತ್ರದ ಮೇಲೆ ಫೀಜು ವಿಧಿಸತಕ್ಕದ್ದು:

ಪರಂತು, ಪರಿಹಾರವನ್ನು ಮುಖ್ಯ ಪರಿಹಾರಕ್ಕೆ ಪೂರಕವಾಗಿ ಕೋರಲಾಗಿದ್ದರೆ, ಮುಖ್ಯ ಪರಿಹಾರದ ಮೌಲ್ಯವನ್ನನುಸರಿಸಿ ಮಾತ್ರ ವಾದಪತ್ರದ ಮೇಲೆ ಫೀಜು ವಿಧಿಸತಕ್ಕದ್ದು.

(2) ಒಂದೇ ವ್ಯಾಜ್ಯ ಕಾರಣವನ್ನು ಆಧರಿಸಿ ಒಂದಕ್ಕಿಂತ ಹೆಚ್ಚಿನ ಪರಿಹಾರವನ್ನು ಯಾವುದೇ ದಾವೆಯಲ್ಲಿ ಪರ್ಯಾಯವಾಗಿ ಕೋರಿರುವೆಡೆಯಲ್ಲಿ, ಪರಿಹಾರದ ಮೇಲೆ ವಿಧಿಸಬಹುದಾದ ಫೀಜುಗಳ ಪೈಕಿ ಅತೀ ಹೆಚ್ಚಿರುವ ಫೀಜನ್ನು ವಾದಪತ್ರದ ಮೇಲೆ ವಿಧಿಸತಕ್ಕದ್ದು.

(3) ದಾವೆಯಲ್ಲಿ ಪ್ರತ್ಯೇಕವಾದ ಮತ್ತು ವಿಶಿಷ್ಟವಾದ ಎರಡು ಅಥವಾ ಹೆಚ್ಚು ವ್ಯಾಜ್ಯ ಕಾರಣಗಳು ಇರುವಲ್ಲಿ ಮತ್ತು ಅವುಗಳ ಆಧಾರದ ಮೇಲೆ ಪ್ರತ್ಯೇಕವಾದ ಪರಿಹಾರವನ್ನು ಪರ್ಯಾಯವಾಗಿ ಅಥವಾ ಸಂಚಿತವಾಗಿ ಕೋರಲಾಗಿದ್ದಲ್ಲಿ, ಹಲವಾರು ವ್ಯಾಜ್ಯ ಕಾರಣಗಳ ಬಗ್ಗೆ ಪ್ರತ್ಯೇಕವಾದ ದಾವೆಗಳನ್ನು ಹೂಡಲಾಗಿದ್ದರೆ ವಾದಪತ್ರಗಳ ಮೇಲೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಒಟ್ಟು ಮೊಬಲಗಿನಷ್ಟು ಫೀಜನ್ನು ಆ ವಾದಪತ್ರದ ಮೇಲೆ ವಿಧಿಸತಕ್ಕದ್ದು:

ಪರಂತು, ಸದರಿ ವ್ಯಕ್ತಿಯ ವಿರುದ್ಧ ಪರ್ಯಾಯವಾಗಿ ಕ್ಲೇಮುಮಾಡಿದ ಪರಿಹಾರಗಳ ಸಂಬಂಧದ ವ್ಯಾಜ್ಯ ಕಾರಣಗಳು ಒಂದೇ ವ್ಯವಹಾರದಿಂದ ಉದ್ಭವಿಸಿರುವಲ್ಲಿ, ಅವುಗಳ ಮೇಲೆ ವಿಧಿಸಬಹುದಾದವುಗಳ ಪೈಕಿ ಹೆಚ್ಚಿನ ಫೀಜುಗಳನ್ನು ವಾದಪತ್ರದ ಮೇಲೆ ವಿಧಿಸತಕ್ಕದ್ದು.

ಈ ಉಪಪ್ರಕರಣದಲ್ಲಿರುವುದು ಯಾವುದೂ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ V) IIನೇ ಕ್ರಮಾದೇಶದ 6ನೇ ನಿಯಮದ ಮೇರೆಗೆ ನ್ಯಾಯಾಲಯಕ್ಕೆ ಪ್ರದತ್ತವಾದ ಯಾವುದೇ ಅಧಿಕಾರದ ಮೇಲೆ ಬಾಧಕ ಉಂಟುಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

(4) ಈ ಪ್ರಕರಣದ ಉಪಬಂಧಗಳು, ಅಪೀಲುಗಳ ವಿವರಣಪತ್ರಗಳಿಗೆ, ಅರ್ಜಿಗಳಿಗೆ, ಮನವಿ ಪತ್ರಗಳಿಗೆ ಮತ್ತು ಲಿಖಿತ ವಿವರ ಪತ್ರಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದೇಶಕ್ಕಾಗಿ, ಸ್ಥಿರ ಸ್ವತ್ತಿನ ಸ್ವಾಧೀನಕ್ಕಾಗಿ ಮತ್ತು ಮಧ್ಯಕಾಲೀನ ಲಾಭಗಳಿಗೆ ಸಂಬಂಧಿಸಿದ ದಾವೆಯು, ಒಂದೇ ವ್ಯಾಜ್ಯ ಕಾರಣದ ಮೇಲೆ ಆಧರಿಸಿರುತ್ತದ್ದೆಂದು ಭಾವಿಸತಕ್ಕದ್ದು.

**7. ಮಾರುಕಟ್ಟೆ ಮೌಲ್ಯದ ನಿರ್ಧರಣೆ.-** (1) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಪಾವತಿಸಬೇಕಾದ ಫೀಜು, ಯಾವುದೇ ಸ್ವತ್ತಿನ ಮಾರುಕಟ್ಟೆಯ ಮೌಲ್ಯವನ್ನು ಅವಲಂಬಿಸಿರುವಲ್ಲಿ, ವಾದಪತ್ರವನ್ನು ಮಂಡಿಸಿದ ದಿನಾಂಕದಂದು ಇದ್ದಂತೆ ಅಂಥ ಮೌಲ್ಯವನ್ನು ನಿರ್ಧರಿಸತಕ್ಕದ್ದು.

(2) 24(ಎ), 24(ಬಿ), 26(ಎ), 27, 28, 29, 31, 35(1), 35(2), 35(3), 36, 38, 39 ಅಥವಾ 45ನೇ ಪ್ರಕರಣಗಳ ಮೇರೆಗೆ ಬರುವ ದಾವೆಗಳಲ್ಲಿ ಭೂಮಿಯ ಮಾರುಕಟ್ಟೆಯ ಮೌಲ್ಯವು,-

(ಎ) ಸರ್ಕಾರಕ್ಕೆ ವಾರ್ಷಿಕ ಕಂದಾಯವನ್ನು ಕೊಡುತ್ತಿರುವ ಭೂಮಿಯು ಸಮಗ್ರ ಎಸ್ಟೇಟ್ ಆಗಿರುವಲ್ಲಿ ಅಥವಾ ಎಸ್ಟೇಟಿನ ಒಂದು ನಿಶ್ಚಿತ ಭಾಗವಾಗಿರುವಲ್ಲಿ ಅಥವಾ ಡೆಪ್ಯುಟಿ ಕಮೀಷನರನ ರಿಜಿಸ್ಟರಿನಲ್ಲಿ ಅಂಥ ಭೂಕಂದಾಯವನ್ನು ಪ್ರತ್ಯೇಕವಾಗಿ ನಿರ್ಧರಿಸಿರುವಂತೆ ದಾಖಲಿಸಿದ್ದು ಅದು ಅಂಥ ಎಸ್ಟೇಟಿನ ಒಂದು ಭಾಗವಾಗಿರುವಲ್ಲಿ ಮತ್ತು ಅಂಥ ಭೂಕಂದಾಯವನ್ನು ಖಾಯಂ ಆಗಿ ನಿಶ್ಚಿತಗೊಳಿಸಿರುವಲ್ಲಿ - ಹಾಗೆ ಪಾವತಿಸಬಹುದಾದ ಭೂಕಂದಾಯದ ಇಪ್ಪತ್ತೈದು ಪಟ್ಟು;

(ಬಿ) ಸರ್ಕಾರಕ್ಕೆ ವಾರ್ಷಿಕ ಕಂದಾಯವನ್ನು ಕೊಡುತ್ತಿರುವ ಭೂಮಿಯು ಸಮಗ್ರ ಎಸ್ಟೇಟ್ ಆಗಿರುವಲ್ಲಿ ಅಥವಾ ಎಸ್ಟೇಟಿನ ಒಂದು ನಿಶ್ಚಿತ ಭಾಗವಾಗಿರುವಲ್ಲಿ ಅಥವಾ ಮೇಲೆ ಹೇಳಿರುವಂತೆ ಹಾಗೆ ದಾಖಲಿಸಿದ್ದು, ಅಂಥ ಎಸ್ಟೇಟಿನ ಭಾಗವಾಗಿರುವಲ್ಲಿ ಮತ್ತು ಅಂಥ ಭೂಕಂದಾಯವನ್ನು ನಿರ್ಧರಿಸಲಾಗಿದ್ದು, ಆದರೆ ಆ ನಿರ್ಧರಣೆಯು ಖಾಯಂ ಆಗಿಲ್ಲದಿದ್ದಲ್ಲಿ, ಹಾಗೆ ಪಾವತಿಸಬಹುದಾದ ಭೂ ಕಂದಾಯದ ಹನ್ನೆರಡುವರೆ ಪಟ್ಟು;

(ಸಿ) ಭೂಮಿಯ ಸಂಬಂಧದಲ್ಲಿ, ಹಾಗೆ ಭೂ-ಕಂದಾಯವನ್ನು ಪಾವತಿಸಲಾಗುತ್ತಿರದಿದ್ದಲ್ಲಿ ಅಥವಾ ಅಂಥ ಸಂದಾಯದಿಂದ ಭಾಗಶಃ ವಿನಾಯಿತಿಗೊಳಿಸಲ್ಪಟ್ಟಿದ್ದಲ್ಲಿ ಅಥವಾ ಅಂಥ ಭೂಕಂದಾಯಕ್ಕೆ ಬದಲಾಗಿ ಅದರ ಮೇಲೆ ಯಾವುದೇ ನಿಗದಿಯಾದ ಸಂದಾಯವನ್ನು ವಿಧಿಸುತ್ತಿರುವಲ್ಲಿ, ವಾದಪತ್ರವನ್ನು ಮಂಡಿಸುವ ದಿನಾಂಕದಿಂದ ಹಿಂದಿನ ವರ್ಷದ ಅವಧಿಯಲ್ಲಿ ಭೂಮಿಯಿಂದ ಯಾವುದಾದರೂ ನಿವ್ವಳ ಲಾಭಗಳು ದೊರೆತಿದ್ದರೆ, ಅವುಗಳ ಹದಿನೈದು ಪಟ್ಟು ಅಥವಾ ನೆರೆಹೊರೆಯಲ್ಲಿ ಅಂಥವೇ ಭೂಮಿಯ, ಅದರಷ್ಟೇ ವಿಸ್ತಾರದ ಮೇಲೆ ಪಾವತಿಸಬಹುದಾದ ಕಂದಾಯದ ಮೂವತ್ತು ಪಟ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು;

(ಡಿ) ಸರ್ಕಾರಕ್ಕೆ ಕಂದಾಯವನ್ನು ಪಾವತಿಸಲಾಗುತ್ತಿರುವ ಭೂಮಿಯು, ಎಸ್ಟೇಟಿನ ಭಾಗವಾಗಿರುವಲ್ಲಿ ಆದರೆ, ಅದು ಅಂಥ ಎಸ್ಟೇಟಿನ ನಿಶ್ಚಿತ ಭಾಗವಾಗಿರದಿದ್ದಲ್ಲಿ ಮತ್ತು ಮೇಲೆ ಹೇಳಿದಂತೆ ಪ್ರತ್ಯೇಕವಾಗಿ ನಿರ್ಧರಿಸದಿರುವಲ್ಲಿ ಅಥವಾ ಭೂಮಿಯು ತೋಟವಾಗಿರುವಲ್ಲಿ ಅಥವಾ ಭೂಮಿಯು ಗೃಹನಿವೇಶನವಾಗಿದ್ದು ಅದರ

ಮೇಲೆ ಪೂರ್ತಿ ಭೂ ಕಂದಾಯವು ನಿರ್ಧರಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ ಅಥವಾ ಹಿಂದೆ ಹೇಳಿದ ಅರ್ಥ ವಿವರಣೆಗಳಲ್ಲಿ ಬಾರದ ಭೂಮಿಯಾಗಿದ್ದಲ್ಲಿ, ಭೂಮಿಯ ಮಾರುಕಟ್ಟೆಯ ಮೌಲ್ಯದಷ್ಟು

- ಎಂದು ಭಾವಿಸತಕ್ಕದ್ದು.

**ವಿವರಣೆ.-** ಈ ಪ್ರಕರಣದಲ್ಲಿ ಬಳಸಲಾಗಿರುವ "ಎಸ್ಟೇಟ್"ಎಂಬ ಪದಕ್ಕೆ ಮಾಲೀಕನು ಅಥವಾ ವ್ಯವಸಾಯಗಾರನು ಅಥವಾ ರೈತನು ಸರ್ಕಾರದೊಡನೆ ಪ್ರತ್ಯೇಕವಾದ ವಚನಬಂಧವನ್ನು ಬರೆದುಕೊಟ್ಟಿದ್ದು ಅದರ ಪ್ರಕಾರ ಭೂ ಕಂದಾಯದ ಸಂದಾಯಕ್ಕೊಳಪಟ್ಟ ಅಥವಾ ಅಂಥ ವಚನ ಬಂಧವಾಗಿರದಿದ್ದಲ್ಲಿ ಪ್ರತ್ಯೇಕವಾದ ಕಂದಾಯವನ್ನು ನಿರ್ಧರಿಸಲಾಗಿರುವ ಯಾವುದೇ ಭೂಮಿ.

**8. ವಜಾ ವಟ್ಟು ಅಥವಾ ಎದುರು ಕ್ಲೇಮು.-** ವಜಾ ವಟ್ಟು ಅಥವಾ ಎದುರು ಕ್ಲೇಮನ್ನು ಮಾಡುವ ಲಿಖಿತ ವಿವರಪತ್ರದ ಮೇಲೆ ವಾದಪತ್ರದ ರೀತಿಯಲ್ಲಿಯೇ ಫೀಜು ವಿಧಿಸತಕ್ಕದ್ದು.

**9. ಎರಡು ಅಥವಾ ಹೆಚ್ಚು ಅರ್ಥವಿವರಣೆಗಳಡಿಯಲ್ಲಿ ಬರುವ ದಸ್ತಾವೇಜುಗಳು.-** ಹಿಂದಿನ ಕೊನೆಯ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದಲ್ಲಿ ಎರಡು ಅಥವಾ ಹೆಚ್ಚು ಅರ್ಥವಿವರಣೆಗಳೊಳಗೆ ಬರುವ ದಸ್ತಾವೇಜಿನ ಮೇಲೆ ವಿಧಿಸಬಹುದಾಗಿರುವ ಫೀಜುಗಳು ಬೇರೆ ಬೇರೆಯಾಗಿರುವಲ್ಲಿ, ಅಂಥ ಫೀಜುಗಳ ಪೈಕಿ ಅತಿ ಹೆಚ್ಚಿನದನ್ನು ಮಾತ್ರವೇ ವಿಧಿಸತಕ್ಕದ್ದು:

ಪರಂತು, ಇಂಥ ಅರ್ಥವಿವರಣೆಗಳಲ್ಲಿ ಒಂದು ವಿಶೇಷವಾದುದು ಆಗಿದ್ದು, ಇನ್ನೊಂದು ಸಾಮಾನ್ಯವಾದುದು ಆಗಿರುವಲ್ಲಿ, ವಿಧಿಸಬೇಕಾಗಿರುವ ಫೀಜು ವಿಶೇಷ ಅರ್ಥವಿವರಣೆಗೆ ಸಮುಚಿತವಾಗಿರುವ ಫೀಜು ಆಗಿರತಕ್ಕದ್ದು.

## ಅಧ್ಯಾಯ III

## ಫೀಜುಗಳ ನಿರ್ಧರಣೆ

**10. ದಾವೆಯ ವಸ್ತು ವಿಷಯದ ವಿವರಗಳ ತಃಖ್ತೆ ಮತ್ತು ಅದರ ಬಗ್ಗೆ ವಾದಿಯು ಮಾಡುವ ಮೌಲ್ಯ ನಿಗದಿ.-** ಈ ಅಧಿನಿಯಮದ ಮೇರೆಗೆ ವಾದಪತ್ರದ ಮೇಲೆ ಪಾವತಿಸಬಹುದಾದ ಫೀಜು, ದಾವೆಯ ವಸ್ತು ವಿಷಯದ ಮಾರುಕಟ್ಟೆ ಮೌಲ್ಯದ ಮೇಲೆ ಅವಲಂಬಿಸಿರುವ ಪ್ರತಿಯೊಂದು ದಾವೆಯಲ್ಲಿ, ವಾದಿಯು ದಾವೆಯ ವಸ್ತು ವಿಷಯದ ವಿವರಗಳು ಮತ್ತು ಮೌಲ್ಯ ನಿಗದಿಯು ವಾದಪತ್ರದಲ್ಲಿರದಿದ್ದರೆ, ನಿಯಮಿಸಲಾದ ನಮೂನೆಯಲ್ಲಿ, ದಾವೆಯ ವಸ್ತು ವಿಷಯದ ವಿವರಗಳು ಮತ್ತು ಅದರ ಬಗ್ಗೆ ತಾನು ಮಾಡಿದ ಮೌಲ್ಯ ನಿಗದಿಯ ತಃಖ್ತೆಯನ್ನು ವಾದಪತ್ರದ ಜೊತೆಗೆ ಸಲ್ಲಿಸತಕ್ಕದ್ದು.

**11. ಯುಕ್ತವಾದ ಫೀಜುಗಳ ಬಗ್ಗೆ ನ್ಯಾಯಾಲಯಗಳಲ್ಲಿ ತೀರ್ಮಾನ.-** (1) ಯಾವುದೇ ನ್ಯಾಯಾಲಯದಲ್ಲಿ ಹೂಡಲಾದ ಪ್ರತಿಯೊಂದು ದಾವೆಯಲ್ಲಿ, ನ್ಯಾಯಾಲಯವು, ವಾದಪತ್ರವನ್ನು ನೋಂದಾಯಿಸಲು ಆದೇಶ

ಮಾಡುವುದಕ್ಕೆ ಮುಂಚೆ, ವಾದಪತ್ರದಲ್ಲಿರುವ ಮತ್ತು 10ನೇ ಪ್ರಕರಣದ ಮೇರೆಗೆ ಯಾವುದಾದರೂ ತಃಖ್ತೆಗಳನ್ನು ಸಲ್ಲಿಸಿದ್ದರೆ, ಅವುಗಳಲ್ಲಿರುವ ಆಧಾರ ಸಾಮಗ್ರಿಗಳ ಮತ್ತು ಆಪಾದನೆಗಳ ಮೇಲೆ, ಆ ಬಗ್ಗೆ ಸಂದಾಯ ಮಾಡತಕ್ಕ ಯುಕ್ತವಾದ ಫೀಜನ್ನು ತೀರ್ಮಾನಿಸತಕ್ಕದ್ದು; ಆದಾಗ್ಯೂ ಮುಂಬರುವ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಇಂಥ ತೀರ್ಮಾನವು ಪರಿಶೀಲನೆ, ಮರುಪರಿಶೀಲನೆ ಮತ್ತು ತಿದ್ದುವಿಕೆಗೆ ಒಳಪಟ್ಟಿರತಕ್ಕದ್ದು.

(2) ದಾವೆಯ ಮೊದಲ ಸುನಾವಣೆಗೆ ಅಥವಾ ಕ್ಲೇಮಿನ ಗುಣದೋಷಗಳ ಮೇಲೆ ಸಾಕ್ಷ್ಯವನ್ನು ದಾಖಲು ಮಾಡುವುದಕ್ಕೆ ಮುಂಚೆ ಆದರೆ, ನಿಕಟ ಮುಂಬರುವ ಉಪಪ್ರಕರಣಕ್ಕೆ ಒಳಪಟ್ಟು, ತಡವಾಗಿ ಅಲ್ಲದೇ, ದಾವೆಯ ವಸ್ತು ವಿಷಯದ ಮೌಲ್ಯ ನಿಗದಿಯನ್ನು ಯುಕ್ತವಾಗಿ ಮಾಡಿಲ್ಲವೆಂದೂ ಅಥವಾ ಪಾವತಿಸಿದ ಫೀಜು ಸಾಕಷ್ಟು ಇಲ್ಲವೆಂದು ಯಾರೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿ ವಾದಿಸಬಹುದು. ಕ್ಲೇಮಿನ ಗುಣ ದೋಷಗಳ ಮೇಲೆ ಅಂಥ ಪ್ರತಿವಾದಿಗೆ ಪರಿಣಾಮ ಬೀರುವಂಥ ಸಾಕ್ಷ್ಯವನ್ನು ದಾಖಲು ಮಾಡುವುದಕ್ಕೆ ಮುಂಚೆ, ಅಂಥ ವಾದದಿಂದ ಉದ್ಭವಿಸುವ ಎಲ್ಲ ಪ್ರಶ್ನೆಗಳನ್ನು ಸುನಾವಣೆ ಮಾಡಿ ತೀರ್ಮಾನಿಸತಕ್ಕದ್ದು. ವಸ್ತು ವಿಷಯದ ಮೌಲ್ಯ ನಿಗದಿಯನ್ನು ಯುಕ್ತವಾಗಿ ಮಾಡಿಲ್ಲವೆಂದು ಅಥವಾ ಪಾವತಿಸಲಾದ ಫೀಜು ಸಾಕಷ್ಟು ಇಲ್ಲವೆಂದು ನ್ಯಾಯಾಲಯವು ತೀರ್ಮಾನಿಸಿದರೆ, ನ್ಯಾಯಾಲಯವು, ಯಾವ ದಿನಾಂಕಕ್ಕೆ ಮೊದಲು ನ್ಯಾಯಾಲಯದ ತೀರ್ಮಾನದ ಪ್ರಕಾರ ವಾದಪತ್ರದ ತಿದ್ದುಪಡಿ ಮಾಡತಕ್ಕದ್ದೋ ಮತ್ತು ಕಡಿಮೆಬಿದ್ದ ಫೀಜನ್ನು ಪಾವತಿಸತಕ್ಕದ್ದೋ, ಆ ದಿನಾಂಕವನ್ನು ನಿಗದಿಪಡಿಸತಕ್ಕದ್ದು. ಅವಕಾಶ ಕೊಟ್ಟ ಕಾಲದೊಳಗಾಗಿ ವಾದಪತ್ರದ ತಿದ್ದುಪಡಿ ಮಾಡಲಾಗದಿದ್ದರೆ ಅಥವಾ ಕಡಿಮೆಬಿದ್ದ ಫೀಜನ್ನು ಸಲ್ಲಿಸದಿದ್ದರೆ, ವಾದಪತ್ರವನ್ನು ತಿರಸ್ಕರಿಸತಕ್ಕದ್ದು ಮತ್ತು ದಾವೆಯ ಖರ್ಚಿನ ಬಗ್ಗೆ ನ್ಯಾಯಾಲಯವು ತನಗೆ ನ್ಯಾಯವೆಂದು ತೋರುವ ಆದೇಶವನ್ನು ಮಾಡತಕ್ಕದ್ದು.

(3) ಪ್ರತಿವಾದಿಯು, ಕ್ಲೇಮಿನ ಗುಣದೋಷಗಳ ಮೇಲೆ ವಾದಾಂಶಗಳನ್ನು ರೂಪಿಸಿದ ತರುವಾಯ, ಸೇರ್ಪಡೆಯಾದ ತಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ದಾವೆಯ ವಸ್ತು ವಿಷಯದ ಮೌಲ್ಯ ನಿಗದಿಯನ್ನು ಯುಕ್ತವಾಗಿ ಮಾಡಲಾಗಿಲ್ಲವೆಂದು ಅಥವಾ ಸಲ್ಲಿಸಲಾದ ಫೀಜು ಸಾಕಷ್ಟು ಇಲ್ಲವೆಂದು ವಾದಿಸಬಹುದು. ಕ್ಲೇಮಿನ ಗುಣದೋಷಗಳ ಮೇಲೆ ಪ್ರತಿವಾದಿಗೆ ಪರಿಣಾಮ ಬೀರುವ ಸಾಕ್ಷ್ಯಗಳನ್ನು ಸುನಾವಣೆ ಮಾಡಿ ತೀರ್ಮಾನಿಸತಕ್ಕದ್ದು ಮತ್ತು ವಸ್ತು ವಿಷಯದ ಮೌಲ್ಯ ನಿಗದಿಯನ್ನು ಯುಕ್ತವಾಗಿ ಮಾಡಲಾಗಿಲ್ಲವೆಂದು ಅಥವಾ ಪಾವತಿಸಲಾದ ಫೀಜು ಸಾಕಷ್ಟು ಇಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದರೆ (2)ನೇ ಉಪಪ್ರಕರಣದಲ್ಲಿ ಹೇಳಿರುವ ಪ್ರಕ್ರಿಯೆಯನ್ನು ನ್ಯಾಯಾಲಯವು ಅನುಸರಿಸತಕ್ಕದ್ದು.

**ವಿವರಣೆ.-** ಕ್ಲೇಮಿನ ಗುಣದೋಷಗಳ ಮೇಲೆ ವಿವಾದಾಂಶವನ್ನು ರೂಪಿಸುವುದಕ್ಕೆ ಮುಂಚೆ ದಾಖಲು ಮಾಡಲಾಗಿದ್ದ ವಸ್ತು ವಿಷಯದ ಮೌಲ್ಯ ನಿಗದಿಯನ್ನು ಯುಕ್ತವಾಗಿ ಮಾಡಲಾಗಿಲ್ಲವೆಂದು ಅಥವಾ ಪಾವತಿಸಲ್ಪಟ್ಟ ಫೀಜು ಸಾಕಷ್ಟು ಇಲ್ಲವೆಂದು ವಾದಿಸುವ ಪ್ರತಿವಾದ ಪತ್ರವನ್ನು ಸಲ್ಲಿಸುವ ಅವಕಾಶವನ್ನು ಪಡೆದಿದ್ದ ಪ್ರತಿವಾದಿಯ

ಉತ್ತರಾಧಿಕಾರಿಯಂತೆ ಅಥವಾ ಹಿತಾಸಕ್ತಿಯ ಪ್ರತಿನಿಧಿಯಂತೆ ಸೇರಿಸಿರುವ ವಾದಿಗೆ ಈ ಉಪಪ್ರಕರಣದಲ್ಲಿರುವ ಯಾವುದೂ ಅನ್ವಯಿಸತಕ್ಕದ್ದಲ್ಲ.

(4) (ಎ) ಮೊಕದ್ದಮೆಯು, ಅಪೀಲು ನ್ಯಾಯಾಲಯದ ಮುಂದೆ ಬಂದಿರುವಾಗ, ಅಧೀನ ನ್ಯಾಯಾಲಯದಲ್ಲಿ ವಾದಪತ್ರದ ಮೇಲೆ ಪಾವತಿಸತಕ್ಕ ಫೀಜಿನ ಮೇಲೆ ಪರಿಣಾಮ ಬೀರುವಂಥ ಅಥವಾ ಅಧೀನ ನ್ಯಾಯಾಲಯವು ಯಾವುದೇ ವ್ಯವಹರಣೆಯಲ್ಲಿ ಮಾಡಿದ ಯಾವುದಾದರೂ ಆದೇಶದ ಸಾಧ್ಯತೆಯನ್ನು ಸ್ವಪ್ರೇರಣೆಯಿಂದಾಗಲೀ ಅಥವಾ ಪಕ್ಷಕಾರರ ಪೈಕಿ ಯಾರೊಬ್ಬರ ಅರ್ಜಿಯ ಮೇಲಾಗಲೀ ಪರ್ಯಾಲೋಚಿಸುವುದು ಮತ್ತು ಆ ಬಗ್ಗೆ ಸಂದಾಯ ಮಾಡಬಹುದಾದ ಯುಕ್ತ ಫೀಜನ್ನು ನಿರ್ಧರಿಸುವುದು ಆ ನ್ಯಾಯಾಲಯಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು.

**ವಿವರಣೆ.-** ದಾವೆಯ ವಸ್ತು ವಿಷಯದ ಒಂದು ಭಾಗಕ್ಕೆ ಮಾತ್ರವೇ ಅಪೀಲು ಸಂಬಂಧಿಸಿದ್ದರೂ, ಮೊಕದ್ದಮೆಯು ಅಪೀಲು ನ್ಯಾಯಾಲಯದ ಮುಂದೆ ಬಂದಿದೆಯೆಂದು ಭಾವಿಸತಕ್ಕದ್ದು.

(ಬಿ) ಅಧೀನ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಫೀಜು ಸಾಕಷ್ಟು ಇಲ್ಲವೆಂದು ಅಪೀಲು ನ್ಯಾಯಾಲಯವು ತೀರ್ಮಾನಿಸಿದರೆ, ಆ ನ್ಯಾಯಾಲಯವು ತಾನು ನಿಗದಿ ಮಾಡುವ ಕಾಲದೊಳಗೆ ಕೊರತೆಯಾದ ಫೀಜನ್ನು ಪಾವತಿಸಲು ಹೊಣೆಗಾರನಾದ ಪಕ್ಷಕಾರನನ್ನು, ಅದನ್ನು ಪಾವತಿಸಲು ಅಗತ್ಯಪಡಿಸತಕ್ಕದ್ದು.

(ಸಿ) ಕಡಿಮೆಬಿದ್ದ ಫೀಜನ್ನು ನಿಗದಿ ಮಾಡಲಾದ ಕಾಲದೊಳಗೆ ಪಾವತಿಸದಿದ್ದರೆ ಮತ್ತು ಆ ತಪ್ಪುವಿಕೆಯು ಅಧೀನ ನ್ಯಾಯಾಲಯದಿಂದ ವಜಾ ಮಾಡಲಾದ ಪರಿಹಾರದ ಸಂಬಂಧದಲ್ಲಿ ಇದ್ದು ಅದನ್ನೇ ಅಪೀಲುದಾರನು ಅಪೀಲಿನಲ್ಲಿ ಕೇಳಿದ್ದರೆ, ಅಪೀಲನ್ನು ವಜಾ ಮಾಡತಕ್ಕದ್ದು, ಆದರೆ ಆ ತಪ್ಪುವಿಕೆಯು ನ್ಯಾಯಾಲಯದಿಂದ, ಡಿಕ್ರಿ ಮಾಡಲಾದ ಪರಿಹಾರದ ಸಂಬಂಧದಲ್ಲಿದ್ದರೆ ಕಡಿಮೆ ಬಿದ್ದ ಫೀಜನ್ನು ಭೂ ಕಂದಾಯದ ಬಾಕಿಯೆಂಬಂತೆ ವಸೂಲು ಮಾಡತಕ್ಕದ್ದು.

(ಡಿ) ಅಧೀನ ನ್ಯಾಯಾಲಯದಲ್ಲಿ ಪಾವತಿಸಿದ ಫೀಜು ಹೆಚ್ಚಾಗಿದ್ದರೆ, ಆ ಹೆಚ್ಚಳವನ್ನು ಅದಕ್ಕೆ ಹಕ್ಕುಳ್ಳ ಪಕ್ಷಕಾರನಿಗೆ ಹಿಂದಿರುಗಿಸಲು ನ್ಯಾಯಾಲಯವು ನಿರ್ದೇಶಿಸತಕ್ಕದ್ದು.

(5) ಪ್ರತಿವಾದಿಯ, ಲಿಖಿತ ವಿವರಪತ್ರದ ಮೇಲೆ ಉದ್ಭವಿಸುವ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವುದಕ್ಕಾಗಿ ಮೌಲ್ಯವನ್ನು ಕುರಿತು ಇರುವ ಎಲ್ಲ ಪ್ರಶ್ನೆಗಳು, ಕ್ಲೇಮಿನ ಗುಣದೋಷಗಳ ಮೇಲೆ ಅಂಥ ಪ್ರತಿವಾದಿಗೆ ಪರಿಣಾಮ ಬೀರುವಂಥ ಸಾಕ್ಷ್ಯವನ್ನು ದಾಖಲು ಮಾಡುವುದಕ್ಕೆ ಮುಂಚೆ ಸುನಾವಣೆ ಮಾಡಿ ತೀರ್ಮಾನಿಸತಕ್ಕದ್ದು.

**ವಿವರಣೆ.-** ಈ ಪ್ರಕರಣದಲ್ಲಿ "ಕ್ಲೇಮಿನ ಗುಣದೋಷಗಳು"ಎಂಬ ಪದಾವಳಿಯು, ದಾವೆಯ ರಚನೆಗೆ, ಪಕ್ಷಕಾರರ ತಪ್ಪು ಸೇರ್ಪಡೆಗೆ ಮತ್ತು ವ್ಯಾಜ್ಯ ಕಾರಣಗಳಿಗೆ, ದಾವೆಯನ್ನು ಪುರಸ್ಕರಿಸುವುದಕ್ಕೆ ಅಥವಾ ವಿಚಾರಣೆ ಮಾಡಲು ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಅಥವಾ ಸಂದಾಯ ಮಾಡಬಹುದಾದ ಫೀಜಿಗೆ ಸಂಬಂಧಿಸಿರದ,

ಆದರೆ ಪೂರ್ವ ನ್ಯಾಯನಿರ್ಣಯ, ಕಾಲಪರಿಮಿತಿಯ ಮತ್ತು ಅದೇ ರೀತಿಯ ವಾದಗಳ ಮೇಲೆ ಉದ್ಭವಿಸುವ ವಿಷಯಗಳನ್ನು ಒಳಗೊಂಡ ದಾವೆಯಲ್ಲಿ ನಿರ್ಧರಣೆಯ ಸಲುವಾಗಿ ಉದ್ಭವಿಸುವ ವಿಷಯಗಳನ್ನು ಉಲ್ಲೇಖಿಸುತ್ತದೆ.

**12. ರೂಪಿತ ವಿವಾದಾಂಶಗಳ ಮೇಲೆ ಹೆಚ್ಚಿನ ಫೀಜು.-** ದಾವೆಯಲ್ಲಿ ರೂಪಿತವಾದ ವಿವಾದಾಂಶದ ಕಾರಣದಿಂದ ಹೆಚ್ಚಿನ ಫೀಜು ಪಾವತಿಸಲು ಹೊಣೆಗಾರನಾಗುವ ಪಕ್ಷಕಾರನು, ಅವಕಾಶ ನೀಡಲಾದ ಕಾಲದೊಳಗೆ, ಅದನ್ನು ಪಾವತಿಸದಿದ್ದಲ್ಲಿ ನ್ಯಾಯಾಲಯವು ವಿವಾದಾಂಶವನ್ನು ವಜಾ ಮಾಡತಕ್ಕದ್ದು ಮತ್ತು ಮೊಕದ್ದಮೆಯಲ್ಲಿರುವ ಇತರ ವಿವಾದಾಂಶಗಳನ್ನು ಸುನಾವಣೆ ಮಾಡಿ ತೀರ್ಮಾನಿಸಲು ಉಪಕ್ರಮಿಸತಕ್ಕುದೆಂಬ ಮಾರ್ಪಾಡಿಗೆ ಒಳಪಟ್ಟು, ಅಂಥ ಹೆಚ್ಚಿನ ಫೀಜಿನ ನಿರ್ಧರಣೆಗೆ ಅಥವಾ ವಿಧಿಸುವಿಕೆಗೆ ಹಿಂದಿನ ಕೊನೆಯ ಪ್ರಕರಣದ ಉಪಬಂಧಗಳು ಅನ್ವಯಿಸತಕ್ಕದ್ದು.

**13. ಕ್ಲೇಮಿನ ಭಾಗವನ್ನು ಬಿಟ್ಟುಕೊಡುವುದು.-** ಹೆಚ್ಚಿನ ಫೀಜನ್ನು ಪಾವತಿಸುವುದಕ್ಕಾಗಿ ಕರೆಯಲಾದ ವಾದಿಯು, ತನ್ನ ಕ್ಲೇಮಿನ ಭಾಗವನ್ನು ಬಿಟ್ಟು ಕೊಡಬಹುದು ಮತ್ತು ಪಾವತಿಸಿರುವ ಫೀಜು ವಾದಪತ್ರದಲ್ಲಿ ಮಾಡಿರುವ ಕ್ಲೇಮಿನ ತಿದ್ದುಪಡಿ ಮಾಡುವುದಕ್ಕೆ ಸಾಕಷ್ಟಾಗುವಂತೆ ಇದ್ದರೆ ವಾದಪತ್ರವನ್ನು ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಬಹುದು. ನ್ಯಾಯಾಲಯವು, ನ್ಯಾಯವೆಂದು ತಾನು ಪರ್ಯಾಲೋಚಿಸುವಂಥ ನಿಬಂಧನೆಗಳ ಮೇರೆಗೆ ಅಂಥ ಅರ್ಜಿಯನ್ನು ಅಂಗೀಕರಿಸತಕ್ಕದ್ದು ಮತ್ತು ಹಾಗೆ ತಿದ್ದುಪಡಿ ಮಾಡಿದ ವಾದಪತ್ರದಲ್ಲಿ ಮಾಡಿದ ಕ್ಲೇಮಿನ ಬಗ್ಗೆ ವಿಚಾರಣೆ ಮಾಡಿ ತೀರ್ಮಾನಿಸಲು ಮುಂದುವರಿಯತಕ್ಕದ್ದು; ಪರಂತು, ಹಾಗೆ ಬಿಟ್ಟು ಕೊಡಲಾದ ಭಾಗವನ್ನು ದಾವೆಯ ಅನಂತರದ ಯಾವುದೇ ಹಂತದಲ್ಲಿ ಕ್ಲೇಮಿಗೆ ಸೇರಿಸಲು ವಾದಿಗೆ ಅನುಮತಿ ಕೊಡತಕ್ಕದ್ದಲ್ಲ.

**14. ಲಿಖಿತ ವಿವರಣ ಪತ್ರಗಳ ಮೇಲೆ ಪಾವತಿಮಾಡಬಹುದಾದ ಫೀಜು.-** ಒಬ್ಬ ಪ್ರತಿವಾದಿಯು ದಾಖಲು ಮಾಡಿದ ಲಿಖಿತ ವಿವರಣ ಪತ್ರದ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಫೀಜನ್ನು ಪಾವತಿಸಬೇಕಿರುವಾಗ, ಸಂಬಂಧಪಟ್ಟ ಪ್ರತಿವಾದಿಯು, ಸದರಿ ಉದ್ದೇಶಕ್ಕಾಗಿ ವಾದಿಯೆಂದೂ ಮತ್ತು ಯಾರ ವಿರುದ್ಧ ಕ್ಲೇಮು ಮಾಡಲಾಗಿದೆಯೋ ಆ ವಾದಿಯನ್ನು ಅಥವಾ ಸಹಪ್ರತಿವಾದಿಯನ್ನು ಅಥವಾ ತೃತೀಯ ಪಕ್ಷಕಾರನನ್ನು ಪ್ರತಿವಾದಿಯೆಂದು ತಿಳಿಯತಕ್ಕದ್ದು, ಪ್ರಕರಣ 11ರ ಉಪಬಂಧಗಳು ಅಂಥ ವಾದ ಪತ್ರದ ಮೇಲೆ ಸಲ್ಲಿಸಬಹುದಾದ ಫೀಜಿನ ನಿರ್ಧರಣೆಗೆ ಮತ್ತು ವಿಧಿಸುವಿಕೆಗೆ ಅನ್ವಯವಾಗತಕ್ಕದ್ದು.

**15. ಅಪೀಲು, ಇತ್ಯಾದಿಗಳ ಮೇಲೆ ಪಾವತಿಸಬಹುದಾದ ಫೀಜು.-** ದಾವೆಗಳಲ್ಲಿ ವಾದಪತ್ರಗಳ ಮೇಲೆ ಫೀಜಿನ ನಿರ್ಧರಣೆಗೆ ಮತ್ತು ವಿಧಿಸುವಿಕೆಗೆ ಸಂಬಂಧಿಸಿದ 10 ರಿಂದ 13ರ ವರೆಗಿನ ಪ್ರಕರಣಗಳ ಉಪಬಂಧಗಳು, ಎರಡನೆಯ ಅಪೀಲಿನಲ್ಲಿ, ಅಪೀಲುಗಳ ವಿವರಣ ಪತ್ರಗಳು, ಎದುರು ಆಕ್ಷೇಪಣೆ ಅಥವಾ ಇತರ ವ್ಯವಹರಣೆಯ ಸಂಬಂಧದಲ್ಲಿ ಫೀಜು ನಿರ್ಧರಣೆಗೆ ಮತ್ತು ವಿಧಿಸುವಿಕೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**16. ಮನವಿಗಳು, ಆವೇದನ ಪತ್ರಗಳು, ಇತ್ಯಾದಿಗಳ ಮೇಲೆ ಪಾವತಿಸಬಹುದಾದ ಫೀಜು.-** 10 ರಿಂದ 13ರ ವರೆಗಿನ ಪ್ರಕರಣಗಳ ಉಪಬಂಧಗಳು, ದಾವೆಗಳಲ್ಲಿ ವಾದಪತ್ರಗಳ ಮೇಲಿನ ಫೀಜಿನ ನಿರ್ಧರಣೆಗೆ ಮತ್ತು

ವಿಧಿಸುವಿಕೆಗೆ ಅನ್ವಯವಾಗುವ ಹಾಗೆಯೇ, ನ್ಯಾಯಾಲಯಗಳಲ್ಲಿ ಮನವಿ ಪತ್ರಗಳ, ಅರ್ಜಿಗಳ ಮತ್ತು ಇತರ ವ್ಯವಹರಣೆಗಳ ಸಂಬಂಧದಲ್ಲಿ ಫೀಜಿನ ನಿರ್ಧರಣೆಗೆ ಮತ್ತು ವಿಧಿಸುವಿಕೆಗೆ, ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**17. ನ್ಯಾಯಾಲಯ ಫೀಜು ಪರೀಕ್ಷಕರು.-** (1) ನ್ಯಾಯಾಲಯಗಳಲ್ಲಿ ವಸ್ತು-ವಿಷಯದ ಮೌಲ್ಯ ನಿಗದಿಗೆ ಮತ್ತು ಅವುಗಳ ವ್ಯವಹರಣೆಗಳ ಬಗೆಗಿನ ಫೀಜು, ಸಾಕಷ್ಟಾಗಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕುರಿತು, ಆ ನ್ಯಾಯಾಲಯಗಳಿಗೆ ಮಾಡಲಾಗಿದ್ದ ಮನವಿಗಳ ಮತ್ತು ಅವುಗಳ ಮೇಲೆ ಮಾಡಿದ ಆದೇಶಗಳ ಸರಿತನವನ್ನು ಪರೀಕ್ಷಿಸುವ ದೃಷ್ಟಿಯಿಂದ ಅಧೀನ ನ್ಯಾಯಾಲಯಗಳ ದಾಖಲೆಗಳನ್ನು ಪರಿಶೀಲಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಫೀಜು ಪರೀಕ್ಷಕರೆಂದು, ಹೆಸರಿಸಿದ ಅಧಿಕಾರಿಗಳನ್ನು ಉಚ್ಚ ನ್ಯಾಯಾಲಯವು ಪ್ರತಿನಿಯೋಜಿಸಬಹುದು.

(2) ಅಂಥ ನ್ಯಾಯಾಲಯದ ಫೀಜು ಪರೀಕ್ಷಕರು, ಒಪ್ಪಿಸಿದ ವರದಿಗಳಲ್ಲಿ ಎತ್ತಲಾದ ಮತ್ತು ನ್ಯಾಯಾಲಯದಲ್ಲಿ ಇತ್ಯರ್ಥವಾಗಲಿರುವ ಯಾವುದೇ ದಾವೆಗೆ, ಅಪೀಲಿಗೆ ಅಥವಾ ಇತರ ವ್ಯವಹರಣೆಗೆ ಸಂಬಂಧಿಸಿದ ಪ್ರಶ್ನೆಗಳನ್ನು, ಅಂಥ ನ್ಯಾಯಾಲಯದಿಂದ ಸುನಾವಣೆ ಮಾಡಿ ತೀರ್ಮಾನಿಸತಕ್ಕದ್ದು ಮತ್ತು ಅಂಥ ಯಾವುದೇ ವರದಿಯಲ್ಲಿ ಎತ್ತಲಾದ ಪ್ರಶ್ನೆಯನ್ನು ಸುನಾವಣೆ ಮಾಡಿ ತೀರ್ಮಾನಿಸುವಲ್ಲಿ, ಅದೇ ಪ್ರಶ್ನೆಯ ಮೇಲೆ ಆ ನ್ಯಾಯಾಲಯವು ನೀಡಿದ ಮುಂಚಿನ ತೀರ್ಮಾನವನ್ನು ಪುನರವಲೋಕಿಸುವುದು ನ್ಯಾಯಾಲಯಕ್ಕೆ ಕಾನೂನುಸಮ್ಮತವಾಗಿರತಕ್ಕದ್ದೆಂದು ಸಂದೇಹ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

**18. ತನಿಖೆ ಮತ್ತು ಕಾರ್ಯಾಜ್ಞೆ (ಕಮೀಷನ್).-** ದಾವೆಯ ವಸ್ತು ವಿಷಯದ ಅಥವಾ ಇತರ ವ್ಯವಹರಣೆಯ ಮೌಲ್ಯ ನಿಗದಿಯು ಯುಕ್ತವಾಗಿದೆಯೇ ಅಥವಾ ಸಂದಾಯ ಮಾಡಿದ ಫೀಜು ಸಾಕಷ್ಟಿದೆಯೇ ಎಂಬುದನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ, ನ್ಯಾಯಾಲಯವು ತಾನು ಯುಕ್ತವೆಂದು ಪರ್ಯಾಲೋಚಿಸುವ ತನಿಖೆಯನ್ನು ನಡೆಸಬಹುದು ಮತ್ತು ಅದು ಯುಕ್ತವೆಂದು ಭಾವಿಸಿದಲ್ಲಿ, ಅವಶ್ಯಕವಿರಬಹುದಾದಂಥ ಸ್ಥಳೀಯ ಅಥವಾ ಇತರ ತನಿಖೆಯನ್ನು ಮಾಡಲು ಮತ್ತು ಅದರ ಬಗ್ಗೆ ನ್ಯಾಯಾಲಯಕ್ಕೆ ವರದಿ ಮಾಡಲು ನಿರ್ದೇಶಿಸಿ ಯಾರೇ ಸೂಕ್ತ ವ್ಯಕ್ತಿಗೆ ಕಾರ್ಯಾಜ್ಞೆ (ಕಮೀಷನ್) ಹೊರಡಿಸಬಹುದು.

**19. ರಾಜ್ಯ ಸರ್ಕಾರಕ್ಕೆ ನೋಟೀಸು.-** ವಾದಪತ್ರದ, ಲಿಖಿತ ವಿವರಣಪತ್ರದ, ಮನವಿ ಪತ್ರದ, ಅಪೀಲು ವಿವರಣಪತ್ರದ ಅಥವಾ ಇತರ ದಸ್ತಾವೇಜಿನ ಮೇಲೆ ಪಾವತಿಸಬಹುದಾದ ಫೀಜಿಗೆ ಮತ್ತು ಯಾವ ಕ್ಲೇಮಿನ ವಸ್ತು ವಿಷಯಕ್ಕೆ, ವಾದಪತ್ರಕ್ಕೆ, ಲಿಖಿತ ವಿವರಣ ಪತ್ರಕ್ಕೆ, ಮನವಿ ಪತ್ರಕ್ಕೆ, ಅಪೀಲು ವಿವರಣ ಪತ್ರಕ್ಕೆ ಅಥವಾ ಇತರ ದಸ್ತಾವೇಜಿಗೆ ಸಂಬಂಧಪಟ್ಟ, ಕ್ಲೇಮಿನ ವಸ್ತು ವಿಷಯದ ಮೌಲ್ಯ ನಿಗದಿಯು ಸಂಬಂಧಿಸಿದೆಯೋ ಅದರ ವಿಚಾರಣೆಯಲ್ಲಿ ಅಂಥ ಮೌಲ್ಯ ನಿಗದಿಯು ಪಾವತಿಸಬೇಕಾದ ಫೀಜಿನ ಮೇಲೆ ಪರಿಣಾಮ ಬೀರುವಷ್ಟರ ಮಟ್ಟಿಗೆ, ರಾಜ್ಯ ಸರ್ಕಾರಕ್ಕೆ ನೋಟೀಸು ಕೊಡುವುದು ನ್ಯಾಯೋಚಿತವೆಂದು ಅಥವಾ ಅವಶ್ಯಕವೆಂದು ನ್ಯಾಯಾಲಯವು

ಪರ್ಯಾಲೋಚಿಸಿದರೆ, ಮೇಲೆ ಹೇಳಿರುವ ಯಾವುದೇ ದಸ್ತಾವೇಜುಗಳ ಪ್ರತಿಯೊಡನೆ ಅದಕ್ಕೆ ನೋಟೀಸು ಕೊಡಬಹುದು ಮತ್ತು ಅಂಥ ನೋಟೀಸು ಕೊಟ್ಟಿರುವಲ್ಲಿ, ಮೇಲೆ ಹೇಳಿರುವ ಪ್ರಶ್ನೆಯ ಅಥವಾ ಪ್ರಶ್ನೆಗಳ ನಿರ್ಧರಣೆಯ ಬಗ್ಗೆ ರಾಜ್ಯ ಸರ್ಕಾರವು ದಾವೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಒಂದು ಪಕ್ಷವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅಂಥ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ನ್ಯಾಯಾಲಯವು ಡಿಕ್ರಿಯನ್ನು ಅಥವಾ ಅಂತಿಮ ಆದೇಶವನ್ನು ಕೊಟ್ಟಾಗ, ಅಂಥ ಪ್ರಶ್ನೆಯ ಅಥವಾ ಪ್ರಶ್ನೆಗಳ ಮೇಲೆ ನ್ಯಾಯಾಲಯದ ತೀರ್ಮಾನವು ಅಂಥ ಡಿಕ್ರಿಯ ಅಥವಾ ಅಂತಿಮ ಆದೇಶದ ಭಾಗವಾಗಿರುತ್ತದೆಂದು ಭಾವಿಸತಕ್ಕದ್ದು.

## ಅಧ್ಯಾಯ IV

## ಫೀಜಿನ ಪರಿಗಣನೆ

**20. ಫೀಜನ್ನು ಹೇಗೆ ಲೆಕ್ಕಮಾಡುವುದು.-** ಈ ಅಧಿನಿಯಮದ ಮೇರೆಗೆ ಸಲ್ಲಿಸಬಹುದಾದ ಫೀಜನ್ನು ಈ ಅಧ್ಯಾಯದ, VIನೇ ಅಧ್ಯಾಯದ, VIIIನೇ ಅಧ್ಯಾಯದ ಮತ್ತು Iನೇ ಹಾಗೂ IIನೇ ಅನುಸೂಚಿಗಳ ಉಪಬಂಧಗಳ ಮೇರೆಗೆ ನಿರ್ಧರಿಸತಕ್ಕದ್ದು ಅಥವಾ ಲೆಕ್ಕಮಾಡತಕ್ಕದ್ದು.

**21. ಹಣಕ್ಕೆ ಸಂಬಂಧಿಸಿದ ದಾವೆಗಳು.-** ಹಣಕ್ಕೆ ಸಂಬಂಧಿಸಿದ ದಾವೆಯಲ್ಲಿ (ಹಾನಿ ಅಥವಾ ಪರಿಹಾರಕ್ಕೆ ಸಂಬಂಧಿಸಿದ ಅಥವಾ ಜೀವನಾಂಶದ, ವರ್ಷಾಶನಗಳ ಅಥವಾ ನಿಯತಕಾಲಿಕವಾಗಿ ಸಲ್ಲಿಸಬಹುದಾದ ಬೇರೆ ಮೊಬಲಗುಗಳ ಬಾಕಿಗಳಿಗೆ ಸಂಬಂಧಿಸಿದ ದಾವೆಯನ್ನು ಒಳಗೊಂಡಂತೆ) ಕ್ಲೇಮು ಮಾಡಿದ ಮೊಬಲಗಿನ ಮೇಲೆ ಫೀಜನ್ನು ಲೆಕ್ಕ ಮಾಡತಕ್ಕದ್ದು.

**22. ಜೀವನಾಂಶ ಮತ್ತು ವರ್ಷಾಶನಗಳಿಗೆ ಸಂಬಂಧಿಸಿದ ದಾವೆಗಳು.-** ಈ ಮುಂದೆ ಹೇಳಿರುವ ದಾವೆಗಳಲ್ಲಿ, ಮುಂದೆ ಹೇಳಿರುವಂತೆ ಫೀಜನ್ನು ಲೆಕ್ಕ ಮಾಡತಕ್ಕದ್ದು,-

(ಎ) ಜೀವನಾಂಶಕ್ಕೆ ಸಂಬಂಧಿಸಿದ ದಾವೆಯಲ್ಲಿ, ಒಂದು ವರ್ಷಕ್ಕಾಗಿ ಸಂದಾಯ ಮಾಡಬೇಕೆಂದು ಕ್ಲೇಮು ಮಾಡಲಾದ ಮೊಬಲಗಿನ ಮೇಲೆ;

(ಬಿ) ಜೀವನಾಂಶದ ಹೆಚ್ಚಳ ಅಥವಾ ಕಡಿತಕ್ಕೆ ಸಂಬಂಧಿಸಿದ ದಾವೆಯಲ್ಲಿ, ವಾರ್ಷಿಕ ಜೀವನಾಂಶದಲ್ಲಿ ಹೆಚ್ಚಿಸಬೇಕೆಂದು ಅಥವಾ ಕಡಿಮೆ ಮಾಡಬೇಕೆಂದು ಕೇಳಲಾದಷ್ಟು ಮೊಬಲಗಿನ ಮೇಲೆ;

(ಸಿ) ವರ್ಷಾಶನಗಳ ಅಥವಾ ನಿಯತಕಾಲಿಕವಾಗಿ ಸಂದಾಯ ಮಾಡಬಹುದಾದ ಇತರೆ ಮೊಬಲಗುಗಳಿಗೆ ಸಂಬಂಧಿಸಿದ ದಾವೆಯಲ್ಲಿ ಒಂದು ವರ್ಷಕ್ಕೆ ಪಾವತಿಸತಕ್ಕದ್ದೆಂದು ಕ್ಲೇಮು ಮಾಡಲಾದ ಮೊಬಲಗಿನ ಐದರಷ್ಟರ ಮೇಲೆ:

ಪರಂತು, ವರ್ಷಾಶನವನ್ನು ಐದು ವರ್ಷಗಳಿಗಿಂತ ಕಡಿಮೆಯಾಗಿ ಸಂದಾಯ ಮಾಡಬಹುದಾಗಿರುವಲ್ಲಿ, ಫೀಜನ್ನು ಸಂದಾಯ ಮಾಡಬಹುದಾದ ಮೊಬಲಗುಗಳ ಒಟ್ಟು ಮೊತ್ತದ ಮೇಲೆ ಲೆಕ್ಕ ಮಾಡತಕ್ಕದ್ದು:

ಮತ್ತೂ ಪರಂತು, ಜೀವನಾಂಶದ ಹೆಚ್ಚಳಕ್ಕೆ ಸಂಬಂಧಿಸಿದ ದಾವೆಯನ್ನು, ಹೆಚ್ಚಿಗೆ ಕೋರಲಾದ ದರದ ಪ್ರಕಾರ ಜೀವನಾಂಶದ ದಾವೆಯನ್ನು ಸ್ವೀಕರಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ ಹೂಡತಕ್ಕದ್ದು ಮತ್ತು ಜೀವನಾಂಶದ ಕಡಿತಕ್ಕೆ ಸಂಬಂಧಿಸಿದ ದಾವೆಯನ್ನು, ಕಡಿತಗೊಳಿಸಲು ಕ್ಲೇಮು ಮಾಡಲಾದ ದರದ ಪ್ರಕಾರ ಜೀವನಾಂಶದ ದಾವೆಯನ್ನು ಸ್ವೀಕರಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ ಹೂಡತಕ್ಕದ್ದು.

**23. ಚರ ಸ್ವತ್ತಿಗೆ ಸಂಬಂಧಿಸಿದ ದಾವೆಗಳು.-** (1) ಸ್ವಾಮ್ಯದ ದಸ್ತಾವೇಜುಗಳನ್ನು ಹೊರತುಪಡಿಸಿ ಇತರ ಚರ ಸ್ವತ್ತಿಗೆ ಸಂಬಂಧಿಸಿದ ದಾವೆಯಲ್ಲಿ ಫೀಜನ್ನು ಕೆಳಗಿನಂತೆ ಎಂದರೆ:-

(ಎ) ದಾವೆಯ ವಸ್ತು ವಿಷಯಕ್ಕೆ ಮಾರುಕಟ್ಟೆಯ ಮೌಲ್ಯವಿರುವಲ್ಲಿ, ಅಂಥ ಮೌಲ್ಯದ ಮೇಲೆ ಅಥವಾ

(ಬಿ) ದಾವೆಯ ವಸ್ತು ವಿಷಯಕ್ಕೆ ಮಾರುಕಟ್ಟೆಯ ಮೌಲ್ಯವಿರದಿದ್ದಲ್ಲಿ; ವಾದಪತ್ರದಲ್ಲಿ ಕೋರಲಾದ ಪರಿಹಾರದ ಮೌಲ್ಯ ನಿಗದಿ ಮಾಡಲಾಗುವ ಮೊಬಲಗಿನ ಮೇಲೆ

- ಲೆಕ್ಕಮಾಡತಕ್ಕದ್ದು:

ಪರಂತು, ದಾವೆಯು, ಋಣ ತೀರಿಸುವಿಕೆ ಭದ್ರತೆಯಾಗಿ ಒತ್ತೆ ಇಡಲಾದ ವಸ್ತುಗಳಿಗೆ ಸಂಬಂಧಿಸಿದಂತೆ ಇರುವಲ್ಲಿ, ಫೀಜನ್ನು ಋಣದ ಮೊಬಲಗಿನ ಮೇಲೆ ಲೆಕ್ಕಮಾಡತಕ್ಕದ್ದು.

(2) (ಎ) ಸ್ವಾಮ್ಯದ ದಸ್ತಾವೇಜುಗಳ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಯಲ್ಲಿ,-

(i) ದಸ್ತಾವೇಜಿನ ಮೂಲಕ ಭದ್ರಪಡಿಸಲಾದ ಹಣದ ಮೇಲೆ ಅಥವಾ ಸ್ವತ್ತಿನ ಮೇಲೆ ವಾದಿಗೆ ಇರುವ ಹಕ್ಕನ್ನು ನಿರಾಕರಿಸಲಾಗಿದೆಯೆಂದು ವಾದಪತ್ರದಲ್ಲಿ ಆಪಾದಿಸಲಾಗಿರುವಲ್ಲಿ; ಅಥವಾ

(ii) ದಸ್ತಾವೇಜಿನ ಮೂಲಕ ಭದ್ರಪಡಿಸಲಾದ ಹಣದ ಮೇಲೆ ಅಥವಾ ಸ್ವತ್ತಿನ ಮೇಲೆ ವಾದಿಗೆ ಇರುವ ಹಕ್ಕಿನ ಬಗ್ಗೆ ವಾದಾಂಶವನ್ನು ರೂಪಿಸಲಾಗಿರುವಲ್ಲಿ

-ಫೀಜನ್ನು ದಸ್ತಾವೇಜಿನ ಮೂಲಕ ಭದ್ರಪಡಿಸಲಾದ ಮೊಬಲಗಿನ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಎಂಟರಲ್ಲಿ ಒಂದು ಅಂಶದ ಮೇಲೆ ಪರಿಗಣಿಸತಕ್ಕದ್ದು:

ಪರಂತು, ವಾದಪತ್ರದಲ್ಲಿ ಅಥವಾ ರೂಪಿಸಲಾದ ವಾದಾಂಶದಲ್ಲಿ ಇರುವ ಆಪಾದನೆಯು ಮೊಬಲಗಿನ ಅಥವಾ ಸ್ವತ್ತಿನ ಒಂದು ಭಾಗಕ್ಕೆ ಮಾತ್ರ ಸಂಬಂಧಿಸಿರುವಲ್ಲಿ, ಫೀಜನ್ನು ಮೊಬಲಗಿನ ಅಂಥ ಭಾಗದ ಎಂಟನೇ ಒಂದು ಅಂಶದ ಮೇಲೆ ಅಥವಾ ಸ್ವತ್ತಿನ ಅಂಥ ಭಾಗದ ಮಾರುಕಟ್ಟೆ ಮೌಲ್ಯದ ಎಂಟನೇ ಒಂದು ಅಂಶದ ಮೇಲೆ ಲೆಕ್ಕಮಾಡತಕ್ಕದ್ದು.

(ಬಿ) ದಸ್ತಾವೇಜಿನ ಮೂಲಕ ಭದ್ರಪಡಿಸಲಾದ ಹಣದ ಅಥವಾ ಸ್ವತ್ತಿನ ಬಗ್ಗೆ ವಾದಿಯ ಹಕ್ಕನ್ನು ನಿರಾಕರಿಸಿರದಿದ್ದಲ್ಲಿ, ಸ್ವಾಮ್ಯದ ದಸ್ತಾವೇಜುಗಳ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಯಲ್ಲಿ, ವಾದಪತ್ರದಲ್ಲಿ ಕೋರಲಾದ ಪರಿಹಾರದ ಬಗ್ಗೆ ಮಾಡಲಾದ ಮೌಲ್ಯ ನಿಗದಿಯ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

**ವಿವರಣೆ.-** "ಸ್ವಾಮ್ಯದ-ದಸ್ತಾವೇಜು"ಎಂಬ ಪದದ ಅರ್ಥವು, ಯಾವುದೇ ಸ್ವತ್ತಿನಲ್ಲಿ ನಿಹಿತವಾದ ಅಥವಾ ಅವಲಂಬಿತವಾದ ಯಾವುದೇ ಅಧಿಕಾರವನ್ನು, ಹಕ್ಕನ್ನು ಅಥವಾ ಹಿತಾಸಕ್ತಿಯನ್ನು ಪ್ರಸ್ತುತದಲ್ಲಿ ಅಥವಾ ಭವಿಷ್ಯದಲ್ಲಿ ಸೃಷ್ಟಿಸುವುದಾಗಿ, ಘೋಷಿಸುವುದಾಗಿ, ವಹಿಸಿಕೊಡುವುದಾಗಿ, ಸೀಮಿತಗೊಳಿಸುವುದಾಗಿ ಅಥವಾ ಅಂತ್ಯಗೊಳಿಸುವುದಾಗಿ ಭಾವಿಸಲಾಗುವ ಅಥವಾ ಪ್ರವರ್ತಿಸುವ ದಸ್ತಾವೇಜು ಎಂಬ ಅರ್ಥ ಹೊಂದಿರುತ್ತದೆ.

**24. ಘೋಷಣೆಗೆ ಸಂಬಂಧಿಸಿದ ದಾವೆಗಳು:-** 25ನೇ ಪ್ರಕರಣದಲ್ಲಿ ಒಳಗೊಳ್ಳದ ಆನುಷಂಗಿಕ ಪರಿಹಾರದೊಡನೆ ಅಥವಾ ಇಲ್ಲದೆ ಘೋಷಣಾತ್ಮಕ ಡಿಕ್ರಿಗೆ ಅಥವಾ ಆದೇಶಕ್ಕೆ ಸಂಬಂಧಿಸಿದ ದಾವೆಯಲ್ಲಿ,

(ಎ) ಘೋಷಣೆಯು ಸಂಬಂಧಿಸಿದ ಸ್ವತ್ತಿನ ಘೋಷಣೆಗಾಗಿ ಮತ್ತು ಸ್ವಾಧೀನಕ್ಕಾಗಿ ಪ್ರಾರ್ಥನೆ ಇರುವಲ್ಲಿ, ಸ್ವತ್ತಿನ ಮಾರುಕಟ್ಟೆ-ಮೌಲ್ಯ ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕ ಮಾಡತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಪ್ರಾರ್ಥನೆಯನ್ನು, ಘೋಷಣೆಗೆ ಸಂಬಂಧಿಸಿದಂತೆ ಮತ್ತು ತತ್ಪರಿಣಾಮದ ನಿರ್ಬಂಧಾಜ್ಞೆಗೆ ಸಂಬಂಧಿಸಿದಂತೆ, ಮಾಡಿರುವಲ್ಲಿ ಮತ್ತು ಪ್ರಾರ್ಥಿಸಲಾದ ಪರಿಹಾರವು ಯಾವುದೇ ಸ್ಥಿರಸ್ವತ್ತಿಗೆ ಸಂಬಂಧಿಸಿರುವಲ್ಲಿ, ಸ್ವತ್ತಿನ ಮಾರುಕಟ್ಟೆ-ಮೌಲ್ಯದ ಅರ್ಧದಷ್ಟು ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿ) XXX][1]

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) ಇತರೆ ಸಂದರ್ಭಗಳಲ್ಲಿ, ದಾವೆಯ ವಸ್ತು ವಿಷಯದ ಮೌಲ್ಯ ನಿಗದಿ ಮಾಡಲು ಸಾಧ್ಯವಿರಲಿ ಅಥವಾ ಇಲ್ಲದಿರಲಿ, ವಾದಪತ್ರದಲ್ಲಿ ಕೋರಲಾದ ಪರಿಹಾರದ ಮೌಲ್ಯ ನಿಗದಿಯನ್ನು ಮಾಡಲಾದ ಮೊಬಲಗಿನ ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕ ಮಾಡತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**25. ದತ್ತಕದ ದಾವೆಗಳು:-** ದತ್ತಕದ ಮಾನ್ಯತೆ ಅಥವಾ ಅಮಾನ್ಯತೆ ಅಥವಾ ದತ್ತಕದ ಸತ್ಯತೆಯ ಘೋಷಣೆಗೆ ಸಂಬಂಧಿಸಿದ ದಾವೆಯಲ್ಲಿ, ಕೆಳಗಿನ ದರಗಳ ಪ್ರಕಾರ ಫೀಜನ್ನು ಸಂದಾಯ ಮಾಡತಕ್ಕದ್ದು:-

| | | | |
|---|---|---|---|
| (ಎ) | [1][XXX][1] [2][ಜೂನಿಯರ್ ಡಿವಿಜನ್ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ][2],- [1][XXX][1] ಪರಿಹಾರಕ್ಕೆ ಒಳಪಟ್ಟಿರುವ ಅಥವಾ ಅದರಿಂದ ಬಾಧಿತವಾದ ಸ್ವತ್ತಿನ ಮಾರುಕಟ್ಟೆ ಮೌಲ್ಯವು 5,000 ರೂಪಾಯಿಗಳಿಗೆ ಮೀರದಿರುವಾಗ | | ಇಪ್ಪತ್ತೈದು ರೂಪಾಯಿಗಳು |
| 1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.<br>2. 1996ರ ಅಧಿನಿಯಮ ಸಂಖ್ಯೆ 16ರ ಮೂಲಕ 21.09.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | | |
| (ಬಿ) | (i) | [1][ಜೂನಿಯರ್ ಡಿವಿಜನ್ (ಸಿವಿಲ್ ನ್ಯಾಯಾಧೀಶನ)][1] ನ್ಯಾಯಾಲಯದಲ್ಲಿ, ಪರಿಹಾರಕ್ಕೆ ಒಳಪಟ್ಟಿರುವ ಅಥವಾ ಅದರಿಂದ ಪ್ರಭಾವಿತವಾದ ಸ್ವತ್ತಿನ ಮಾರುಕಟ್ಟೆ ಮೌಲ್ಯವು 5.000 ರೂಪಾಯಿಗಳಿಗೆ ಮೀರಿರುವಾಗ ಮತ್ತು 15,000 ರೂಪಾಯಿಗಳಿಗಿಂತ ಹೆಚ್ಚಿರುವಾ | ಪರಿಹಾರಕ್ಕೆ ಒಳಪಟ್ಟಿರುವ ಅಥವಾ ಅದರಿಂದ ಬಾಧಿತವಾದ, ಸ್ವತ್ತಿನ ಮಾರುಕಟ್ಟೆ ಮೌಲ್ಯವು 15000 ರೂಪಾಯಿಗಳು ಅಥವಾ ಕಡಿಮೆ ಇದ್ದರೆ, ಒಂದುನೂರು ರೂಪಾಯಿಗಳು ಮತ್ತು 15000 ರೂಪಾಯಿಗಳಿಗೆ ಮೇಲ್ಪಟ್ಟಿದರೆ ಎರಡು ನೂರು ಐವತ್ತು ರೂಪಾಯಿಗಳು. |
| | (ii) | (ಎ) ರಲ್ಲಿ ಉಲ್ಲೇಖಿಸಿರುವ ನ್ಯಾಯಾಲಯಗಳನ್ನು ಹೊರತುಪಡಿಸಿ ಇತರ ಯಾವುದೇ ನ್ಯಾಯಾಲಯದಲ್ಲಿ [2][XXX][2] | |
| 1. 1996ರ ಅಧಿನಿಯಮ ಸಂಖ್ಯೆ 13ರ ಮೂಲಕ 21.09.1996 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | | |

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ ದಿನಾಂಕ 01.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**26. ನಿರ್ಬಂಧಕಾಜ್ಞೆಗಾಗಿ ದಾವೆಗಳು.-** ನಿರ್ಬಂಧಾಜ್ಞೆಗಾಗಿ ಹೂಡಿದ ದಾವೆಯಲ್ಲಿ,-

(ಎ) ಕೋರಲಾದ ಪರಿಹಾರವು ಯಾವುದೇ ಸ್ಥಿರ ಸ್ವತ್ತಿಗೆ ಸಂಬಂಧಿಸಿರುವಲ್ಲಿ; ಮತ್ತು

(i) ವಾದಿಯು, ಸ್ವತ್ತಿನಲ್ಲಿರುವ ತನ್ನ ಹಕ್ಕನ್ನು ನಿರಾಕರಿಸಲಾಗಿದೆಯೆಂದು ಆಪಾದಿಸಿರುವಲ್ಲಿ; ಅಥವಾ

(ii) ಸ್ವತ್ತಿನಲ್ಲಿ ವಾದಿಗಿರುವ ಹಕ್ಕಿನ ಬಗ್ಗೆ ವಿವಾದಾಂಶವನ್ನು ರೂಪಿಸಲಾಗಿರುವಲ್ಲಿ

- ಸ್ವತ್ತಿನ ಮಾರುಕಟ್ಟೆ ಮೌಲ್ಯದ ಅರ್ಧದಷ್ಟು ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) XXX][1]

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಸಿ) ಯಾವುದೇ ಇತರೆ ಸಂದರ್ಭದಲ್ಲಿ, ದಾವೆಯ ವಸ್ತು ವಿಷಯವು ಮಾರುಕಟ್ಟೆ ಮೌಲ್ಯವನ್ನು ಹೊಂದಿರಲಿ ಅಥವಾ ಹೊಂದಿಲ್ಲದಿರಲಿ, ವಾದಪತ್ರದಲ್ಲಿ ಕೋರಲಾದ ಪರಿಹಾರದ ಬಗ್ಗೆ ಮಾಡಲಾದ ಮೌಲ್ಯ ನಿಗದಿಯ ಮೊಬಲಗು ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

1. 1979ರ ಅಧಿನಿಯಮ ಸಂಖ್ಯೆ 21ರ ಮೂಲಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**27. ನ್ಯಾಸದ ಸ್ವತ್ತಿಗೆ ಸಂಬಂಧಪಟ್ಟ ದಾವೆಗಳು.-** ನ್ಯಾಸಧಾರಿಗಳ ನಡುವೆ ಅಥವಾ ನ್ಯಾಸಧಾರಿಯ ಪದಕ್ಕಾಗಿ ಪ್ರತಿಸ್ಪರ್ಧಿಗಳ ನಡುವೆ ಅಥವಾ ನ್ಯಾಸಧಾರಿಯ ಮತ್ತು ನ್ಯಾಸಧಾರಿಯಾಗಿರುವುದು ಕೊನೆಗೊಂಡಂಥ ವ್ಯಕ್ತಿಯ ನಡುವೆ, ನ್ಯಾಸದ ಸ್ವತ್ತಿನ ಸ್ವಾಧೀನತೆಗೆ ಅಥವಾ ಸಹ ಸ್ವಾಧೀನಕ್ಕೆ ಸಂಬಂಧಿಸಿದ ಅಥವಾ ಸ್ವತ್ತಿನ ಸಂಬಂಧದಲ್ಲಿ ಅನುಷಂಗಿಕ ಪರಿಹಾರದೊಡನೆ ಇರುವ ಅಥವಾ ಇಲ್ಲದಿರುವ, ಘೋಷಣಾತ್ಮಕ ಡಿಕ್ರಿಗೆ ಸಂಬಂಧಿಸಿದ ದಾವೆಯಲ್ಲಿ, ಎರಡು ನೂರು ರೂಪಾಯಿಗಳ ಗರಿಷ್ಠ ಫೀಜಿಗೊಳಪಟ್ಟು, ಸ್ವತ್ತಿನ ಮಾರುಕಟ್ಟೆ-ಮೌಲ್ಯದ ಐದನೇ ಒಂದು ಅಂಶದ ಮೇಲೆ ಅಥವಾ ಸ್ವತ್ತಿಗೆ ಮಾರುಕಟ್ಟೆ ಮೌಲ್ಯವಿರದಿದ್ದರೆ ಒಂದು ಸಾವಿರ ರೂಪಾಯಿಗಳ ಮೇಲೆ ಫೀಜನ್ನು ಪರಿಗಣಿಸತಕ್ಕದ್ದು:

ಪರಂತು ಸ್ವತ್ತಿಗೆ ಮಾರುಕಟ್ಟೆ ಮೌಲ್ಯವಿರದಿದ್ದಲ್ಲಿ, ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಮೌಲ್ಯವು, ವಾದಪತ್ರದಲ್ಲಿ ವಾದಿಯು ಹೇಳಿರುವಂಥ ಮೊಬಲಗು ಆಗಿರತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ ಹಿಂದೂ, ಮುಸ್ಲಿಮ್ ಅಥವಾ ಇತರ ಮತೀಯ ಅಥವಾ ಧರ್ಮಾರ್ಥ ದತ್ತಿಯಲ್ಲಿ ಒಳಗೊಂಡಿರುವ ಸ್ವತ್ತನ್ನು, ನ್ಯಾಸದ ಸ್ವತ್ತೆಂದು ಭಾವಿಸತಕ್ಕದ್ದು ಮತ್ತು ಅಂಥ ಸ್ವತ್ತಿನ ವ್ಯವಸ್ಥಾಪಕನನ್ನು ಅದರ ನ್ಯಾಸಧಾರಿಯಾಗಿರುವುದಾಗಿ ಭಾವಿಸತಕ್ಕದ್ದು.

**28. ನಿರ್ದಿಷ್ಟ ಪರಿಹಾರ ಅಧಿನಿಯಮ, 1877ರ ಮೇರೆಗೆ ಸ್ವಾಧೀನಕ್ಕಾಗಿನ ದಾವೆಗಳು.-** ನಿರ್ದಿಷ್ಟ ಪರಿಹಾರ ಅಧಿನಿಯಮ, 1877 (1877ರ ಕೇಂದ್ರ ಅಧಿನಿಯಮ I)ರ 9ನೇ ಪ್ರಕರಣದ ಮೇರೆಗೆ ಸ್ಥಿರಸ್ವತ್ತಿನ ಸ್ವಾಧೀನಕ್ಕಾಗಿ ಹೂಡಿದ ದಾವೆಯಲ್ಲಿ, ಸ್ವತ್ತಿನ ಮಾರುಕಟ್ಟೆ-ಮೌಲ್ಯದ ಅರ್ಧದಷ್ಟು ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**29. ಅನ್ಯಥಾ ಉಪಬಂಧಿಸಿರದ ಸ್ವಾಧೀನಕ್ಕಾಗಿ ದಾವೆಗಳು.-** ಅನ್ಯಥಾ ಉಪಬಂಧಿಸಿರದ ಸ್ಥಿರ ಸ್ವತ್ತಿನ ಸ್ವಾಧೀನಕ್ಕಾಗಿ ಹೂಡಿದ ದಾವೆಯಲ್ಲಿ, ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ [1][ಒಂದು ಸಾವಿರ ರೂಪಾಯಿಗಳು][1] ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

1. 1982ರ ಅಧಿನಿಯಮ ಸಂಖ್ಯೆ 13ರ ಮೂಲಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**30. ಅನುಭೋಗಗಳಿಗೆ ಸಂಬಂಧಿಸಿದ ದಾವೆಗಳು.-** ಅನುಭೋಗದ ಹಕ್ಕುಳ್ಳ ಮಾಲೀಕನಾಗಲೀ ಅಥವಾ ಅನುಭೋಗ ಹಕ್ಕಿಗೊಳಪಟ್ಟ ಭೂಮಿಯ ಮಾಲೀಕನಾಗಲೀ, ಅನುಭೋಗಕ್ಕೆ ಸಂಬಂಧಿಸಿದಂತೆ ಹೂಡಲಾದ ದಾವೆಯಲ್ಲಿ, ವಾದ ಪತ್ರದಲ್ಲಿ ಕೋರಲಾದ ಪರಿಹಾರದ ಮೌಲ್ಯವನ್ನು ನಿಗದಿ ಮಾಡಿ ಮೊಬಲಗಿನ ಮೇಲೆ, ಆದರೆ ಆ ಮೊಬಲಗು ಯಾವ ಸಂದರ್ಭದಲ್ಲಿಯೂ [1][ಒಂದು ಸಾವಿರ ರೂಪಾಯಿ][1]ಗಳಿಗಿಂತ ಕಡಿಮೆಯಾಗಿರದಿದ್ದರೆ ಆ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು:

1. 1979ರ ಅಧಿನಿಯಮ ಸಂಖ್ಯೆ 21ರ ಮೂಲಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

ಪರಂತು, ಅಂಥ ಅನುಭೋಗದ ಹಕ್ಕಿಗೆ ಸಂಬಂಧಿಸಿದಂತೆ ಇತರೆ ಪರಿಹಾರದ ಜೊತೆಗೆ ನಷ್ಟಪರಿಹಾರವನ್ನು ಕೋರಿದ್ದರೆ, ಅಂಥ ಇತರೆ ಪರಿಹಾರದ ಮೇಲೆ ಸಂದಾಯ ಮಾಡಬೇಕಾದ ಫೀಜಿನ ಜೊತೆಗೆ ನಷ್ಟಪರಿಹಾರವೆಂದು ಕೋರಲಾದ ಮೊಬಲಗಿನ ಮೇಲೆಯೂ ಫೀಜನ್ನು ಸಂದಾಯ ಮಾಡತಕ್ಕದ್ದು.

**31. ಪೂರ್ವ ಕ್ರಯಾಧಿಕಾರಕ್ಕೆ ಸಂಬಂಧಿಸಿದ ದಾವೆಗಳು.-** ಮೊದಲೇ ಕೊಳ್ಳುವ ಹಕ್ಕನ್ನು ಜಾರಿಗೊಳಿಸುವ ದಾವೆಯಲ್ಲಿ, ಪೂರ್ವಕ್ರಯ ಮಾಡುವವನು ಫೀಜನ್ನು ತಪ್ಪಿಸಬಯಸುವ ಮಾರಾಟದ ಪ್ರತಿಫಲದ ಮೊಬಲಗು ಅಥವಾ ಮಾರುಕಟ್ಟೆ ಮೌಲ್ಯ, ಇವೆರಡರಲ್ಲಿ ಯಾವುದು ಕಡಿಮೆಯೋ ಅದರ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

**32. ಅಡಮಾನಗಳಿಗೆ ಸಂಬಂಧಿಸಿದ ದಾವೆಗಳು.-** (1) ಅಡಮಾನದ ಮೇಲೆ ಬಾಕಿ ಇರುವ ಹಣದ ವಸೂಲಿಗಾಗಿನ ದಾವೆಯಲ್ಲಿ, ಕ್ಲೇಮು ಮಾಡಿದ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

**ವಿವರಣೆ.-** ಅಡಮಾನ ಮಾಡಲಾದ ಸ್ವತ್ತಿನ ಮಾರಾಟಕ್ಕಾಗಿ ಕೋರಲಾಗಿಲ್ಲವೆಂಬುದು ಮುಖ್ಯವಲ್ಲ.

(2) ಅಂಥ ದಾವೆಯಲ್ಲಿ ಮುಂಚಿನ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವವನು, ಪಕ್ಷಕಾರನಾಗಿ ಸೇರಿಕೊಂಡಿರುವಲ್ಲಿ ಮತ್ತು ಅವನು ತನ್ನ ಅಡಮಾನದ ಅಥವಾ ಋಣಭಾರದ ಮೇಲೆ ಬಾಕಿಯಿರುವ ಮೊಬಲಗನ್ನು ನಿರ್ಧರಿಸಲು ಹಾಗೂ ಅಂಥ ಮೊಬಲಗನ್ನು ತನಗೆ ಸಂದಾಯ ಮಾಡುವಂತೆ, ಡಿಕ್ರಿಯಲ್ಲಿ ಸೇರಿಸಲು ಅವನು ತನ್ನ ಲಿಖಿತ ವಿವರಣಪತ್ರದಲ್ಲಿ ಕೋರಿರುವಲ್ಲಿ, ಕ್ಲೇಮು ಮಾಡಿದ ಮೊಬಲಗಿನ ಮೇಲೆ ಲೆಕ್ಕಮಾಡಲಾದ ಲಿಖಿತ ವಿವರಪತ್ರದ ಮೇಲೆ, ಫೀಜನ್ನು ಸಂದಾಯ ಮಾಡತಕ್ಕದ್ದು:

ಪರಂತು, ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿದವನು ತನ್ನ ಲಿಖಿತ ವಿವರಣಪತ್ರಕ್ಕೆ ಸಂಬಂಧಿಸಿದ ಕ್ಲೇಮಿನ ಮೇಲೆ ಯಾವುದಾದರೂ ಬೇರೆ ವ್ಯವಹರಣೆಯಲ್ಲಿ ಫೀಜನ್ನು ಸಲ್ಲಿಸಿದ್ದರೆ, ಅಂಥ ಬೇರೆ ವ್ಯವಹರಣೆಯಲ್ಲಿ ಅವನು ಸಂದಾಯ ಮಾಡಿರುವ ಫೀಜಿಗೆ ಜಮೆ ಕೊಡತಕ್ಕದ್ದು.

(3) ಅಂಥ ದಾವೆಯಲ್ಲಿ, ಅಡಮಾನದ ಸ್ವತ್ತು ಮಾರಾಟವಾಗಿರುವಲ್ಲಿ, ಮುಂಚಿನ ಅಥವಾ ತರುವಾಯದ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವವನು, ತನ್ನ ಅಡಮಾನದ ಅಥವಾ ಋಣಭಾರದ ಮೇಲೆ ಬಾಕಿಯಿರುವ ಮೊಬಲಗನ್ನು, ಮಾರಾಟದ ಉತ್ಪತ್ತಿಯಿಂದ ಸಂದಾಯ ಮಾಡಬೇಕೆಂದು ಅರ್ಜಿಯನ್ನು ಸಲ್ಲಿಸಿರುವಲ್ಲಿ, ಮುಂಚಿನ ಅಥವಾ ತರುವಾಯದ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವವನು ತಾನು ಕ್ಲೇಮು ಮಾಡಿದ ಮೊಬಲಗಿನ ಮೇಲೆ ಲೆಕ್ಕಮಾಡಿರುವ ಫೀಜನ್ನು ತನ್ನ ಅರ್ಜಿಯ ಜೊತೆಗೆ ಸಂದಾಯ ಮಾಡತಕ್ಕದ್ದು:

ಪರಂತು, ಅಂಥ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವವನು, ಯಾವ ದಾವೆಯಲ್ಲಿ ಮಾರಾಟ ಜರುಗಿದೆಯೋ, ಆ ದಾವೆಯಲ್ಲಿ ಪಕ್ಷಕಾರನಾಗಿರುವಲ್ಲಿ ಮತ್ತು ದಾವೆಯಲ್ಲಿ ದಾಖಲು ಮಾಡಿರುವ ಲಿಖಿತ ವಿವರಣಪತ್ರದ ಮೇಲೆ, ಅವನು ಫೀಜನ್ನು ಸಂದಾಯ ಮಾಡಿರುವಲ್ಲಿ, ಮಾರಾಟದ ಉತ್ಪತ್ತಿಯಿಂದ ಸಂದಾಯ ಮಾಡಬೇಕೆಂದು ಸಲ್ಲಿಸಿರುವ ಅರ್ಜಿಯ ಜೊತೆಗೆ ಅವನು ಯಾವ ಫೀಜನ್ನೂ ಸಂದಾಯ ಮಾಡಬೇಕಿಲ್ಲ:

ಮತ್ತೂ ಪರಂತು, ಮಾರಾಟ ಜರುಗಿದ ದಾವೆಯಲ್ಲಿ ಪಕ್ಷಕಾರನಾಗಿರದ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿದವನು, ತನ್ನ ಅರ್ಜಿಗೆ ಸಂಬಂಧಿಸಿದ ಕ್ಲೇಮಿನ ಮೇಲೆ, ಬೇರೆ ಯಾವುದಾದರೂ

ವ್ಯವಹರಣೆಯಲ್ಲಿ ಫೀಜು ಸಲ್ಲಿಸಿದ್ದರೆ, ಅಂಥ ಯಾವುದಾದರೂ ಬೇರೆ ವ್ಯವಹರಣೆಯಲ್ಲಿ ಅವನು ಪಾವತಿಸಿರುವ ಫೀಜಿಗೆ ಜಮೆಯ ವಿವರಗಳನ್ನು ನೀಡತಕ್ಕದ್ದು.

(4) ಸಹ ಅಡಮಾನ ಪಡೆದವನು ತನ್ನ ಸ್ವಂತದ ಮತ್ತು ಇತರ ಸಹ-ಅಡಮಾನ ಪಡೆದವರ ಪ್ರಯೋಜನಕ್ಕಾಗಿ ಹೂಡಿರುವ ದಾವೆಯಲ್ಲಿ, ಇಡೀ ಅಡಮಾನದ ಮೇಲೆ ಕ್ಲೇಮು ಮಾಡಿದ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು:

ಪರಂತು, ಅಂಥ ದಾವೆಯಲ್ಲಿ ಪ್ರತಿವಾದಿಯಾಗಿ ಸೇರಿಸಲ್ಪಟ್ಟಿರುವ ಸಹ ಅಡಮಾನ ಪಡೆದವನು, ವಾದ ಪತ್ರದಲ್ಲಿ ಕ್ಲೇಮು ಮಾಡಿರುವುದಕ್ಕಿಂತ ಹೆಚ್ಚಿನ ಮೊಬಲಗನ್ನು ಇಡೀ ಅಡಮಾನದ ಮೇಲೆ ಕ್ಲೇಮು ಮಾಡಿರುವಲ್ಲಿ, ಅಂಥ ಪ್ರತಿವಾದಿಯು ಲಿಖಿತ ವಿವರಣ ಪತ್ರದಲ್ಲಿ ಕ್ಲೇಮು ಮಾಡಿದ ಸಂಪೂರ್ಣ ಮೊಬಲಗಿನ ಮೇಲೆ ಲೆಕ್ಕಹಾಕಲಾದ ಫೀಜು ಮತ್ತು ವಾದಪತ್ರದಲ್ಲಿ ಕ್ಲೇಮು ಮಾಡಿದ ಸಂಪೂರ್ಣ ಮೊಬಲಗಿನ ಮೇಲೆ ಲೆಕ್ಕಮಾಡಲಾದ ಫೀಜು, ಇವುಗಳ ನಡುವಿನ ವ್ಯತ್ಯಾಸವನ್ನು ಲಿಖಿತ ವಿವರಣ ಪತ್ರದ ಜೊತೆಗೆ ಪಾವತಿಸತಕ್ಕದ್ದು.

**ವಿವರಣೆ.-** ಈ ಉಪಪ್ರಕರಣದಲ್ಲಿರುವ ಯಾವುದೂ ಕಾಲಪರಿಮಿತಿ ಕಾನೂನಿನ ಮೇಲೆ ಪರಿಣಾಮ ಬೀರುತ್ತದೆಂದು ಅರ್ಥೈಸತಕ್ಕದ್ದಲ್ಲ.

(5) (ಎ) ಉಪ-ಅಡಮಾನ ಪಡೆದವನು ಅಡಮಾನ ಮಾಡಿದ ಸ್ವತ್ತಿನಲ್ಲಿ, ಅಡಮಾನ ಪಡೆದವನ ಹಿತಾಸಕ್ತಿಯ ಮಾರಾಟದಿಂದ ಕ್ಲೇಮು ಮಾಡಿದ ಮೊಬಲಗನ್ನು ವಸೂಲು ಮಾಡಿಕೊಳ್ಳಲು ಹೂಡಿರುವ ದಾವೆಯಲ್ಲಿ, ಉಪ-ಅಡಮಾನದ ಪ್ರಕಾರ ಕ್ಲೇಮು ಮಾಡಿದ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

(ಬಿ) ಉಪ-ಅಡಮಾನ ಪಡೆದವನು ಹೂಡಿರುವ ದಾವೆಯಲ್ಲಿ, ಮೂಲ ಅಡಮಾನ ಪಡೆದವನಿಗೆ, ಅಡಮಾನ ಮಾಡಿದ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಪ್ರಾರ್ಥನೆಯನ್ನು ಮಾಡಿದ್ದರೆ ಮತ್ತು ಮೂಲ ಅಡಮಾನದಾರನು ಕೂಡ ಪ್ರತಿವಾದಿಯಾಗಿ ಸೇರಿಸಲ್ಪಟ್ಟಿದ್ದರೆ, ತನಗೆ ಉಪ-ಅಡಮಾನ ಮಾಡಿರುವ ಮೂಲ ಅಡಮಾನದ ಮೇಲೆ ಕ್ಲೇಮು ಮಾಡಲಾದ ಇಡೀ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

(6) ಉಪಪ್ರಕರಣ (4)ಕ್ಕೆ ಅನ್ವಯಿಸುವ ಸಹ-ಅಡಮಾನ ಪಡೆದವನು, ಹೂಡಿರುವ ದಾವೆಯಲ್ಲಿ ಅಥವಾ (5)ನೇ ಉಪಪ್ರಕರಣವು ಅನ್ವಯಿಸುವ, ಉಪ-ಅಡಮಾನ ಪಡೆದವನು ಹೂಡಿರುವ ದಾವೆಯಲ್ಲಿ, ಮೊದಲಿನ ಅಥವಾ ನಂತರದ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿದವನನ್ನು ದಾವೆಯಲ್ಲಿ ಪಕ್ಷಕಾರನನ್ನಾಗಿ ಸೇರಿಸಲಾಗಿರುವಲ್ಲಿ, (2)ನೇ ಮತ್ತು (3)ನೇ ಉಪಪ್ರಕರಣದ ಉಪಬಂಧಗಳು ಅಂಥ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವವನು ದಾಖಲು ಮಾಡಿರುವ ಲಿಖಿತ ವಿವರಣ ಪತ್ರಕ್ಕೆ ಅಥವಾ ಅರ್ಜಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

ಉಪಪ್ರಕರಣ (5) (ಬಿ) ಯ ಉಪಬಂಧಗಳು ಅನ್ವಯಿಸುವ ದಾವೆಯಲ್ಲಿ ಪಕ್ಷಕಾರನಾಗಿ ಸೇರಿಸಲ್ಪಟ್ಟ ಮೂಲ ಅಡಮಾನ ಪಡೆದವನು, ತಾನು ಉಪ-ಅಡಮಾನ ಮಾಡಿದ ಅಡಮಾನದ ಮೇಲೆ, ವಾದ ಪತ್ರದಲ್ಲಿ ಕ್ಲೇಮು

ಮಾಡಿರುವುದಕ್ಕಿಂತ ಹೆಚ್ಚಿನ ಮೊಬಲಗನ್ನು ಕ್ಲೇಮು ಮಾಡಿದ್ದಲ್ಲಿ (4)ನೇ ಉಪಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಡನೆ ಅಂಥ ಅಡಮಾನಕಾರನ ಲಿಖಿತ ವಿವರಣ ಪತ್ರಕ್ಕೆ ಅನ್ವಯಿಸತಕ್ಕದ್ದು.

(7) ಒಂದು ಅಡಮಾನದ ವಿಮೋಚನೆಗಾಗಿ ಒಬ್ಬ ಅಡಮಾನ ಪಡೆದವನ ವಿರುದ್ಧ ಹೂಡಿದ ದಾವೆಯಲ್ಲಿ, ವಾದಪತ್ರದಲ್ಲಿ ಹೇಳಿದ ಅಡಮಾನದ ಮೇಲೆ ಬಾಕಿ ಇರುವ ಮೊಬಲಗಿನ ಮೇಲೆ ಅಥವಾ ಅಡಮಾನದ ಮೂಲಕ ಪಡೆದಿದ್ದ ಅಸಲು ಮೊಬಲಗಿನ ನಾಲ್ಕನೇ ಒಂದಂಶದ ಮೇಲೆ- ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು:

ಪರಂತು, ಅಡಮಾನದ ಮೇಲೆ ಬಾಕಿ ಇರುವ ಮೊಬಲಗು, ವಾದಿಯು ಫೀಜನ್ನು ಯಾವ ಮೊಬಲಗಿನ ಮೇಲೆ ಸಲ್ಲಿಸಿದ್ದಾನೆಯೋ, ಆ ಮೊತ್ತಕ್ಕಿಂತ ಹೆಚ್ಚಾಗಿರುವುದಾಗಿ ಕಂಡುಬಂದಿರುವಲ್ಲಿ ಕೊರತೆ ಫೀಜನ್ನು ಸಲ್ಲಿಸುವವರೆಗೆ ಡಿಕ್ರಿಯನ್ನು ಹೊರಡಿಸತಕ್ಕದ್ದಲ್ಲ:

ಮತ್ತೂ ಪರಂತು, ಭೋಗ್ಯದ ಅಥವಾ ಅಸಂಗತ ಅಡಮಾನದ ಸಂದರ್ಭದಲ್ಲಿ ವಾದಿಯು ವಿಮೋಚನೆಗೆ ಹಾಗೂ ಹೆಚ್ಚುವರಿ ಲಾಭದ ಲೆಕ್ಕಗಳಿಗೆ ಪ್ರಾರ್ಥಿಸಿದರೆ, ಲೆಕ್ಕಗಳಿಗೆ ಸಂಬಂಧಿಸಿದಂತೆ ಪರಿಹಾರದ ಮೇಲೆ ಫೀಜನ್ನು, ಲೆಕ್ಕಗಳಿಗೆ ಸಂಬಂಧಿಸಿದ ದಾವೆಯಲ್ಲಿ ವಿಧಿಸುವಂತೆ ಪ್ರತ್ಯೇಕವಾಗಿ ವಿಧಿಸತಕ್ಕದ್ದು.

(9) ಅಡಮಾನದ ವಿಮೋಚನೆಯ ಹಿಂಪಡೆವ ಹಕ್ಕಿನ ರದ್ಧತಿಗಾಗಿ ಅಥವಾ ಮಾರಾಟವನ್ನು ನಿರುಪಾಧಿಕವೆಂದು ಘೋಷಿಸುವಂತೆ ಮಾಡಲು ಅಡಮಾನವನ್ನು ಷರತ್ತು ಬದ್ಧವಾಗಿ ಮಾಡಿರುವಲ್ಲಿ, ಒಬ್ಬ ಅಡಮಾನದಾರನು ಹೂಡಿರುವ ದಾವೆಯಲ್ಲಿ ವಾದಪತ್ರದಲ್ಲಿ ಅಸಲು ಮತ್ತು ಬಡ್ಡಿಯ ರೂಪದಲ್ಲಿ ಕ್ಲೇಮು ಮಾಡಿರುವ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

**33. ಲೆಕ್ಕಪತ್ರಗಳಿಗೆ ಸಂಬಂಧಿಸಿದ ದಾವೆಗಳು.-** (1) ಲೆಕ್ಕಪತ್ರಗಳಿಗೆ ಸಂಬಂಧಿಸಿದ ದಾವೆಯಲ್ಲಿ ವಾದಪತ್ರದಲ್ಲಿ ಅಂದಾಜು ಮಾಡಲಾದ ದಾವಾ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

(2) ದಾವೆಯಲ್ಲಿ ನಿರ್ಧರಿಸಲಾದಂತೆ, ವಾದಿಗೆ ಸಂದಾಯ ಮಾಡಬೇಕಾದ ಮೊಬಲಗು ವಾದ ಪತ್ರದಲ್ಲಿ ಅಂದಾಜು ಮಾಡಿದ ಮೊಬಲಗಿಗಿಂತ ಹೆಚ್ಚಾಗಿರುವಲ್ಲಿ, ವಾಸ್ತವವಾಗಿ ಪಾವತಿಸಲಾದ ಫೀಜು ಮತ್ತು ದಾವೆಯಲ್ಲಿ ಹಾಗೆ ನಿರ್ಧರಿಸಿದ ಪೂರ್ತಿ ಮೊಬಲಗು ಒಳಗೊಂಡಿದ್ದಿದ್ದರೆ ಪಾವತಿಸಬೇಕಾಗಿದ್ದ ಫೀಜು, ಇವುಗಳ ನಡುವಿನ ವ್ಯತ್ಯಾಸವನ್ನು ಪಾವತಿಸುವವರೆಗೆ, ಹಾಗೆ ನಿರ್ಧರಿಸಿದ ಮೊಬಲಗನ್ನು ಸಂದಾಯ ಮಾಡುವಂತೆ ನಿರ್ದೇಶಿಸಿ ಯಾವುದೇ ಡಿಕ್ರಿ ಮಾಡತಕ್ಕದ್ದಲ್ಲ. ಹೆಚ್ಚುವರಿ ಫೀಜನ್ನು ನ್ಯಾಯಾಲಯದಿಂದ ನಿಗದಿ ಮಾಡಲಾದ ಅವಧಿಯೊಳಗೆ ಪಾವತಿಸದಿದ್ದರೆ, ಪಾವತಿಸಲಾದ ಫೀಜು ಯಾವ ಮೊತ್ತಕ್ಕೆ ವಿಸ್ತರಣೆಗೊಳ್ಳುತ್ತದೆಯೋ ಆ ಮೊಬಲಗಿಗೆ ಡಿಕ್ರಿಯು ಸೀಮಿತವಾಗಿರತಕ್ಕದ್ದು.

(3) ಅಂಥ ಯಾವುದೇ ದಾವೆಯಲ್ಲಿ ಪ್ರತಿವಾದಿಗೆ ಯಾವುದೇ ಮೊಬಲಗನ್ನು ಪಾವತಿಸಬೇಕಾಗಿದೆ ಎಂದು ಕಂಡುಬಂದಿರುವಲ್ಲಿ, ಆ ಮೊಬಲಗಿನ ಮೇಲೆ ಪಾವತಿಯಾಗಬೇಕಾದ ಫೀಜನ್ನು, ಅವನು ಪಾವತಿಸುವವರೆಗೆ ಅವನ ಪರವಾಗಿ ಯಾವುದೇ ಡಿಕ್ರಿಯನ್ನು ಮಾಡತಕ್ಕದ್ದಲ್ಲ.

**34. ಪಾಲುಗಾರಿಕೆಯ ವಿಘಟನೆಗೆ ಸಂಬಂಧಿಸಿದ ದಾವೆಗಳು.-** (1) ಪಾಲುಗಾರಿಕೆಯ ವಿಘಟನೆಗಾಗಿ ಮತ್ತು ಲೆಕ್ಕಗಳಿಗೆ ಸಂಬಂಧಿಸಿದ ಅಥವಾ ವಿಘಟಿತ ಪಾಲುಗಾರಿಕೆಯ ಲೆಕ್ಕಗಳಿಗೆ ಸಂಬಂಧಿಸಿದ ದಾವೆಯಲ್ಲಿ, ವಾದಿಯು ಅಂದಾಜು ಮಾಡಿದಂತೆ, ಪಾಲುಗಾರಿಕೆಯಲ್ಲಿ ವಾದಿಗೆ ಇರುವ ಪಾಲಿನ ಮೌಲ್ಯದ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

(2) ದಾವೆಯಲ್ಲಿ ನಿರ್ಧರಿಸಲಾದಂತೆ, ವಾದಿಯ ಪಾಲಿನ ಮೌಲ್ಯವು, ವಾದಪತ್ರದಲ್ಲಿ ಅಂದಾಜು ಮಾಡಲಾದ ಮೌಲ್ಯಕ್ಕಿಂತ ಹೆಚ್ಚಿಗೆಯಾದರೆ, ವಾಸ್ತವವಾಗಿ ಸಂದಾಯ ಮಾಡಿದ್ದ ಫೀಜು ಮತ್ತು ಹಾಗೆ ನಿರ್ಧರಿಸಿದ ಪೂರ್ತಿ ಮೌಲ್ಯವನ್ನು ದಾವೆಯು ಒಳಗೊಂಡಿರದ್ದಿದ್ದರೆ, ಪಾವತಿಸಬೇಕಾಗಿದ್ದ ಫೀಜು,- ಇವುಗಳ ನಡುವಿನ ವ್ಯತ್ಯಾಸವನ್ನು ಪಾವತಿಸುವವರೆಗೆ, ವಾದಿಯ ಪರವಾಗಿ ಯಾವ ಡಿಕ್ರಿಯನ್ನೂ ಅಥವಾ ಪ್ರಾರಂಭಿಕ ಡಿಕ್ರಿ ಆಗಿರುವಲ್ಲಿ ಯಾವ ಅಂತಿಮ ಡಿಕ್ರಿಯನ್ನೂ ಮಾಡತಕ್ಕದ್ದಲ್ಲ, ಪಾಲುಗಾರಿಕೆಯ ಆಸ್ತಿಗಳಿಂದ ಯಾವ ಸಂದಾಯವನ್ನೂ ಮಾಡತಕ್ಕದ್ದಲ್ಲ ಮತ್ತು ವಾದಿಯ ಪಾಲಿನ ಮಟ್ಟಿಗೆ ಯಾವ ಸ್ವತ್ತನ್ನೂ ಹಂಚಿಕೆ ಮಾಡತಕ್ಕದ್ದಲ್ಲ.

(3) ಅಂಥ ಯಾವುದೇ ದಾವೆಯಲ್ಲಿ ಪ್ರತಿವಾದಿಯ ಪರವಾಗಿ ಪಾಲುಗಾರಿಕೆಯ ಸ್ವತ್ತಿನಲ್ಲಿರುವ ಅವನ ಪಾಲಿನ ಮೊಬಲಗಿನ ಅಥವಾ ಮೌಲ್ಯದ ಮೇಲೆ ಲೆಕ್ಕಮಾಡಿದ ಫೀಜನ್ನು ಸಲ್ಲಿಸುವವರೆಗೆ, ಪಾಲುಗಾರಿಕೆಯ ಸ್ವತ್ತಿನಲ್ಲಿ ಅವನ ಪಾಲು ಕುರಿತಂತೆ ಅಥವಾ ಅದರ ಲೆಕ್ಕದ ಮೇಲೆ ಯಾವ ಅಂತಿಮ ಡಿಕ್ರಿಯನ್ನೂ ಮಾಡತಕ್ಕದ್ದಲ್ಲ, ಯಾವ ಹಣವನ್ನೂ ಸಲ್ಲಿಸತಕ್ಕದ್ದಲ್ಲ ಮತ್ತು ಸ್ವತ್ತಿನ ಯಾವ ಹಂಚಿಕೆಯನ್ನೂ ಮಾಡತಕ್ಕದ್ದಲ್ಲ.

**35. ವಿಭಜನೆಯ ದಾವೆಗಳು.-** (1) ಅವಿಭಕ್ತ ಕುಟುಂಬದ ಸ್ವತ್ತಿನಲ್ಲಿ ಅಥವಾ ಸಂಯುಕ್ತ ಒಡೆತನದ ಅಥವಾ ಕೂಡು ಒಡೆತನದ ಸ್ವತ್ತಾಗಿರುವ ಅಂಥ ಸ್ವತ್ತಿನಲ್ಲಿ, ವಾದಿಗಿರುವ ಹಕ್ಕನ್ನು ನಿರಾಕರಿಸಿರುವ ಅಥವಾ ಸ್ವತ್ತಿನ ಸ್ವಾಧೀನದಿಂದ ಅವನನ್ನು ಹೊರತುಪಡಿಸಿರುವ ಸ್ವತ್ತಿನಲ್ಲಿ ಇರುವ ಪಾಲಿನ ವಿಭಜನೆಗಾಗಿ ಮತ್ತು ಪ್ರತ್ಯೇಕ ಸ್ವಾಧೀನತೆಗಾಗಿ, ಹೂಡಿದ ದಾವೆಯಲ್ಲಿ ವಾದಿಯ ಪಾಲಿನ ಮಾರುಕಟ್ಟೆ_ಮೌಲ್ಯದ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

(2) ವಾದಿಯ ಸಂಯುಕ್ತ ಸ್ವಾಧೀನದಲ್ಲಿರುವ ಅವಿಭಕ್ತ ಕುಟುಂಬದ ಸ್ವತ್ತಿನ ಅಥವಾ ಸಂಯುಕ್ತ ಒಡೆತನದ ಅಥವಾ ಕೂಡು ಒಡೆತನದ ಸ್ವತ್ತಿನ ವಿಭಜನೆಗಾಗಿ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ, ದಾವೆಯಲ್ಲಿ ಈ ಮುಂದೆ ಹೇಳಿದ ದರಗಳ ಪ್ರಕಾರ ಫೀಜನ್ನು ಪಾವತಿಸತಕ್ಕದ್ದು:-

ವಾದಿಯ ಪಾಲಿನ ಮೌಲ್ಯವು, 3000 ರೂ. ಅಥವಾ ಕಡಿಮೆ ಇದ್ದರೆ, ಹದಿನೈದು ರೂಪಾಯಿಗಳು;

ಮೌಲ್ಯವು 3,000 ರೂ.ಗಳಿಗೆ ಮೇಲ್ಪಟ್ಟಿದ್ದು, 5000 ರೂ. ಗಳಿಗಿಂತ ಹೆಚ್ಚು ಇರದಿದ್ದರೆ, ಮೂವತ್ತು ರೂಪಾಯಿಗಳು;

ಮೌಲ್ಯವು 5000 ರೂ.ಗಳಿಗೆ ಮೇಲ್ಪಟ್ಟಿದ್ದು, 10,000/- ರೂ.ಗಳಿಗಿಂತ ಕಡಿಮೆ ಇದ್ದರೆ ಒಂದು ನೂರು ರೂಪಾಯಿಗಳು ಮಾತ್ರ. ಮೌಲ್ಯವು 10,000 ರೂ. ಗಳು ಮತ್ತು ಅದಕ್ಕಿಂತ ಮೇಲ್ಪಟ್ಟಿದ್ದರೆ, ಎರಡು ನೂರು ರೂಪಾಯಿಗಳು.

(3) ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಅಡಿಯಲ್ಲಿ ಬರುವ ದಾವೆಯಲ್ಲಿ ಪ್ರತಿವಾದಿಯು, ಸ್ವತ್ತಿನಲ್ಲಿರುವ ತನ್ನ ಪಾಲಿನ ವಿಭಜನೆಯನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೇಳಿದಲ್ಲಿ, ಅಂಥ ಪ್ರತಿವಾದಿಯನ್ನು ಸ್ವಾಧೀನದಿಂದ ಹೊರತುಪಡಿಸಲಾಗಿರುವಲ್ಲಿ ಅಥವಾ ಅವನು ಸಂಯುಕ್ತ ಸ್ವಾಧೀನ ಹೊಂದಿರುವಲ್ಲಿ, ಅದಕ್ಕನುಸಾರವಾಗಿ, ಅವನ ಪಾಲಿನ ಮಾರುಕಟ್ಟೆ ಮೌಲ್ಯದ ಅರ್ಧದ ಮೇಲೆ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾದ ದರಗಳ ಅರ್ಧದ ಮೇಲೆ ಲೆಕ್ಕಹಾಕಿ ಫೀಜನ್ನು, ಲಿಖಿತ ವಿವರಣ ಪತ್ರದ ಮೇಲೆ ಸಂದಾಯ ಮಾಡತಕ್ಕದ್ದು.

(4) ಉಪಪ್ರಕರಣ (1)ರ ಅಥವಾ ಉಪಪ್ರಕರಣ (2)ರ ಮೇರೆಗಿನ ದಾವೆಯಲ್ಲಿ, ವಾದಿಯು ಅಥವಾ ಪ್ರತಿವಾದಿಯು, 38ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಪ್ರಕಾರದ ಡಿಕ್ರಿ ಅಥವಾ ಇತರ ದಸ್ತಾವೇಜು, ಇವುಗಳ ರದ್ಧತಿಯನ್ನು ಕೋರಿರುವಲ್ಲಿ ಆ ಪ್ರಕರಣದಲ್ಲಿ ಉಲ್ಲೇಖಿಸಿರುವ ರೀತಿಯಲ್ಲಿ ರದ್ಧತಿಯ ಪರಿಹಾರದ ಮೇಲೆ ಪ್ರತ್ಯೇಕವಾದ ಫೀಜನ್ನು ಸಂದಾಯ ಮಾಡತಕ್ಕದ್ದು.

**36. ಜಂಟಿ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಗಳು.-** ಜಂಟಿ ಕುಟುಂಬದ ಸ್ವತ್ತಿನ ಅಥವಾ ಸ್ವಾಧೀನದಿಂದ ಹೊರತುಪಡಿಸಲಾಗಿರುವ ವಾದಿಯ ಜಂಟಿ ಒಡೆತನದ ಅಥವಾ ಕೂಡು ಒಡೆತನದ ಸ್ವತ್ತಿನ ಜಂಟಿ ಸ್ವಾಧೀನಕ್ಕೆ ಸಂಬಂಧಿಸಿದ ದಾವೆಯಲ್ಲಿ, ವಾದಿಯ ಪಾಲಿನ ಮಾರುಕಟ್ಟೆ ಮೌಲ್ಯದ ಮೇಲೆ ಫೀಜನ್ನು ಲೆಕ್ಕ ಮಾಡತಕ್ಕದ್ದು.

**37. ಆಡಳಿತಕ್ಕೆ ಸಂಬಂಧಿಸಿದ ದಾವೆಗಳು.-** (1) ಎಸ್ಟೇಟಿನ ಆಡಳಿತಕ್ಕೆ ಸಂಬಂಧಿಸಿದ ದಾವೆಯಲ್ಲಿ, 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ದರಗಳ ಪ್ರಕಾರ ವಾದಪತ್ರದ ಮೇಲೆ ಫೀಜನ್ನು ವಿಧಿಸತಕ್ಕದ್ದು.

(2) ಎಸ್ಟೇಟಿನ ಆಸ್ತಿಗಳ ಯಾವುದಾದರೂ ಮೊಬಲಗು ಅಥವಾ ಪಾಲು ಅಥವಾ ಭಾಗವು ವಾದಿಗೆ ಬರಬೇಕಾಗಿದೆಯೆಂದು ಕಂಡುಬಂದಲ್ಲಿ ಮತ್ತು ಸ್ವತ್ತುಗಳ ಅಂಥ ಪಾಲಿನ ಅಥವಾ ಭಾಗದ ಮೊಬಲಗಿನ ಅಥವಾ ಮಾರುಕಟ್ಟೆ ಮೌಲ್ಯದ ಮೇಲೆ ಲೆಕ್ಕಮಾಡಲಾದ ಫೀಜು ವಾದಪತ್ರದ ಮೇಲೆ ಪಾವತಿಸಲಾದ ಫೀಜಿಗಿಂತ ಹೆಚ್ಚಾಗಿರುವಲ್ಲಿ, ವಾಸ್ತವವಾಗಿ ಪಾವತಿಸಲಾದ ಫೀಜು ಮತ್ತು ಆಸ್ತಿಯ ಮೊಬಲಗಿನ ಅಥವಾ ಮೌಲ್ಯದ ಮೇಲೆ ಲೆಕ್ಕಮಾಡಲಾದ ಫೀಜು, ಇವುಗಳ ನಡುವಿನ ವ್ಯತ್ಯಾಸವನ್ನು ಪಾವತಿಸುವವರೆಗೆ ಯಾವ ಸಂದಾಯವನ್ನೂ ಮಾಡತಕ್ಕದ್ದಲ್ಲ ಮತ್ತು ಹಣದ ಸಂದಾಯವನ್ನು ನಿರ್ದೇಶಿಸುವ ಅಥವಾ ಸ್ವತ್ತಿನ ಅಂಥ ಪಾಲಿನ ಅಥವಾ ಭಾಗದ ಹಕ್ಕನ್ನು ದೃಢೀಕರಿಸುವ ಯಾವ ಡಿಕ್ರಿಯನ್ನೂ ಮಾಡತಕ್ಕದ್ದಲ್ಲ.

(3) ಆಸ್ತಿಗಳ ಪಾಲಿನ ಅಥವಾ ಭಾಗದ ಮೊಬಲಗಿನ ಅಥವಾ ಮೌಲ್ಯದ ಮೇಲೆ ಲೆಕ್ಕಮಾಡಲಾದ ಫೀಜನ್ನು, ಪ್ರತಿವಾದಿಯು ಪಾವತಿಸುವವರೆಗೆ ಆಡಳಿತಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯಲ್ಲಿ, ಪ್ರತಿವಾದಿಗೆ ಯಾವ

ಸಂದಾಯವನ್ನೂ ಮಾಡತಕ್ಕದ್ದಲ್ಲ, ಹಣದ ಸಂದಾಯವನ್ನು ನಿರ್ದೇಶಿಸುವ ಅಥವಾ ಎಸ್ಟೇಟಿನ ಆಸ್ತಿಯ ಅಂಥ ಪಾಲಿನ ಅಥವಾ ಭಾಗದ ಹಕ್ಕನ್ನು ದೃಢೀಕರಿಸುವ ಯಾವ ಡಿಕ್ರಿಯನ್ನೂ ಅವನ ಪರವಾಗಿ ಮಾಡತಕ್ಕದ್ದಲ್ಲ.

(4) ಉಪಪ್ರಕರಣ (2)ರ ಅಥವಾ ಉಪಪ್ರಕರಣ (3)ರ ಮೇರೆಗೆ ವಾದಿಯು ಅಥವಾ ಪ್ರತಿವಾದಿಯು ಪಾವತಿಸಬೇಕಾದ ಫೀಜನ್ನು ಲೆಕ್ಕಮಾಡುವಲ್ಲಿ, ಅಂಥ ವಾದಿಗೆ ಅಥವಾ ಪ್ರತಿವಾದಿಗೆ ಎಸ್ಟೇಟಿನ ಆಸ್ತಿಯಿಂದ ಬರಬೇಕಾದ ಹಣಕ್ಕೆ ಅಥವಾ ಪಾಲಿಗೆ ಅಥವಾ ಮೌಲ್ಯಕ್ಕೆ ಆಧಾರಭೂತವಾದ ಕ್ಲೇಮಿನ ಬಗ್ಗೆ ಇತರ ಯಾವುದೇ ವ್ಯವಹರಣೆಯಲ್ಲಿ ಅಂತ ವಾದಿಯು ಅಥವಾ ಪ್ರತಿವಾದಿಯು ಪಾವತಿಸಿರಬಹುದಾದ ಫೀಜಿನಷ್ಟು ಜಮಾ ಮಾಡತಕ್ಕದ್ದು.

**38. ಡಿಕ್ರಿಗಳು, ಇತ್ಯಾದಿಗಳ ರದ್ದಿಯಾತಿಗೆ ಸಂಬಂಧಿಸಿದ ದಾವೆಗಳು.-** (1) ಹಣದ ಅಥವಾ ಹಣದ ಮೌಲ್ಯವಿರುವ ಇತರ ಸ್ವತ್ತಿನ ಬಗ್ಗೆ ಡಿಕ್ರಿಯನ್ನು ಅಥವಾ ಹಣದಲ್ಲಿ ಅಥವಾ ಚರ ಇಲ್ಲವೆ ಸ್ಥಿರ ಸ್ವತ್ತಿನಲ್ಲಿ ಯಾವುದಾದರೂ ಅಧಿಕಾರವನ್ನು, ಹಕ್ಕನ್ನು ಅಥವಾ ಹಿತಾಸಕ್ತಿಯನ್ನು ಸದ್ಯದಲ್ಲಿ ಅಥವಾ ಮುಂದೆ ಸೃಷ್ಟಿಸುವುದಾಗಿ, ಘೋಷಿಸುವುದಾಗಿ, ವಹಿಸಿಕೊಡುವುದಾಗಿ, ಸೀಮಿತಗೊಳಿಸುವುದಾಗಿ ಅಥವಾ ಕೊನೆಗೊಳಿಸುವುದಾಗಿ ಭಾವಿಸಲಾಗುವ ಅಥವಾ ಪ್ರವರ್ತಿಸುವ ಇತರ ದಸ್ತಾವೇಜನ್ನು, ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ, ದಾವೆಯ ವಸ್ತು ವಿಷಯದ ಮೌಲ್ಯದ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು ಮತ್ತು ಅಂಥ ಮೌಲ್ಯವು,-

ಇಡೀ ಡಿಕ್ರಿಯ ಅಥವಾ ಇತರ ದಸ್ತಾವೇಜಿನ ರದ್ಧತಿಯನ್ನು ಕೋರಲಾಗಿದ್ದರೆ, ಡಿಕ್ರಿ ಮಾಡಲಾದ ಅಥವಾ ಇತರ ದಸ್ತಾವೇಜನ್ನು ಬರೆದುಕೊಡಲಾದ ಸ್ವತ್ತಿನ ಮೊಬಲಗು ಅಥವಾ ಮೌಲ್ಯ ಆಗಿರುವುದಾಗಿ;

ಡಿಕ್ರಿಯ ಅಥವಾ ಇತರ ದಸ್ತಾವೇಜಿನ ಭಾಗದ ರದ್ದತಿಯನ್ನು ಕೋರಲಾಗಿದ್ದರೆ ಸ್ವತ್ತಿನ ಮೊಬಲಗಿನ ಅಥವಾ ಮೌಲ್ಯದ ಅಂಥ ಭಾಗ ಆಗಿರುವುದಾಗಿ

- ಭಾವಿಸತಕ್ಕದ್ದು.

(2) ಡಿಕ್ರಿಯು ಅಥವಾ ಇತರ ದಸ್ತಾವೇಜು, ಅದರ ಮೇರೆಗಿನ ಹೊಣೆಗಾರಿಕೆಯು ವಿಭಜಿಸಲಾಗದಂಥದ್ದು ಆಗಿದ್ದರೆ ಮತ್ತು ಕೋರಲಾದ ಪರಿಹಾರವು, ವಾದಿಗೆ ಸೇರಿದ ಒಂದು ನಿರ್ದಿಷ್ಟ ಸ್ವತ್ತಿಗೆ ಅಥವಾ ಅಂಥ ಯಾವುದೇ ಸ್ವತ್ತಿನಲ್ಲಿರುವ ವಾದಿಯ ಪಾಲಿಗೆ ಮಾತ್ರ ಸಂಬಂಧಿಸಿರುವಂಥದ್ದು ಆಗಿದ್ದರೆ, ಅಂಥ ಸ್ವತ್ತಿನ ಅಥವಾ ಪಾಲಿನ ಮೌಲ್ಯ ಅಥವಾ ಡಿಕ್ರಿಯ ಮೊಬಲಗು, ಇವುಗಳಲ್ಲಿ ಯಾವುದು ಕಡಿಮೆಯೋ ಅದರ ಮೇಲೆ ಫೀಜನ್ನು ಲೆಕ್ಕ ಹಾಕತಕ್ಕದ್ದು.

**ವಿವರಣೆ 1.-** ಐತೀರ್ಪನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದ ಒಂದು ದಾವೆಯನ್ನು, ಈ ಪ್ರಕರಣದ ಅರ್ಥದೊಳಗೆ ಒಂದು ಡಿಕ್ರಿಯನ್ನು ತಳ್ಳಿ ಹಾಕುವುದಕ್ಕೆ ಸಂಬಂಧಿಸಿದ ದಾವೆಯೆಂದು ಭಾವಿಸತಕ್ಕದ್ದು.

**ವಿವರಣೆ 2.-** ಒಂದು ಡಿಕ್ರಿಯ ರದ್ದಿಯಾತಿಗೆ ಮತ್ತು ಯಾವುದೇ ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಿಸಿದ ಒಂದು ದಾವೆಯಲ್ಲಿ, ಅಂಥ ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಿಸಿದ ಒಂದು ದಾವೆಯಲ್ಲಿ ಲೆಕ್ಕಮಾಡುವ ಹಾಗೆ ಫೀಜನ್ನು ಲೆಕ್ಕಮಾಡತಕ್ಕದ್ದು.

**39. ಜಪ್ತಿ, ಇತ್ಯಾದಿಗಳನ್ನು ತಳ್ಳಿ ಹಾಕುವುದಕ್ಕೆ ಸಂಬಂಧಿಸಿದ ದಾವೆಗಳು.-** (1) ಸಿವಿಲ್ ಅಥವಾ ರೆವಿನ್ಯೂ ನ್ಯಾಯಾಲಯದಿಂದ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ಅಥವಾ ಆದಾಯದಲ್ಲಿನ ಯಾವುದೇ ಹಿತಾಸಕ್ತಿಯ ಜಪ್ತಿಯನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದ ಅಥವಾ ಜಪ್ತಿಯನ್ನು ತಳ್ಳಿಹಾಕುವುದಕ್ಕಾಗಿ ಸಲ್ಲಿಸಿದ ಅರ್ಜಿಯ ಮೇಲೆ ಮಾಡಿದ ಆದೇಶವನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ ದಾವಾ ವಸ್ತುವಾಗಿರುವ ಜಪ್ತಿ ಆಸ್ತಿಯ ಮಾರುಕಟ್ಟೆ ಮೌಲ್ಯದ ನಾಲ್ಕನೇ ಒಂದು ಅಂಶ ಅಥವಾ ಯಾವ ಮೊಬಲಗಿಗಾಗಿ ಸ್ವತ್ತಿನ ಜಪ್ತಿ ಆಗಿದೆಯೋ ಆ ಮೊಬಲಗು ಇವೆರಡರಲ್ಲಿ ಯಾವುದು ಕಡಿಮೆಯಿರುವುದೋ ಅದರ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು.

(2) ಸಿವಿಲ್ ಅಥವಾ ರೆವಿನ್ಯೂ ನ್ಯಾಯಾಲಯದ ಇತರ ಯಾವುದೇ ಕ್ಷಿಪ್ರ ತೀರ್ಮಾನವನ್ನು ಅಥವಾ ಆದೇಶವನ್ನು ತಳ್ಳಿಹಾಕುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ ದಾವೆಯ ವಸ್ತು ವಿಷಯಕ್ಕೆ ಮಾರುಕಟ್ಟೆ ಮೌಲ್ಯವಿದ್ದರೆ, ಅಂಥ ಮೌಲ್ಯದ ನಾಲ್ಕನೇ ಒಂದಂಶದ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು ಮತ್ತು ಇತರ ಸಂದರ್ಭಗಳಲ್ಲಿ, 47ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ದರಗಳ ಮೇರೆಗೆ ಫೀಜನ್ನು ಸಂದಾಯ ಮಾಡತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, ಸಹಕಾರಿ ಸಂಘಗಳ ರಿಜಿಸ್ಟ್ರಾರನು, ಸಿವಿಲ್ ನ್ಯಾಯಾಲಯ ಆಗಿರುವುದಾಗಿ ಭಾವಿಸತಕ್ಕದ್ದು.

**40. ನಿರ್ದಿಷ್ಟ ನಿರ್ವಹಣೆಗೆ ಸಂಬಂಧಿಸಿದ ದಾವೆಗಳು.-** ಸ್ವಾಧೀನ ಸಹಿತ ಅಥವಾ ರಹಿತ ನಿರ್ದಿಷ್ಟ ನಿರ್ವಹಣೆಗೆ ಸಂಬಂಧಿಸಿದ ದಾವೆಯಲ್ಲಿ,-

(ಎ) ಮಾರಾಟದ ಕರಾರಿನ ಸಂದರ್ಭದಲ್ಲಿ, ಪ್ರತಿಫಲದ ಮೊಬಲಗಿನ ಮೇಲೆ ಲೆಕ್ಕಮಾಡಿದ;

(ಬಿ) ಅಡಮಾನದ ಕರಾರಿನ ಸಂದರ್ಭದಲ್ಲಿ, ಅಡಮಾನದ ಮೂಲಕ ಪಡೆಯಲು ಒಪ್ಪಿದ ಮೊಬಲಗಿನ ಮೇಲೆ ಲೆಕ್ಕಮಾಡಿದ;

(ಸಿ) ಗೇಣಿ ಕರಾರಿನ ಸಂದರ್ಭದಲ್ಲಿ, ರುಸುಂ ಅಥವಾ ಪ್ರಿಮಿಯಂ ಯಾವುದಾದರೂ ಇದ್ದರೆ ಅದು ಮತ್ತು ಸಲ್ಲಿಸಲು ಒಪ್ಪಿದ ಗೇಣಿಯ ವಾರ್ಷಿಕ ಸರಾಸರಿ, ಇವುಗಳ ಒಟ್ಟು ಮೊಬಲಗಿನ ಮೇಲೆ ಲೆಕ್ಕಮಾಡಿದ;

(ಡಿ) ವಿನಿಮಯದ ಕರಾರಿನ ಸಂದರ್ಭದಲ್ಲಿ, ಪ್ರತಿಫಲದ ಮೊಬಲಗಿನ ಮೇಲೆ ಅಥವಾ ಸಂದರ್ಭಾನುಸಾರ ವಿನಿಮಯ ಮಾಡಬೇಕೆಂದು ಕೋರಿದ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಲೆಕ್ಕಮಾಡಿದ;

(ಇ) ಇತರ ಸಂದರ್ಭದಲ್ಲಿ, ಜಾರಿಗೆ ತರಲು ಕೋರಲಾದ ವಾಗ್ದಾನದ ಪ್ರತಿಫಲಕ್ಕೆ ಮಾರುಕಟ್ಟೆ ಮೌಲ್ಯವಿರುವಲ್ಲಿ, ಅಂಥ ಮಾರುಕಟ್ಟೆ ಮೌಲ್ಯದ ಮೇಲೆ ಅಥವಾ ಅಂಥ ಪ್ರತಿಫಲಕ್ಕೆ ಮಾರುಕಟ್ಟೆ ಮೌಲ್ಯವಿದ್ದಲ್ಲಿ 47ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ದರಗಳ ಮೇರೆಗೆ ಲೆಕ್ಕಮಾಡಿದ

- ಫೀಜನ್ನು ಸಂದಾಯ ಮಾಡತಕ್ಕದ್ದು.

**41. ಭೂ ಮಾಲೀಕರ ಮತ್ತು ಗೇಣಿದಾರರ ನಡುವಿನ ದಾವೆಗಳು.-** (1) ಸಿವಿಲ್ ನ್ಯಾಯಾಲಯಗಳಲ್ಲಿ ಭೂ ಮಾಲೀಕನ ಮತ್ತು ಗೇಣಿದಾರನ ನಡುವಿರುವ ಈ ಮುಂದಿನ ದಾವೆಗಳಲ್ಲಿ, ಅಂದರೆ:_

(ಎ) ಗೇಣಿದಾರರಿಂದ ಗೇಣಿಪತ್ರದ ದ್ವಿಪ್ರತಿಯನ್ನು ಒಪ್ಪಿಸುವ ಅಥವಾ ಮುಚ್ಚಳಿಕೆಯ ಬದಲಾಗಿ ಪಟ್ಟಾ ಅಂಗೀಕರಿಸುವ;

(ಬಿ) ಗೇಣಿ ಹೆಚ್ಚಿಸುವ;

(ಸಿ) ಭೂ ಮಾಲೀಕನಿಂದ ಗೇಣಿಪತ್ರ ಒಪ್ಪಿಸುವುದಕ್ಕೆ ಸಂಬಂಧಿಸಿದಂತೆ ಅಥವಾ ಮುಚ್ಚಳಿಕೆಯ ಬದಲಾಗಿ ಪಟ್ಟಾ ಪಡೆಯುವ;

(ಡಿ) ಭೂ ಮಾಲೀಕನಿಂದ ಕಾನೂನಿಗೆ ವಿರುದ್ಧವಾಗಿ ಸ್ಥಿರ ಸ್ವತ್ತಿನಿಂದ ಉಚ್ಚಾಟಿಸಲಾದ ಗೇಣಿದಾರನು ಅದರ ಅಧಿಭೋಗವನ್ನು ಪುನಃ ಪಡೆಯುವ;

(ಇ) ಅಧಿಭೋಗದ ಅಧಿಕಾರವನ್ನು ಸ್ಥಾಪಿಸುವ ಅಥವಾ ರುಜುವಾತುಪಡಿಸದಿರುವ

- ದಾವೆಗಳಲ್ಲಿ, ದಾವೆಗೆ ಸಂಬಂಧಿಸಿದ ಸ್ಥಿರ ಸ್ವತ್ತಿನ ಬಗ್ಗೆ ವಾದಪತ್ರವನ್ನು ಹಾಜರುಪಡಿಸುವ ದಿನಾಂಕದ ಹಿಂದಿನ ವರ್ಷಕ್ಕಾಗಿ ಸಂದಾಯಮಾಡತಕ್ಕ ಗೇಣಿಯ ಮೊಬಲಗಿನ ಮೇಲೆ ಫೀಜನ್ನು ವಿಧಿಸತಕ್ಕದ್ದು.

(2) ಅವಧಿ ಮೀರಿ ಮುಂದುವರೆದ ಗೇಣಿದಾರನೂ ಒಳಗೊಂಡಂತೆ, ಗೇಣಿದಾರನಿಂದ ಸ್ಥಿರಸ್ವತ್ತನ್ನು ಗೇಣಿದಾರನ ಅವಧಿ ಮೀರಿ ಅನಂತರ ಮರಳಿ ಪಡೆಯುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ, ಯಾವುದಾದರೂ ಪ್ರೀಮಿಯಂ ಇದ್ದಲ್ಲಿ, ಅದರ ಮೇಲೆ ಮತ್ತು ವಾದಪತ್ರವನ್ನು ಹಾಜರುಪಡಿಸುವ ದಿನಾಂಕದ ಹಿಂದಿನ ವರ್ಷಕ್ಕೆ ಸಂಬಂಧಪಡಬಹುದಾದ ಗೇಣಿಯ ಮೇಲೆ ಫೀಜನ್ನು ಲೆಕ್ಕಹಾಕತಕ್ಕದ್ದು.

**ವಿವರಣೆ.-** ಗೇಣಿ ಎಂಬಲ್ಲಿ, ಅವಧಿ ಮೀರಿ ಮುಂದುವರೆದ ಗೇಣಿದಾರನಿಂದ ಉಪಯೋಗಕ್ಕೆ ಮತ್ತು ಅಧಿಭೋಗಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡತಕ್ಕ ನಷ್ಟ ಭರ್ತಿ ಕೂಡ ಸೇರುತ್ತದೆ.

**42. ಮಧ್ಯಕಾಲೀನ ಲಾಭಗಳಿಗೆ ಸಂಬಂಧಿಸಿದ ದಾವೆಗಳು.-** (1) ಮಧ್ಯಕಾಲೀನ ಲಾಭಗಳ ಅಥವಾ ಸ್ಥಿರ ಸ್ವತ್ತಿನ ಮತ್ತು ಮಧ್ಯಕಾಲೀನ ಲಾಭಗಳಿಗೆ ಸಂಬಂಧಿಸಿದ ದಾವೆಯಲ್ಲಿ, ಮಧ್ಯಕಾಲೀನ ಲಾಭಗಳ ಸಂಬಂಧದಲ್ಲಿ ಅಂದಾಜು ಮೊಬಲಗನ್ನು ನಿರೂಪಿಸಿ ದಾವೆ ಹೂಡಲಾಗಿರುವಲ್ಲಿ, ಅಂಥ ಮೊಬಲಗಿನ ಮೇಲೆ ಫೀಜನ್ನು ಲೆಕ್ಕಮಾಡತಕ್ಕದ್ದು. ವಾದಿಗೆ ಬರಬೇಕಾದುದೆಂದು ಖಚಿತಪಡಿಸಲಾದ ಲಾಭಗಳು, ಸರಿಸುಮಾರಾಗಿ ಅಂದಾಜು

ಮಾಡಿ ದಾವೆ ಹೂಡಿದ, ಲಾಭಗಳಿಗಿಂತ ಜಾಸ್ತಿ ಇದ್ದರೆ, ವಾಸ್ತವವಾಗಿ ಸಂದಾಯ ಮಾಡಿದ ಫೀಜು ಮತ್ತು ಹಾಗೆ ಖಚಿತಗೊಳಿಸಿದ ಸಂಪೂರ್ಣ ಲಾಭಗಳನ್ನು, ದಾವೆಯು ಒಳಗೊಂಡಿದ್ದರೆ, ಸಂದಾಯಮಾಡತಕ್ಕ ಫೀಜು, ಇವುಗಳ ನಡುವಿನ ವ್ಯತ್ಯಾಸವನ್ನು ಪಾವತಿಸುವವರೆಗೆ ಯಾವ ಡಿಕ್ರಿಯನ್ನೂ ಮಾಡತಕ್ಕದ್ದಲ್ಲ.

(2) ದಾವೆ ಹೂಡುವುದಕ್ಕೆ ಮುಂಚೆ ಅಥವಾ ಹೂಡಿದ ತರುವಾಯ, ಸ್ವತ್ತಿನಿಂದ ಪ್ರಾಪ್ತವಾದ ಮಧ್ಯಕಾಲೀನ ಲಾಭಗಳ ತನಿಖೆಗಾಗಿ ಡಿಕ್ರಿಯು ನಿರ್ದೇಶಿಸುವಲ್ಲಿ, ವಾಸ್ತವವಾಗಿ ಸಲ್ಲಿಸಲಾದ ಫೀಜು ಮತ್ತು ಅಂತಿಮ ಡಿಕ್ರಿಯ ದಿನಾಂಕದವರೆಗೆ ಸಂದಾಯ ಮಾಡಬೇಕಾಗಿದ್ದ ಸಂಪೂರ್ಣ ಲಾಭಗಳನ್ನು, ದಾವೆಯು ಒಳಗೊಂಡಿದ್ದರೆ ಸಂದಾಯ ಮಾಡತಕ್ಕ ಫೀಜು, ಇವುಗಳ ನಡುವಿನ ವ್ಯತ್ಯಾಸವನ್ನು ಪಾವತಿಸುವವರೆಗೆ, ಯಾವ ಅಂತಿಮ ಡಿಕ್ರಿಯನ್ನೂ ಮಾಡತಕ್ಕದ್ದಲ್ಲ.

(3) ಡಿಕ್ರಿಯನ್ನು ಅಥವಾ ಅಂತಿಮ ಡಿಕ್ರಿಯನ್ನು ಮಾಡಿದ ದಿನಾಂಕದ ತರುವಾಯದ ಅವಧಿಗಾಗಿ ಮಧ್ಯಕಾಲೀನ ಲಾಭಗಳನ್ನು ನಿರ್ದಿಷ್ಟಪಡಿಸಿದ ದರದ ಮೇರೆಗೆ ಪಾವತಿಸತಕ್ಕದ್ದೆಂದು ಅಂಥ ಡಿಕ್ರಿಯಲ್ಲಿ ಅಥವಾ ಅಂತಿಮ ಡಿಕ್ರಿಯಲ್ಲಿ ನಿರ್ದೇಶಿಸಲಾಗಿರುವಲ್ಲಿ, ಅಂಥ ಡಿಕ್ರಿಯ ಅಥವಾ ಡಿಕ್ರಿಯ ಅಂತಿಮ ಜಾರಿಯಲ್ಲಿ ಕ್ಲೇಮು ಮಾಡಿದ ಮೊಬಲಗಿನ ಮೇಲೆ ಲೆಕ್ಕಮಾಡಲಾದ ಫೀಜನ್ನು ಸಂದಾಯ ಮಾಡುವವರೆಗೆ, ಅಂಥ ಡಿಕ್ರಿಯನ್ನು ಅಥವಾ ಅಂತಿಮ ಡಿಕ್ರಿಯನ್ನು ಜಾರಿ ಮಾಡತಕ್ಕದ್ದಲ್ಲ.

**43. ರೆವಿನ್ಯೂ ರಿಜಿಸ್ಟರುಗಳಲ್ಲಿರುವ ನಮೂದನೆಯನ್ನು ಬದಲಾಯಿಸುವ ಅಥವಾ ರದ್ದುಮಾಡುವುದಕ್ಕಾಗಿ ದಾವೆಗಳು ಮತ್ತು ರೆವಿನ್ಯೂ ನ್ಯಾಯಾಲಯಗಳಲ್ಲಿಯ ಕೆಲವು ದಾವೆಗಳು.-** (1) ಕಂದಾಯ ನೀಡುತ್ತಿರುವ ಎಸ್ಟೇಟಿನ ಮಾಲೀಕರ ಹೆಸರುಗಳಿರುವ ರೆವಿನ್ಯೂ ಅಥವಾ ಸರ್ವೆ ರಿಜಿಸ್ಟರುಗಳಲ್ಲಿ ಅಥವಾ ದಾಖಲೆಗಳಲ್ಲಿ ಯಾವುದಾದರೂ ನಮೂದನೆಯನ್ನು ಬದಲಾಯಿಸುವುದಕ್ಕಾಗಿ ಅಥವಾ ರದ್ದು ಮಾಡುವುದಕ್ಕಾಗಿ, ಹೂಡಿದ ದಾವೆಯಲ್ಲಿ, ಸಂದಾಯಮಾಡತಕ್ಕ ಫೀಜು [1][ಐವತ್ತು ರೂಪಾಯಿ][1]ಗಳಾಗಿರತಕ್ಕದ್ದು.

1. 1996ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ: 28.03.1996ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(2) ರೆವಿನ್ಯೂ ನ್ಯಾಯಾಲಯಗಳಲ್ಲಿ, ಗ್ರಾಮಾಧಿಕಾರಿ ಹುದ್ದೆಗೆ ಸಂಬಂಧಿಸಿದ ದಾವೆಗಳಲ್ಲಿ ಸಂದಾಯಮಾಡತಕ್ಕ ಫೀಜು [1][ಐವತ್ತು ರೂಪಾಯಿ][1]ಗಳಾಗಿರತಕ್ಕದ್ದು.

1. 1996ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ: 28.03.1996ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(3) [1][XXX][1]

(4) [1][XXX][1]

1. 2003 ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**44. ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದ ದಾವೆಗಳು.-** ಧಾರ್ಮಿಕ ದತ್ತಿ ಅಧಿನಿಯಮ, 1863 ರ (1863 ರ ಕೇಂದ್ರ ಅಧಿನಿಯಮ XX) 14ನೇ ಪ್ರಕರಣದ ಮೇರೆಗೆ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ. 1908 ರ (1908ರ ಕೇಂದ್ರ ಅಧಿನಿಯಮ V) 91ನೇ ಪ್ರಕರಣದ ಅಥವಾ 92ನೇ ಪ್ರಕರಣದ ಮೇರೆಗೆ, [1][ಮುಂಬಯಿ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಮುಂಬಯಿ ಅಧಿನಿಯಮ XXIX)ರ 50ನೇ ಪ್ರಕರಣದ ಮೇರೆಗೆ][1] ಪರಿಹಾರಕ್ಕೆ ಸಂಬಂಧಿಸಿದ ದಾವೆಯಲ್ಲಿ ಸಂದಾಯಮಾಡತಕ್ಕ ಫೀಜು ಐವತ್ತು ರೂಪಾಯಿಗಳಾಗಿರತಕ್ಕದ್ದು.

1. 1981ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ 01.01.1976ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**45. ಅಂತರ್ವಾದ ದಾವೆಗಳು.-** (1) ಅಂತರ್ವಾದ ದಾವೆಯಲ್ಲಿ, ವಾದಪತ್ರದ ಮೇಲೆ 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಫೀಜನ್ನು ಸಂದಾಯ ಮಾಡತಕ್ಕದ್ದು.

(2) ಕ್ಲೇಮುದಾರರ ನಡುವೆ ವಿವಾದಾಂಶಗಳನ್ನು ರೂಪಿಸಲಾಗಿರುವಲ್ಲಿ, ದಾವೆಯ ವಸ್ತು ವಿಷಯಕ್ಕೆ ಸೇರಿದ, ಋಣದ ಮೊಬಲಗು ಅಥವಾ ಹಣ ಅಥವಾ ಇತರ ಸ್ವತ್ತು ಅಥವಾ ಚರ ಅಥವಾ ಸ್ಥಿರ ಸ್ವತ್ತಿನ ಮಾರುಕಟ್ಟೆ ಮೌಲ್ಯ, ಇವುಗಳ ಮೇಲೆ ಲೆಕ್ಕಹಾಕಿದ ಫೀಜನ್ನು ಸಂದಾಯ ಮಾಡತಕ್ಕದ್ದು. ಇಂಥ ಫೀಜನ್ನು ವಿಧಿಸುವಲ್ಲಿ ವಾದಪತ್ರದ ಮೇಲೆ ಪಾವತಿಸಲಾದ ಫೀಜಿನಷ್ಟು ಜಮಾ ಮಾಡತಕ್ಕದ್ದು; ಮತ್ತು ಋಣವನ್ನು ಅಥವಾ ಹಣದ ಮೊಬಲಗನ್ನು ಅಥವಾ ಸ್ವತ್ತನ್ನು, ಪರಸ್ಪರರ ವಿರುದ್ಧ ಕ್ಲೇಮು ಮಾಡುವ ಕ್ಲೇಮುದಾರರು, ಬಾಕಿ ಉಳಿದ ಫೀಜನ್ನು ಸಮಪಾಲುಗಳಲ್ಲಿ ಪಾವತಿಸತಕ್ಕದ್ದು.

(3) ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿನ ಮೌಲ್ಯವು, ದಾವೆಗೆ ಸಂಬಂಧಿಸಿದ ಋಣದ ಮೊಬಲಗಾಗಲಿ, ಹಣದ ಮೊಬಲಗಾಗಲಿ ಅಥವಾ ಇತರ ಸ್ವತ್ತಿನ ಮಾರುಕಟ್ಟೆ ಮೌಲ್ಯವಾಗಲಿ ಆಗಿರತಕ್ಕದ್ದು.

**46. ತೃತೀಯ ಪಕ್ಷಕಾರನ ವ್ಯವಹರಣೆಗಳು.-** ತೃತೀಯ ಪಕ್ಷಕಾರನ ವ್ಯವಹರಣೆಗಳಲ್ಲಿ, ತೃತೀಯ ಪಕ್ಷಕಾರನ ವಿರುದ್ಧ ಅಥವಾ ಸಹ ಪ್ರತಿವಾದಿಯ ವಿರುದ್ಧ ವಂತಿಗೆ ಅಥವಾ ನಷ್ಟ ಭರ್ತಿಯನ್ನು ಕ್ಲೇಮು ಮಾಡಲಾಗಿದ್ದರೆ, ಆತನ ವಿರುದ್ಧ ಕ್ಲೇಮು ಮಾಡಿದ ವಂತಿಗೆ ಅಥವಾ ನಷ್ಟ ಭರ್ತಿ ಮೌಲ್ಯದ ಅರ್ಧದ ಮೇಲೆ ಫೀಜನ್ನು ವಿಧಿಸತಕ್ಕದ್ದು:

ಪರಂತು, ತೃತೀಯ ಪಕ್ಷಕಾರನ ನೋಟೀಸನ್ನು ದಾಖಲಿಸಿದ ಪ್ರತಿವಾದಿಯ ವಿರುದ್ಧದ ದಾವೆಯನ್ನು ಪೂರ್ತಿಯಾಗಿ ಅಥವಾ ಭಾಗಶಃ ವಜಾ ಮಾಡಲಾಗಿದ್ದರೆ, ಅವನು ಸಂದಾಯ ಮಾಡಿದ್ದ ಪೂರ್ತಿ ಅಥವಾ ದಾಮಾಷಾ ಭಾಗದ ಫೀಜಿನ ಮರುಪಾವತಿಗೆ ಅವನು ಹಕ್ಕುಳ್ಳವನಾಗಿರತಕ್ಕದ್ದು.

**ವಿವರಣೆ.-** ತೃತೀಯ ಪಕ್ಷಕಾರನ ವ್ಯವಹರಣೆಗಳಲ್ಲಿ ಮಾಡಿದ ಎದುರು ಕ್ಲೇಮುಗಳಿಗೆ ಕೂಡ ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**47. ಅನ್ಯಥಾ ಉಪಬಂಧಿಸಿರದ ದಾವೆಗಳು.-** ಅನ್ಯಥಾ ಉಪಬಂಧಿಸಿರದ ದಾವೆಗಳಲ್ಲಿ ಈ ಮುಂದೆ ಹೇಳಿದ ದರಗಳ ಪ್ರಕಾರ ಫೀಜು ಸಂದಾಯವಾಗತಕ್ಕದ್ದು.

| | | |
|---|---|---|
| (i) | ರೆವಿನ್ಯೂ ನ್ಯಾಯಾಲಯದಲ್ಲಿ | [1][ಐವತ್ತು ರೂಪಾಯಿಗಳು.][1] |
| (ii) | ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ | ವಸ್ತು-ವಿಷಯದ ಮೌಲ್ಯವು 5000 ರೂ. ಅಥವಾ ಕಡಿಮೆ ಇದ್ದರೆ ಇಪ್ಪತ್ತು ರೂಪಾಯಿಗಳು; ಮೌಲ್ಯವು 5,000 ರೂ.ಗಳನ್ನು ಮೀರಿದ್ದು 10,000 ರೂ.ಗಳಿಗೆ ಕಡಿಮೆ ಇದ್ದರೆ ಒಂದು ನೂರು ರೂಪಾಯಿಗಳು; ಮತ್ತು ಮೌಲ್ಯವು 10,000 ರೂ.ಗಳು; ಮತ್ತು ಅದಕ್ಕಿಂತ ಹೆಚ್ಚು ಇದ್ದರೆ ಎರಡು ನೂರು ರೂಪಾಯಿಗಳು. |
| 1. 1996ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ 28.03.1996 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |

**48. ಪರಿಹಾರಕ್ಕೆ ಸಂಬಂಧಿಸಿದಂತೆ [1][ತೀರ್ಮಾನ, ಐತೀರ್ಪು ಅಥವಾ ಆದೇಶದ][1] ವಿರುದ್ಧವಾಗಿರುವ ಅಪೀಲು ವಿವರಣಪತ್ರದ ಮೇಲೆ ಫೀಜು.-** ಸಾರ್ವಜನಿಕ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮದ ಮೇರೆಗೆ ಸ್ವತ್ತಿನ ಆರ್ಜನೆಗೆ ಸಂಬಂಧಿಸಿದ ಪರಿಹಾರಕ್ಕೆ ಸಂಬಂಧಿಸಿದ [1][ತೀರ್ಮಾನ, ಐತೀರ್ಪು ಅಥವಾ ಆದೇಶದ][1] ವಿರುದ್ಧದ ಅಪೀಲು-ವಿವರಣಪತ್ರದ ಮೇಲೆ ಈ ಅಧಿನಿಯಮದ ಮೇರೆಗೆ ಸಂದಾಯಮಾಡಬೇಕಾಗಿರುವ ಫೀಜನ್ನು, ಐತೀರ್ಪಿನ ಮೊಬಲಗು ಮತ್ತು [2][ಅಪೀಲುದಾರನು][2] ಕ್ಲೇಮು ಮಾಡಿದ ಮೊಬಲಗು, ಇವುಗಳ ನಡುವಿನ ವ್ಯತ್ಯಾಸದ ಮೇಲೆ ಲೆಕ್ಕಮಾಡತಕ್ಕದ್ದು.

[3][**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ "ಐತೀರ್ಪಿನ ಮೊಬಲಗು"ಹಾಗೂ "ಕ್ಲೇಮು ಮಾಡಿದ ಮೊಬಲಗು"ಎಂಬ ಪದಾವಳಿಗಳು, ಆರ್ಜನೆಯ ಕಡ್ಡಾಯ ಸ್ವರೂಪವನ್ನು ಪರಿಗಣಿಸಿ ಆರ್ಜನೆಗೆ ಸಂಬಂಧಿಸಿದಂತೆ ಉಪಬಂಧಿಸಿದ ಕಾನೂನಿಗನುಸಾರವಾಗಿ ಸಂದಾಯಮಾಡತಕ್ಕ ಯಾವುದೇ ಇತರೆ ಹೆಚ್ಚುವರಿ ಮೊಬಲಗನ್ನು ಒಳಗೊಳ್ಳುತ್ತದೆ.][3]

1. 1969ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ 22.05.1969 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

2. 1998ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 28.05.1998 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

3. 1976ರ ಅಧಿನಿಯಮ ಸಂಖ್ಯೆ 80ರ ಮೂಲಕ ದಿನಾಂಕ 15.08.1960 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**49. ಅಪೀಲುಗಳು.-** ಅಪೀಲಿನಲ್ಲಿ, [1][48ನೇ ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು ಸಂದಾಯಮಾಡಬೇಕಾದ ಫೀಜು,][1] ಅಪೀಲಿನ ವಸ್ತು ವಿಷಯದ ಮೇಲೆ, ಮೊದಲನೇ ಸಲ, ನ್ಯಾಯಾಲಯದಲ್ಲಿ ಸಂದಾಯಮಾಡಬೇಕಾದ ಫೀಜಿನಷ್ಟೇ ಇರತಕ್ಕದ್ದು:

ಪರಂತು, ಅಂತಿಮ ಡಿಕ್ರಿಯ ವಿರುದ್ಧ, ಒಬ್ಬ ವ್ಯಕ್ತಿಯು ಹೂಡಿದ ಅಪೀಲು ವಿವರಣಪತ್ರದ ಮೇಲೆ ಫೀಜು ವಿಧಿಸುವಲ್ಲಿ, ಅವನು ಮೊದಲನೇ ಸಲ ನ್ಯಾಯಾಲಯದಿಂದ ಅಥವಾ ಅಪೀಲು ನ್ಯಾಯಾಲಯದಿಂದ ಮಾಡಿದ ಪ್ರಾರಂಭಿಕ ಡಿಕ್ರಿಯ ವಿರುದ್ಧ ಒಬ್ಬ ವ್ಯಕ್ತಿಯು ಹೂಡಿದ ಅಪೀಲು ಇತ್ಯರ್ಥವಾಗಿದ್ದಲ್ಲಿ, ಪ್ರಾಥಮಿಕ ಡಿಕ್ರಿಯ ವಿರುದ್ಧದ ಅಪೀಲಿನಲ್ಲಿ ಅಂಥ ವ್ಯಕ್ತಿಯು, ಪಾವತಿಸಿದ ಫೀಜಿನಷ್ಟು ಜಮೆ ಮಾಡತಕ್ಕದ್ದು.

1. 1969ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 22.05.1969 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**ವಿವರಣೆ (1).-** ಅಪೀಲು, ಪರಿಹಾರ ನಿರಾಕರಣೆಯ ವಿರುದ್ಧವಿರಲಿ ಅಥವಾ ಪರಿಹಾರ ನೀಡುವಿಕೆ ವಿರುದ್ಧವಿರಲಿ, ಅಪೀಲಿನಲ್ಲಿ ಸಂದಾಯಮಾಡತಕ್ಕ ಫೀಜು, ಮೊದಲನೇ ಸಲ ನ್ಯಾಯಾಲಯದಲ್ಲಿ ಪರಿಹಾರದ ಮೇಲೆ ಸಂದಾಯಮಾಡಬೇಕಾದ ಫೀಜಿನಷ್ಟೇ ಇರತಕ್ಕದ್ದು.

**ವಿವರಣೆ (2).-** ಅಂಥ ಖರ್ಚುಗಳೇ ಅಪೀಲಿನ ವಸ್ತು ವಿಷಯದ ಭಾಗವಾಗಿರುವ ಹೊರತು ಅಥವಾ ದಾವೆಯಲ್ಲಿ ಮುಖ್ಯ ವಿಷಯದ ಬಗ್ಗೆ ಕ್ಲೇಮು ಮಾಡಲಾದ ಪರಿಹಾರಕ್ಕಿಂತ ಖರ್ಚುಗಳಿಗೆ ಸಂಬಂಧಿಸಿದಂತೆ ಪರಿಹಾರಕ್ಕೆ ಜೊತೆಯಾದ ಅಥವಾ ಸ್ವತಂತ್ರವಾದ ಕಾರಣಗಳಿಗಾಗಿ ಕ್ಲೇಮು ಮಾಡಲಾಗಿರುವ ಹೊರತು, ಖರ್ಚುಗಳು ಅಪೀಲಿನ ವಸ್ತು ವಿಷಯದ ಭಾಗಗಳಾಗಿವೆಯೆಂದು ಭಾವಿಸತಕ್ಕದ್ದಲ್ಲ.

**ವಿವರಣೆ (3).-** ದಾವೆಯನ್ನು ಹೂಡಿದ ನಂತರ ಬಡ್ಡಿಯ ಐತೀರ್ಪನ್ನು ಒಳಗೊಂಡಿರುವ ಕ್ಲೇಮುಗಳಲ್ಲಿ, ದಾವೆಯ ಇತ್ಯರ್ಥದ ಅವಧಿಯಲ್ಲಿ ಅವರ ಡಿಕ್ರಿಯ ದಿನಾಂಕದವರೆಗೆ ಒದಗಿಬಂದ ಬಡ್ಡಿಯು, ಅಂಥ ಬಡ್ಡಿಯನ್ನು ಬಿಟ್ಟುಕೊಡಲಾಗಿರುವ ಹೊರತು, ಅಪೀಲಿನ ವಸ್ತು ವಿಷಯದ ಭಾಗವಾಗಿದೆಯೆಂದು ಭಾವಿಸತಕ್ಕದ್ದು.

**ವಿವರಣೆ (4).-** ಅಪೀಲಿನಲ್ಲಿ ಕೋರಲಾದ ಪರಿಹಾರವು, ಮೊದಲ ಸಲವಾಗಿ ನ್ಯಾಯಾಲಯದಲ್ಲಿ ಕೋರಲಾದ ಅಥವಾ ನಿರಾಕರಿಸಲಾದ ಪರಿಹಾರಕ್ಕಿಂತ ಬೇರೆಯದಾಗಿದ್ದರೆ, ಅಪೀಲಿನಲ್ಲಿ ಸಂದಾಯಮಾಡತಕ್ಕ ಫೀಜು, ಅಪೀಲಿನಲ್ಲಿ ಕೋರಲಾದ ಪರಿಹಾರದ ಮೇಲೆ ಮೊದಲ ಸಲವಾಗಿ ನ್ಯಾಯಾಲಯದಲ್ಲಿ ಸಂದಾಯಮಾಡಬೇಕಾದ ಫೀಜಿನಷ್ಟೇ ಆಗಿರತಕ್ಕದ್ದು.

**ವಿವರಣೆ (5).-** ಸಂದಾಯಮಾಡಬೇಕಾದ ಫೀಜನ್ನು ಲೆಕ್ಕಮಾಡುವ ಅಥವಾ ನಿರ್ಧರಿಸುವ ಉದ್ದೇಶಕ್ಕಾಗಿ ಅಪೀಲಿನ ವಸ್ತು ವಿಷಯದ ಮಾರುಕಟ್ಟೆ ಮೌಲ್ಯವನ್ನು ಖಚಿತಪಡಿಸಿಕೊಳ್ಳುವಲ್ಲಿ ವಾದಪತ್ರವನ್ನು ಹಾಜರುಪಡಿಸಿದ ದಿನಾಂಕದಂದು ಇದ್ದಂತೆ ಅಂಥ ಮಾರುಕಟ್ಟೆ ಮೌಲ್ಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

## ಅಧ್ಯಾಯ V

## ದಾವೆಗಳ ಮೌಲ್ಯ ನಿಗದಿ

**50. ಬೇರೆ ರೀತಿ ಉಪಬಂಧಿಸಲಾಗಿರದ ದಾವೆಗಳು.-** (1) ಯಾವುದೇ ದಾವೆಯಲ್ಲಿ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅದರ ಮೌಲ್ಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಅಥವಾ ಬೇರೆ ಯಾವುದೇ ಕಾನೂನಿನಲ್ಲಿ ಬೇರೆ ರೀತಿ ನಿರ್ದಿಷ್ಟವಾದ ಉಪಬಂಧವನ್ನು ಮಾಡಿರದಿದ್ದಲ್ಲಿ, ಆ ಉದ್ದೇಶದ ಮೌಲ್ಯ ಮತ್ತು ಈ ಅಧಿನಿಯಮದ ಮೇರೆಗೆ ಸಂದಾಯಮಾಡತಕ್ಕ ಫೀಜನ್ನು ಲೆಕ್ಕಮಾಡುವ ಉದ್ದೇಶಕ್ಕಾಗಿನ ಮೌಲ್ಯ, ಇವೆರಡೂ ಒಂದೇ ಆಗಿರತಕ್ಕದ್ದು:

[1][ಪರಂತು, 7ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ. ಸದರಿ ಉಪಪ್ರಕರಣದ (ಎ), (ಬಿ) ಅಥವಾ (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಯ ಮೌಲ್ಯವು, ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವ, ಉದ್ದೇಶಕ್ಕಾಗಿ ಅಂಥ ಭೂಮಿಯ ಮಾರುಕಟ್ಟೆ ಮೌಲ್ಯವಾಗಿರತಕ್ಕದ್ದು.][1]

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ನಿಗದಿಯಾದ ದರದ ಪ್ರಕಾರ ಈ ಅಧಿನಿಯಮದ ಮೇರೆಗೆ ದಾವೆಯಲ್ಲಿ ಫೀಜನ್ನು ಸಂದಾಯಮಾಡಬೇಕಾಗಿದ್ದಲ್ಲಿ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿನ ಮೌಲ್ಯವು, ಮಾರುಕಟ್ಟೆ-ಮೌಲ್ಯವಾಗಿರತಕ್ಕದ್ದು ಅಥವಾ ಅದನ್ನು ಹಣದ ರೂಪದ ಮೌಲ್ಯದಲ್ಲಿ ಅಂದಾಜು ಮಾಡುವುದು ಸಾಧ್ಯವಿರದಿದ್ದಲ್ಲಿ, ಅಂಥ ಮೊಬಲಗು ವಾದಿಯು ವಾದಪತ್ರದಲ್ಲಿ ತಿಳಿಸಿದಂಥದ್ದು ಆಗಿರತಕ್ಕದ್ದು.

**51. ಅಧಿಕಾರವ್ಯಾಪ್ತಿಯ ಉದ್ದೇಶಗಳಿಗಾಗಿ ದಾವೆಯ ಅಥವಾ ಅಪೀಲಿನ ಮೌಲ್ಯವನ್ನು ಯುಕ್ತವಾಗಿ ಮಾಡಿರಲಿಲ್ಲವೆಂದು, ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಆಕ್ಷೇಪ ಎತ್ತಿದಲ್ಲಿ ಪ್ರಕ್ರಿಯೆ.-** (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ ಕೇಂದ್ರ ಅಧಿನಿಯಮ V) ರ 99ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಂದು ದಾವೆಯ ಅಥವಾ ಅಪೀಲಿನ ಸಂಬಂಧದಲ್ಲಿ ಅತಿ ಹೆಚ್ಚಿನ ಮೌಲ್ಯ ನಿಗದಿಯ ಅಥವಾ ಕಡಿಮೆ ಮೌಲ್ಯ ನಿಗದಿ ಮಾಡಿದ ಕಾರಣದಿಂದ ಆ ದಾವೆಯ ಅಥವಾ ಅಪೀಲಿನ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯಿರದ ಮೊದಲನೇ

ಸಲವಾಗಿ, ನ್ಯಾಯಾಲಯವು ಅಥವಾ ಅಧೀನ ಅಪೀಲು ನ್ಯಾಯಾಲಯವು ಆ ಬಗ್ಗೆ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿದೆಯೆಂಬ ಆಕ್ಷೇಪವನ್ನು ಅಪೀಲು ನ್ಯಾಯಾಲಯವು,-

(ಎ) ಮೊದಲನೇ ಸಲವಾಗಿ ನ್ಯಾಯಾಲಯದಲ್ಲಿ, ವಿವಾದಾಂಶಗಳನ್ನು ರೂಪಿಸಿದ ಮತ್ತು ದಾಖಲಿಸಲಾಗಿದ್ದ ಸುನಾವಣೆ ಕಾಲಕ್ಕೆ ಅಥವಾ ಅದಕ್ಕೆ ಮುಂಚೆ ಅಥವಾ ಅಧೀನ ಅಪೀಲು ನ್ಯಾಯಾಲಯದಲ್ಲಿ, ಆ ನ್ಯಾಯಾಲಯಕ್ಕೆ ಒಪ್ಪಿಸಿದ ಅಪೀಲು ವಿವರಣಪತ್ರದಲ್ಲಿ, ಆ ಆಕ್ಷೇಪವನ್ನು ಎತ್ತಿದ್ದ ಹೊರತು; ಅಥವಾ

(ಬಿ) ದಾವೆಯ ಅಥವಾ ಅಪೀಲಿನ ಮೇಲೆ ಅತಿ ಹೆಚ್ಚಿನ ಮೌಲ್ಯವನ್ನು ಅಥವಾ ಕಡಿಮೆ ಮೌಲ್ಯ ನಿಗದಿ ಮಾಡಲಾಗಿತ್ತೆಂದು ಮತ್ತು ದಾವೆಯ ಅಥವಾ ಅಪೀಲಿನ ಗುಣದೋಷಗಳ ಮೇಲೆ ಅದರ ಇತ್ಯರ್ಥಕ್ಕೆ, ಅದರ ಹೆಚ್ಚಿನ ಮೌಲ್ಯ ನಿಗದಿಯು ಅಥವಾ ಕಡಿಮೆ ಮೌಲ್ಯ ನಿಗದಿಯು, ಪ್ರತಿಕೂಲವಾಗಿ ಪರಿಣಾಮ ಬೀರಿದೆಯೆಂದು, ತಾನು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಅಪೀಲು ನ್ಯಾಯಾಲಯಕ್ಕೆ ಮನದಟ್ಟಾದ ಹೊರತು

_ ಪುರಸ್ಕರಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ (ಎ) ಖಂಡದಲ್ಲಿ ನಮೂದಿಸಿರುವ ರೀತಿಯಲ್ಲಿ ಆಕ್ಷೇಪವನ್ನು ತೆಗೆದುಕೊಂಡಲ್ಲಿ, ಆದರೆ ಆ ಉಪಪ್ರಕರಣದ (ಬಿ) ಖಂಡದಲ್ಲಿ ನಮೂದಿಸಿರುವ ಎರಡೂ ವಿಷಯಗಳ ಬಗ್ಗೆ ಅಪೀಲು ನ್ಯಾಯಾಲಯಕ್ಕೆ ಮನದಟ್ಟಾಗದಿದ್ದರೆ ಮತ್ತು ತನಗೆ ಸಲ್ಲಿಸಿದ್ದ ಅಪೀಲಿನಲ್ಲಿ ಇರುವ ಇತರ ಅಪೀಲು ಕಾರಣಗಳನ್ನು ತಾನೇ ನಿರ್ಧರಿಸುವುದು ಅವಶ್ಯಕವಾಗಿರುವ ವಿಷಯ ಸಾಮಗ್ರಿಯು ತನ್ನ ಮುಂದೆ ಇದ್ದರೆ, ಆ ನ್ಯಾಯಾಲಯವು ಮೊದಲ ಸಲವಾಗಿ ನ್ಯಾಯಾಲಯದಲ್ಲಿ ಅಥವಾ ಅಧೀನ ಅಪೀಲು ನ್ಯಾಯಾಲಯದಲ್ಲಿ ಅಧಿಕಾರವ್ಯಾಪ್ತಿಯ ಯಾವ ದೋಷವಿಲ್ಲದಿದ್ದರೆ ಹೇಗೆ ಅಪೀಲು ಇತ್ಯರ್ಥ ಮಾಡತಕ್ಕದ್ದೋ ಹಾಗೆ ಮಾಡತಕ್ಕದ್ದು.

(3) ಆ ರೀತಿಯಲ್ಲಿ ಆಕ್ಷೇಪವನ್ನು ತೆಗೆದುಕೊಂಡಿದ್ದರೆ ಮತ್ತು ಆ ಎರಡೂ ವಿಷಯಗಳ ಬಗ್ಗೆ ಅಪೀಲು ನ್ಯಾಯಾಲಯಕ್ಕೆ ಮನದಟ್ಟಾದರೆ ಮತ್ತು ಆ ವಿಷಯ ಸಾಮಗ್ರಿಗಳು ಅದರ ಮುಂದೆ ಇಲ್ಲದಿದ್ದರೆ, ಅದು ಅಪೀಲುಗಳ ಸುನಾವಣೆಯ ಬಗ್ಗೆ ನ್ಯಾಯಾಲಯಕ್ಕೆ ಅನ್ವಯವಾಗತಕ್ಕ ನಿಯಮಗಳ ಪ್ರಕಾರ, ಆ ಅಪೀಲಿನ ಬಗ್ಗೆ ವ್ಯವಹರಿಸಲು ಉಪಕ್ರಮಿಸತಕ್ಕದ್ದು; ಆದರೆ ಅದು ದಾವೆಯನ್ನು ಅಥವಾ ಅಪೀಲನ್ನು ಹಿಂದಿರುಗಿಸಿದರೆ ಅಥವಾ ವಿವಾದಾಂಶಗಳನ್ನು ರೂಪಿಸಿ ವಿಚಾರಣೆಗೆ ಒಪ್ಪಿಸಿದರೆ ಅಥವಾ ಹೆಚ್ಚಿನ ಸಾಕ್ಷ್ಯಗಳನ್ನು ತೆಗೆದುಕೊಳ್ಳಬೇಕೆಂದು ಅಗತ್ಯಪಡಿಸಿದ್ದರೆ, ಆ ದಾವೆಯನ್ನು ಅಥವಾ ಅಪೀಲನ್ನು ಪುರಸ್ಕರಿಸಲು ಸಕ್ಷಮ ನ್ಯಾಯಾಲಯಕ್ಕೆ ಅದು ತನ್ನ ಆದೇಶವನ್ನು ಕಳುಹಿಸತಕ್ಕದ್ದು.

(4) ಅಪೀಲು ನ್ಯಾಯಾಲಯಕ್ಕೆ ಸಂಬಂಧಿಸಿದ, ಈ ಪ್ರಕರಣದಲ್ಲಿರುವ ಉಪಬಂಧಗಳು, ಅವುಗಳನ್ನು ಅನ್ವಯಿಸಬಹುದಾದ ಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ ಕೇಂದ್ರ ಅಧಿನಿಯಮ V) ರ 115ನೇ ಪ್ರಕರಣದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಅಧಿನಿಯಮದ ಮೇರೆಗೆ ಪುನರೀಕ್ಷಣೆಯ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ನ್ಯಾಯಾಲಯಕ್ಕೆ ಅನ್ವಯವಾಗತಕ್ಕದ್ದು.

## ಅಧ್ಯಾಯ VI

### ಪ್ರೊಬೇಟ್ ಗಳು, ಆಡಳಿತ ಅಧಿಕಾರ ಪತ್ರಗಳು ಮತ್ತು ಆಡಳಿತ ಅಧಿಕಾರ ಪ್ರಮಾಣಪತ್ರಗಳು.

**52. ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳಿಗೆ ಸಂಬಂಧಿಸಿದ ಅರ್ಜಿ.-** (1) IIIನೇ ಅನುಸೂಚಿಯ Iನೇ ಭಾಗದಲ್ಲಿ ವಿವರಿಸಲಾಗಿರುವ ನಮೂನೆಯಲ್ಲಿ, ಎಸ್ಟೇಟಿನ ಮೌಲ್ಯ ನಿಗದಿಯ ಎರಡು ಪ್ರತಿಗಳು, ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಮಂಜೂರಾತಿಗೆ ಸಂಬಂಧಿಸಿದ ಪ್ರತಿಯೊಂದು ಅರ್ಜಿಯ ಜೊತೆಗೆ ಇರತಕ್ಕದ್ದು.

(2) ಇಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅದರ ಮತ್ತು ಮೌಲ್ಯ ನಿಗದಿಯ ಪ್ರತಿಯನ್ನು ಆ ಎಸ್ಟೇಟಿರುವ ಜಿಲ್ಲೆಯ ಡೆಪ್ಯುಟಿ ಕಮೀಷನರಿಗೆ ಅಥವಾ ಎಸ್ಟೇಟು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿದ್ದರೆ ಎಸ್ಟೇಟಿನಲ್ಲಿ ಸೇರಿದ ಸ್ಥಿರ ಸ್ವತ್ತಿನ ಅತ್ಯಂತ ಹೆಚ್ಚಿನ ಮೌಲ್ಯದ ಭಾಗವಿರುವ ಜಿಲ್ಲೆಯ ಡೆಪ್ಯುಟಿ ಕಮೀಷನರಿಗೆ ನ್ಯಾಯಾಲಯವು ಆ ಅರ್ಜಿಯ ಮತ್ತು ಮೌಲ್ಯ ನಿಗದಿಯ ಪ್ರತಿಯನ್ನು ಕಳುಹಿಸತಕ್ಕದ್ದು.

**53. ಫೀಜು ವಿಧಿಸುವುದು.-** (1) ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ಕೊಡುವುದಕ್ಕಾಗಿ ವಿಧಿಸಬಹುದಾದ ಫೀಜಿನಲ್ಲಿ,-

(ಎ) ಮೃತನ ಮರಣದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿಯನ್ನು ಸಲ್ಲಿಸಲಾದಲ್ಲಿ, ಅಂಥ ದಿನಾಂಕದಂದು ಎಸ್ಟೇಟಿಗಿದ್ದ ಮಾರುಕಟ್ಟೆ ಮೌಲ್ಯದ ಮೇಲೆ; ಅಥವಾ

(ಬಿ) ಅಂಥ ದಿನಾಂಕದಿಂದ ಒಂದು ವರ್ಷ ಕಳೆದ ತರುವಾಯ ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಅರ್ಜಿಯ ದಿನಾಂಕದಂದು ಎಸ್ಟೇಟಿಗಿದ್ದ ಮಾರುಕಟ್ಟೆ ಮೌಲ್ಯದ ಮೇಲೆ Iನೇ ಅನುಸೂಚಿಯ 6ನೇ ಅನುಚ್ಛೇದದಲ್ಲಿ ನಿಯಮಿಸಲಾದ ದರದ ಅಥವಾ ದರಗಳ ಮೇರೆಗೆ

- ಲೆಕ್ಕಹಾಕಿದ ಫೀಜನ್ನು ಒಳಗೊಂಡಿರತಕ್ಕದ್ದು:

ಪರಂತು, ಪ್ರಯೋಜನಕಾರಿಯಾಗಿರದ ಅಥವಾ ಪ್ರಯೋಜನ ಹಿತಾಸಕ್ತಿಯನ್ನು ಪ್ರದತ್ತ ಮಾಡುವ ಸಾಮಾನ್ಯ ಅಧಿಕಾರ ಹೊಂದಿರುವ ನ್ಯಾಸದ ಸ್ವತ್ತು, ಈ ಅಧ್ಯಾಯದ ಪ್ರಕಾರ ಯಾವುದೇ ಫೀಜಿಗೆ ಗುರಿಯಾಗತಕ್ಕದ್ದಲ್ಲ.

**ವಿವರಣೆ.-** ಮಿತಾಕ್ಷರ ಕಾನೂನಿಗೆ ಒಳಪಟ್ಟಿರುವ ಜಂಟಿ ಹಿಂದೂ ಕುಟುಂಬದ ಯಾರೇ ಸದಸ್ಯನು ಜಂಟಿ ಕುಟುಂಬದ ಸದಸ್ಯನ ಎಸ್ಟೇಟಿನ ಬಗ್ಗೆ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಸಲ್ಲಿಸಿರುವಲ್ಲಿ, ಮರಣಕ್ಕೆ ನಿಕಟ ಪೂರ್ವದಲ್ಲಿ ಸ್ವತ್ತು ವಿಭಜನೆ ಮಾಡಲಾಗಿದ್ದರೆ ಸಂಯುಕ್ತ ಸ್ವತ್ತಿನಲ್ಲಿ, ಮೃತನು ಪಡೆಯಬಹುದಾಗಿದ್ದ ಪಾಲಿನ ಮೌಲ್ಯದ ಮೇಲೆ ಫೀಜನ್ನು ಪಾವತಿಸತಕ್ಕದ್ದು.

(2) ಫೀಜನ್ನು ಲೆಕ್ಕಮಾಡುವ ಉದ್ದೇಶಕ್ಕಾಗಿ,-

(ಎ) IIIನೇ ಅನುಸೂಚಿಯ Iನೇ ಭಾಗದ ಬಿ ಅನುಬಂಧದಲ್ಲಿ ನಮೂದಿಸಲಾದ ಬಾಬುಗಳ ಮೌಲ್ಯವನ್ನು ಎಸ್ಟೇಟಿನ ಮೌಲ್ಯದಲ್ಲಿ ಕಳೆಯತಕ್ಕದ್ದು:

ಪರಂತು, ಎಸ್ಟೇಟಿನ ಕೇವಲ ಒಂದು ಭಾಗದ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಕ್ಕೆ ಸಂಬಂಧಿಸಿದಂತೆ, ಅರ್ಜಿಯನ್ನು ಸಲ್ಲಿಸಿರುವಾಗ, ಯಾವುದೇ ಅಂತ್ಯ ಕ್ರಿಯೆಗಳಿಗೆ ಅಥವಾ ಉತ್ತರ ಕ್ರಿಯೆಗಳಿಗೆ ಸಂಬಂಧಿತ ಯಾವ ಋಣವನ್ನೂ, ಯಾವ ವೆಚ್ಚಗಳನ್ನೂ ಮತ್ತು ಅರ್ಜಿಯನ್ನು ಸಲ್ಲಿಸಿರುವುದಕ್ಕೆ ಸಂಬಂಧಿಸಿರದ ಎಸ್ಟೇಟಿನ ಯಾವುದೇ ಭಾಗದ ಮೇಲಿನ ಅಡಮಾನದ, ಯಾವುದೇ ಭಾಗವನ್ನು ಕಳೆಯತಕ್ಕದ್ದಲ್ಲ:

ಮತ್ತೂ ಪರಂತು, ಒಂದು ಎಸ್ಟೇಟಿನಲ್ಲಿ ಒಳಗೊಂಡ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (1925 ರ ಕೇಂದ್ರ ಅಧಿನಿಯಮ XXXIX)ರ ಭಾಗ X ರ ಮೇರೆಗೆ ಅಥವಾ 1827 ರ ಮುಂಬಯಿ ವಿನಿಯಮ VIIIರ ಮೇರೆಗೆ ಪ್ರಮಾಣಪತ್ರವನ್ನು ನೀಡಿದ ತರುವಾಯ, ಅದೇ ಎಸ್ಟೇಟಿನ ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ನೀಡಲಾಗಿದ್ದರೆ, ತದನಂತರ ನೀಡಲಾದ ಬಗ್ಗೆ ಸಂದಾಯಮಾಡತಕ್ಕ ಫೀಜಿನಲ್ಲಿ, ಈ ಮೊದಲು ಸಂದಾಯ ಮಾಡಲಾಗಿದ್ದ ಫೀಜಿನಷ್ಟು ಮೊಬಲಗನ್ನು ಕಡಿಮೆ ಮಾಡತಕ್ಕದ್ದು.

(ಬಿ) ಮೃತನು ಸ್ವತ್ತಿನ ಮೇಲೆ ಹೊಂದಿದ್ದ ಅಥವಾ ಮರಣ ಶಾಸನದ ಮೇರೆಗೆ ಸೃಜಿಸಿ ಗೊತ್ತುಪಡಿಸುವ ಅಧಿಕಾರವನ್ನು, ಆ ಅಧಿಕಾರದ ವಸ್ತು ವಿಷಯವಾಗಿರುವ ಸ್ವತ್ತಿನ ಮೌಲ್ಯವೆಂದು ಪರಿಗಣಿಸಿ ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

**54. ಪ್ರೊಬೇಟಿನ ಮಂಜೂರಾತಿ.-** 52ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷನರಿಗೆ ಉಲ್ಲೇಖ ಮಾಡಲಾಗಿದೆಯೆಂಬ ಕಾರಣದಿಂದ ಅಥವಾ 56ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷನರನ ಸೂಚನೆಗಳ ಕಾರಣದಿಂದ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರದ ಮಂಜೂರಾತಿಗೆ ವಿಳಂಬ ಮಾಡತಕ್ಕದ್ದಲ್ಲ; ಆದರೆ, ಅರ್ಜಿಯೊಡನೆ ಇರುವ ಮೌಲ್ಯ ನಿಗದಿಯಲ್ಲಿ ಅಥವಾ 56ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ದಾಖಲು ಮಾಡಿದ, ತಿದ್ದುಪಡಿಯಾದ ಮೌಲ್ಯ ನಿಗದಿಯಲ್ಲಿ ಒದಗಿಸಿರುವಂತೆ ಎಸ್ಟೇಟಿನ ನಿವ್ವಳ ಮೌಲ್ಯದ ಆಧಾರದ ಮೇರೆಗೆ, ಈ ಅಧಿನಿಯಮದಲ್ಲಿ ನಿಯಮಿಸಲಾದುದಕ್ಕಿಂತ ಕಡಮೆಯಿಲ್ಲದ ಫೀಜನ್ನು ಸಲ್ಲಿಸಲಾಗಿದೆಯೆಂಬುದನ್ನು ನ್ಯಾಯಾಲಯವು ತಾನು ಮನದಟ್ಟು ಮಾಡಿಕೊಳ್ಳುವವರೆಗೆ, ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಯಾವುದೇ ಮಂಜೂರಾತಿಯನ್ನು ಮಾಡತಕ್ಕದ್ದಲ್ಲ:

ಪರಂತು, ನ್ಯಾಯಾಲಯವು, ನಿಗದಿ ಮಾಡಬಹುದಾದ ಕಾಲದೊಳಗಾಗಿ ಸದರಿ ಫೀಜನ್ನು ಪಾವತಿಸಲಾಗುವುದೆಂದು ಪ್ರಧಾನ ಆಡಳಿತಗಾರನು ತನ್ನ ಅಧಿಕಾರ ಬಲದಿಂದ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ

ಭರವಸೆ ಕೊಟ್ಟ ಮೇಲೆ, ನ್ಯಾಯಾಲಯವು ಅವನಿಗೆ ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ನಿಯಮಿಸಲಾದ ಫೀಜನ್ನು ಪಾವತಿಸಿರದಿದ್ದಾಗ್ಯೂ ಮಂಜೂರು ಮಾಡಬಹುದು.

**55. ಹಲವಾರು ಮಂಜೂರಾತಿಗಳ ಸಂದರ್ಭಗಳಲ್ಲಿ ಪರಿಹಾರ.-** (1) ಎಸ್ಟೇಟಿಗೆ ಸಂಬಂಧಿಸಿದ ಇಡೀ ಸ್ವತ್ತಿನ ಬಗ್ಗೆ ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ಯಾವಾಗಲಾದರೂ ಮಂಜೂರು ಮಾಡಿರುವಾಗ ಮತ್ತು ಅಂಥ ಮಂಜೂರಾತಿಗೆ ಸಂಬಂಧಿಸಿದ ಅರ್ಜಿಯ ಮೇಲೆ ಈ ಅಧಿನಿಯಮದ ಮೇರೆಗೆ ಸಂದಾಯಮಾಡಬಹುದಾದ ಪೂರ್ತಿ ಫೀಜನ್ನು, ಅದರ ಮೇಲೆ ಪಾವತಿಸಿರುವಾಗ, ಅದೇ ಎಸ್ಟೇಟಿಗೆ ಸಂಬಂಧಿಸಿದ ಸದರಿ ಇಡೀ ಸ್ವತ್ತಿನ ಅಥವಾ ಅದರ ಯಾವುದೇ ಭಾಗದ ಸಂಬಂಧದಲ್ಲಿ ಅಂಥದೇ ಮಂಜೂರಾತಿಯನ್ನು ನೀಡುವಾಗ ಯಾವುದೇ ಫೀಜನ್ನು ಸಂದಾಯಮಾಡತಕ್ಕದ್ದಲ್ಲ.

(2) ಎಸ್ಟೇಟಿನ ಭಾಗವಾಗಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅಂಥ ಮಂಜೂರಾತಿಯನ್ನು ನೀಡಲಾಗಿದ್ದರೆ, ಆ ಬಗ್ಗೆ ಈ ಅಧಿನಿಯಮದ ಮೇರೆಗೆ ವಾಸ್ತವವಾಗಿ ಪಾವತಿಸಲಾಗಿದ್ದ ಫೀಜಿನ ಮೊಬಲಗನ್ನು, ಈ ಹಿಂದಿನ ಮಂಜೂರಾತಿಯು ಸಂಬಂಧಿಸಿದ ಸದರಿ ಸ್ವತ್ತಿನ ಅಥವಾ ಅದನ್ನೊಳಗೊಂಡ ಸದರಿ ಎಸ್ಟೇಟಿಗೆ ಸೇರಿದ ಸ್ವತ್ತಿನ ಸಂಬಂಧದಲ್ಲಿ ಅಂಥದೇ ಮಂಜೂರಾತಿಯನ್ನು ನೀಡುವಾಗ ಕಳೆಯತಕ್ಕದ್ದು.

**56. ಡೆಪ್ಯುಟಿ ಕಮೀಷನರರಿಂದ ವಿಚಾರಣೆ.-** (1) 52ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯ ಮತ್ತು ಮೌಲ್ಯ ನಿಗದಿಯ ಪ್ರತಿಯನ್ನು, ಯಾವ ಡೆಪ್ಯುಟಿ ಕಮೀಷನರನಿಗೆ ಕಳುಹಿಸಲಾಗಿದೆಯೋ, ಅವನು ಅದನ್ನು ಪರೀಕ್ಷಿಸತಕ್ಕದ್ದು ಮತ್ತು ಮೌಲ್ಯ ನಿಗದಿಯ ಸರಿತನದ ಬಗ್ಗೆ ಅಥವಾ ಸ್ವತ್ತಿನ ಭಾಗವು ಮಾತ್ರ ತನ್ನ ಜಿಲ್ಲೆಯಲ್ಲಿರುವಲ್ಲಿ, ಆ ಭಾಗದ ಮೌಲ್ಯ ನಿಗದಿಯ ಸರಿತನದ ಬಗ್ಗೆ ತನಗೆ ಯೋಗ್ಯವೆನಿಸುವಂಥ ಯಾವುದಾದರೂ ವಿಚಾರಣೆ ಮಾಡುವುದಿದ್ದರೆ, ಅದನ್ನು ಮಾಡಬಹುದು ಅಥವಾ ತನ್ನ ಅಧೀನದಲ್ಲಿರುವ ಯಾರೇ ಅಧಿಕಾರಿಯಿಂದ ಮಾಡಿಸಬಹುದು ಮತ್ತು ಸ್ವತ್ತಿನ ಭಾಗವನ್ನುಳ್ಳ ಬೇರೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರನನ್ನು ಅದರ ಸರಿಯಾದ ಮೌಲ್ಯ ನಿಗದಿಯನ್ನು ಒದಗಿಸಲು ಕೋರಬಹುದು.

(2) ಯಾವುದೇ ಸ್ವತ್ತಿನ ಸರಿಯಾದ ಮೌಲ್ಯ ನಿಗದಿಯನ್ನು ಒದಗಿಸಲು (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಡೆಪ್ಯುಟಿ ಕಮೀಷನರನು, ತನಗೆ ಯೋಗ್ಯವೆನಿಸುವಂಥ ಯಾವುದಾದರೂ ವಿಚಾರಣೆ ಮಾಡುವುದಿದ್ದರೆ ಅದನ್ನು ಮಾಡಿದ ತರುವಾಯ ಅಥವಾ ತನ್ನ ಅಧೀನದಲ್ಲಿರುವ ಯಾವುದೇ ಅಧಿಕಾರಿಯಿಂದ ಮಾಡಿಸಿದ ತರುವಾಯ ಕೋರಿಕೆಯನ್ನು ಪಾಲಿಸತಕ್ಕದ್ದು.

(3) ಅರ್ಜಿದಾರನು, ಮೃತನ ಸ್ವತ್ತಿನ ಮೌಲ್ಯವನ್ನು ಕಡಿಮೆ ಅಂದಾಜು ಮಾಡಿದ್ದಾನೆಂದು ಡೆಪ್ಯುಟಿ ಕಮೀಷನರನ ಅಭಿಪ್ರಾಯವಾಗಿದ್ದಲ್ಲಿ, ಅವನು, ತಾನು ಸೂಕ್ತವೆಂದು ಭಾವಿಸಿದರೆ ಅರ್ಜಿದಾರನನ್ನು ಸ್ವತಃ ಅಥವಾ ಏಜೆಂಟನ ಮೂಲಕ ಹಾಜರಾಗಲು ಕೋರಬಹುದು; ಮತ್ತು ಸಾಕ್ಷ್ಯಗಳನ್ನು ತೆಗೆದುಕೊಳ್ಳಬಹುದು ಮತ್ತು ಆ ವಿಷಯದಲ್ಲಿ ತನಗೆ ಯುಕ್ತವೆನಿಸುವಂಥ ರೀತಿಯಲ್ಲಿ ವಿಚಾರಣೆ ಮಾಡಬಹುದು; ಮತ್ತು ಸ್ವತ್ತಿನ ಮೌಲ್ಯವನ್ನು ಕಡಿಮೆ

ಅಂದಾಜು ಮಾಡಲಾಗಿದೆಯೆಂದು ಅವನು ವಿಚಾರಣೆಯ ನಂತರವೂ ಅಭಿಪ್ರಾಯಪಟ್ಟರೆ, ಮೌಲ್ಯ ನಿಗದಿಯನ್ನು ತಿದ್ದುಪಡಿ ಮಾಡಬೇಕೆಂದು ಮತ್ತು ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಕ್ಕೆ ಸಂಬಂಧಿಸಿದಂತೆ ಅರ್ಜಿಯು ನ್ಯಾಯಾಲಯದಲ್ಲಿ ಇತ್ಯರ್ಥವಾಗಿದ್ದರೆ, ತಿದ್ದುಪಡಿ ಮಾಡಲಾದ ಮೌಲ್ಯದ ಪ್ರತಿಯನ್ನು ನ್ಯಾಯಾಲಯದಲ್ಲಿ ದಾಖಲು ಮಾಡಬೇಕೆಂದು ಅರ್ಜಿದಾರನಿಗೆ ಅಗತ್ಯಪಡಿಸಬಹುದು.

(4) ಯಾವುದೇ ಸಂದರ್ಭದಲ್ಲಿ, ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ಮಂಜೂರು ಮಾಡಲಾಗಿದ್ದರೆ ಮತ್ತು ಡೆಪ್ಯುಟಿ ಕಮೀಷನರಿಗೆ ಮನದಟ್ಟಾಗುವಂತೆ ಅರ್ಜಿದಾರನು ಮೌಲ್ಯ ನಿಗದಿಯನ್ನು ತಿದ್ದುಪಡಿ ಮಾಡಿದರೆ ಮತ್ತು ಎಸ್ಟೇಟಿನ ನಿಜವಾದ ಮೌಲ್ಯದ ಮೇರೆಗೆ ಸಂದಾಯಮಾಡಿರುವುದಕ್ಕಿಂತ ಕಡಿಮೆ ಫೀಜನ್ನು ಸಲ್ಲಿಸಲಾಗಿದೆಯೆಂದು ಡೆಪ್ಯುಟಿ ಕಮೀಷನರಿಗೆ ಕಂಡುಬಂದರೆ, ಅವನು 58ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಮುಂದುವರಿಯತಕ್ಕದ್ದು; ಆದರೆ, ಎಸ್ಟೇಟಿನ ನಿಜವಾದ ಮೌಲ್ಯಕ್ಕೆ ಅನುಸಾರ ಸಂದಾಯಮಾಡಬೇಕಾದುದಕ್ಕಿಂತ ಹೆಚ್ಚು ಫೀಜನ್ನು ಪಾವತಿಸಲಾಗಿದ್ದರೆ, ಹೆಚ್ಚಾದ ಫೀಜನ್ನು ಅರ್ಜಿದಾರನಿಗೆ ಮರು ಪಾವತಿಸತಕ್ಕದ್ದು.

(5) ಡೆಪ್ಯುಟಿ ಕಮೀಷನರಿಗೆ ಮನದಟ್ಟಾಗುವಂತೆ ಅರ್ಜಿದಾರನು ಮೌಲ್ಯ ನಿಗದಿಯನ್ನು ತಿದ್ದುಪಡಿ ಮಾಡದಿದ್ದರೆ, ಸ್ವತ್ತಿನ ನಿಜವಾದ ಮೌಲ್ಯದ ವಿಚಾರಣೆಗಾಗಿ ಡೆಪ್ಯುಟಿ ಕಮೀಷನರನು ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಕ್ಕೆ ಸಂಬಂಧಿಸಿದಂತೆ, ಯಾವ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ, ಅದನ್ನು ಕೇಳಿಕೊಳ್ಳಬಹುದು:

ಪರಂತು, ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (1925ರ ಕೇಂದ್ರ ಅಧಿನಿಯಮ XXXIX)ರ 317ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ [1][ಯಾವ ದಿನಾಂಕದಂದು ಡೆಪ್ಯುಟಿ ಕಮೀಷನರಿಗೆ ದಾಸ್ತಾನು ಪ್ರದರ್ಶನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸೂಚಿಸಿದೆಯೋ, ಆ ದಿನಾಂಕದಿಂದ][1] ಆರು ತಿಂಗಳು ಅವಧಿ ಮುಗಿದ ತರುವಾಯ ಅಂಥ ಯಾವ ಸೂಚನೆಯನ್ನೂ ಮಾಡತಕ್ಕದ್ದಲ್ಲ.

1. 1976ರ ಅಧಿನಿಯಮ ಸಂಖ್ಯೆ 80ರ ಮೂಲಕ ದಿನಾಂಕ 07.12.1976 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**57. ನ್ಯಾಯಾಲಯಕ್ಕೆ ಅರ್ಜಿ ಮತ್ತು ನ್ಯಾಯಾಲಯದ ಅಧಿಕಾರ.-** (1) ನ್ಯಾಯಾಲಯವು, 56ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷರನು ನೀಡಿದ ಸೂಚನೆಯ ಮೇಲೆ ಅಂದಾಜು ಮಾಡಬೇಕಾಗಿದ್ದ, ಮೃತನ ಎಸ್ಟೇಟಿನ ನಿಜವಾದ ಮೌಲ್ಯದ ಬಗ್ಗೆ ವಿಚಾರಣೆಯನ್ನು ಮಾಡತಕ್ಕದ್ದು ಅಥವಾ ತನ್ನ ಅಧೀನದಲ್ಲಿರುವ ನ್ಯಾಯಾಲಯದಿಂದ ಅಥವಾ ಅಧಿಕಾರಿಯಿಂದ ಮಾಡಿಸತಕ್ಕದ್ದು. ವಿಚಾರಣೆಯಲ್ಲಿ ಡೆಪ್ಯುಟಿ ಕಮೀಷರನು, ಒಬ್ಬ ಪಕ್ಷಕಾರನಾಗಿರುವನೆಂದು ಭಾವಿಸತಕ್ಕದ್ದು.

(2) ಇಂಥ ಯಾವುದೇ ವಿಚಾರಣೆಯ ಉದ್ದೇಶಗಳಿಗಾಗಿ, ನ್ಯಾಯಾಲಯವು ಅಥವಾ ಇಂಥ ವಿಚಾರಣೆ ನಡೆಸಲು ನ್ಯಾಯಾಲಯದಿಂದ ಅಧಿಕಾರ ಪಡೆದಿರುವ ಅಧೀನ ನ್ಯಾಯಾಲಯವು ಅಥವಾ ಅಧಿಕಾರಿಯು, ಖುದ್ದಾಗಿ ಅಥವಾ ಕಮೀಷನ್ ಮೂಲಕ ಅರ್ಜಿದಾರನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸಬಹುದು ಮತ್ತು ಎಸ್ಟೇಟಿನ ನಿಜವಾದ ಮೌಲ್ಯವನ್ನು ರುಜುವಾತುಪಡಿಸಲು ಹಾಜರುಪಡಿಸಲಾಗುವಂಥ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು ಮತ್ತು ವಿಚಾರಣೆಯನ್ನು ಅಧೀನ ನ್ಯಾಯಾಲಯಕ್ಕೆ ಅಥವಾ ಅಧಿಕಾರಿಗೆ ವಹಿಸಿಕೊಡಲಾಗಿರುವಲ್ಲಿ, ಆ ನ್ಯಾಯಾಲಯವು ಅಥವಾ ಅಧಿಕಾರಿಯು ತೆಗೆದುಕೊಂಡ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ವಾಪಸು ಮಾಡತಕ್ಕದ್ದು ಮತ್ತು ವಿಚಾರಣೆಯ ಫಲಿತಾಂಶವನ್ನು ವರದಿ ಮಾಡತಕ್ಕದ್ದು; ಮತ್ತು ಇಂಥ ವರದಿಯು ಮತ್ತು ಹಾಗೆ ತೆಗೆದುಕೊಳ್ಳಲಾದ ಸಾಕ್ಷ್ಯವು, ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿರತಕ್ಕದ್ದು.

(3) ಸಂದರ್ಭಾನುಸಾರ, ವಿಚಾರಣೆಯು ಪೂರ್ತಿಯಾದ ಮೇಲೆ ಅಥವಾ (2)ನೇ ಉಪಪ್ರಕರಣದಲ್ಲಿ ಹೇಳಿರುವಂಥ ವರದಿ ತಲುಪಿದ ಮೇಲೆ, ನ್ಯಾಯಾಲಯವು, ಯಾವುದೇ ಎಸ್ಟೇಟಿನ ನಿಜವಾದ ಮೌಲ್ಯ ಎಂಬುದನ್ನು ಅಂದಾಜು ಮಾಡಬೇಕಿತ್ತೋ, ಆ ಮೌಲ್ಯ ಕುರಿತಂತೆ ನಿರ್ಣಯವನ್ನು ದಾಖಲು ಮಾಡತಕ್ಕದ್ದು ಮತ್ತು ಇಂಥ ನಿರ್ಣಯವು ಅಂತಿಮವಾಗಿರತಕ್ಕದ್ದು.

(4) ನ್ಯಾಯಾಲಯವು ವಿಚಾರಣೆಯ ಖರ್ಚಿನ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ V) ರ ಉಪಬಂಧಗಳಿಗೆ ಅನುಸಾರವಾಗಿ ತನಗೆ ಸೂಕ್ತವೆನಿಸುವಂಥ ಆದೇಶವನ್ನು ಮಾಡಬಹುದು.

**58. ಅತಿ ಕಡಿಮೆ ಫೀಜನ್ನು ಸಂದಾಯ ಮಾಡಿದ್ದ ಪ್ರಕರಣಗಳಲ್ಲಿ ಉಪಬಂಧ.-** (1) ಯಾವುದಾದರೂ ಪ್ರಮಾದದ ಪರಿಣಾಮವಾಗಿ ಅಥವಾ ಎಸ್ಟೇಟಿನ ಯಾವುದೇ ನಿರ್ದಿಷ್ಟ ಭಾಗವು ಮೃತನಿಗೆ ಸೇರಿದ್ದಿತೆಂದು ಆ ಕಾಲಕ್ಕೆ ತಿಳಿಯದೇ ಇದ್ದುದಕ್ಕಾಗಿ ಯಾವುದೇ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಮೇಲೆ ಅತಿ ಕಡಿಮೆ ಫೀಜನ್ನು ಪಾವತಿಸಿರುವಲ್ಲಿ, ಅಂಥ ಪ್ರೋಬೇಟಿನ ಅಥವಾ ಅಧಿಕಾರಪತ್ರದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ನಿರ್ವಾಹಕನು ಅಥವಾ ಆಡಳಿತಗಾರನು, IIIನೇ ಅನುಸೂಚಿಯ IIನೇ ಭಾಗದಲ್ಲಿ ವಿವರಿಸಿರುವ ನಮೂನೆಯಲ್ಲಿ, ಡೆಪ್ಯುಟಿ ಕಮೀಷನರಿಗೆ ಅರ್ಜಿಯನ್ನು ಸಲ್ಲಿಸಿದ್ದರೆ ಮತ್ತು ಪ್ರಮಾದ ಅಥವಾ ಅದು ಮೃತನಿಗೆ ಸೇರಿದ್ದೆಂದು ಆ ಕಾಲಕ್ಕೆ ತಿಳಿದಿರದಿದ್ದ ಯಾವುದಾದರೂ ವಸ್ತುಗಳು ಕಂಡುಬಂದ ತರುವಾಯ, ಆರು ತಿಂಗಳೊಳಗಾಗಿ ಅಂಥ ಪ್ರೋಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಮೇಲೆ ಮೊದಲೇ ಸಂದಾಯಮಾಡಬೇಕಾಗಿದ್ದ ಯಾವುದಾದರೂ ಸ್ವತ್ತುಗಳು ಕಂಡುಬಂದ ತರುವಾಯ ಆರು ತಿಂಗಳೊಳಗಾಗಿ ಅಂಥ ಪ್ರೋಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಮೇಲೆ ಮೊದಲೇ ಸಂದಾಯಮಾಡಬೇಕಾಗಿದ್ದ ಫೀಜನ್ನು ಸಂದಾಯ ಮಾಡಿದ್ದರೆ, ಮೊದಲಲ್ಲಿ ಕಡಿಮೆ ಫೀಜನ್ನು ಪ್ರಮಾದದ ಪರಿಣಾಮವಾಗಿ ಸಂದಾಯಮಾಡಲಾಗಿತ್ತೆಂದು ಮತ್ತು ಯಾವುದೇ

ಮೋಸ ಅಥವಾ ಯುಕ್ತವಾದ ಫೀಜಿನ ಸಂದಾಯಕ್ಕೆ ವಿಳಂಬ ಮಾಡುವ ಯಾವ ಉದ್ದೇಶ ಇರಲಿಲ್ಲವೆಂದು, ಡೆಪ್ಯುಟಿ ಕಮೀಷನರಿಗೆ ಮನದಟ್ಟಾದರೆ, ಅವನು [1][ಕೊರತೆ ಫೀಜನ್ನು ವಸೂಲು ಮಾಡಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ: 01.04.2003 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಬರುವ ಪ್ರಕರಣಗಳಲ್ಲಿ ನಿರ್ವಾಹಕನು ಅಥವಾ ಆಡಳಿಗಾರನು, ಆ ಉಪಪ್ರಕರಣದಲ್ಲಿ ಹೇಳಿರುವಂತೆ ಆರು ತಿಂಗಳುಗಳೊಳಗಾಗಿ ಕೊರತೆ ಫೀಜನ್ನು ಪಾವತಿಸದಿದ್ದರೆ, ಕೊರತೆಯಾದ ಫೀಜಿನ ಐದರಷ್ಟಕ್ಕೆ ಸಮನಾದ ಮೊಬಲಗಿನ ಮುಟ್ಟುಗೋಲಿಗೆ ಅವನು ಗುರಿಯಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ಮೇಲೆ, ಪ್ರಮಾದವು ಅಥವಾ ಆರಂಭಿಕ ಮೌಲ್ಯ ನಿಗದಿಯಲ್ಲಿ ಸೇರಿಸಲಾಗಿರದ ಹೆಚ್ಚಿನ ಸ್ವತ್ತುಗಳು ಕಂಡುಬಂದ ಆರು ತಿಂಗಳೊಳಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ಅಥವಾ ಮೊದಲಲ್ಲಿ ಕಡಿಮೆ ಫೀಜು ಪಾವತಿಸಿದುದಕ್ಕೆ ಸದ್ಭಾವನೆಯಿಂದಾದ ಪ್ರಮಾದವಲ್ಲವೆಂದು ಡೆಪ್ಯುಟಿ ಕಮೀಷನರಿಗೆ ಮನದಟ್ಟಾಗದಿದ್ದರೆ, ಕೊರತೆ ಫೀಜನ್ನು, ಅಂಥ ಫೀಜಿನ ಐದರಷ್ಟಕ್ಕೆ ಮೀರದ ದಂಡಗಳೊಡನೆ [1][ಕೊರತೆ ಫೀಜನ್ನು ವಸೂಲು ಮಾಡಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(4) ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ನೀಡಿದ ತರುವಾಯ, ಎಸ್ಟೇಟಿನ ನಿಜವಾದ ಮೌಲ್ಯಕ್ಕೆ ಅನುಸಾರವಾಗಿ, ಸಂದಾಯ ಮಾಡಬೇಕಾಗಿದ್ದ ಫೀಜಿಗಿಂತ ಕಡಿಮೆ ಫೀಜು ಪಾವತಿಸಲಾಗಿದೆಯೆಂದು 56ನೇ ಅಥವಾ 57ನೇ ಪ್ರಕರಣದ ಮೇರೆಗಿನ ಅಥವಾ ಬೇರೆ ರೀತಿಯಲ್ಲಿ ವ್ಯವಹರಣೆಗಳ ಫಲವಾಗಿ ಡೆಪ್ಯುಟಿ ಕಮೀಷನರಿಗೆ ಕಂಡು ಬಂದರೆ, [1][ಕೊರತೆ ಫೀಜನ್ನು ವಸೂಲು ಮಾಡಿಸತಕ್ಕದ್ದು][1] ಮತ್ತು ಆರಂಭಿಕ ಕಡಿಮೆ ಮೌಲ್ಯ ನಿಗದಿಯು ಸದ್ಭಾವನೆಯಿಂದ ಆದುದಲ್ಲವೆಂದು ಅವನಿಗೆ ಮನದಟ್ಟಾದರೆ, ಕೊರತೆ ಫೀಜಿನ ಐದರಷ್ಟಕ್ಕೆ ಮೀರದ, ದಂಡವನ್ನು ಅದರ ಜೊತೆಗೆ ವಿಧಿಸತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(5) ಉಪಪ್ರಕರಣ (2)ರ ಮೇರೆಗೆ ಮುಟ್ಟುಗೋಲಾದ ಮೊಬಲಗನ್ನು ಅಥವಾ ಉಪಪ್ರಕರಣ (3)ರ ಅಥವಾ ಉಪಪ್ರಕರಣ (4)ರ ಮೇರೆಗೆ ಯಾವುದಾದರೂ ದಂಡವನ್ನು ಪೂರ್ತಿಯಾಗಿ ಅಥವಾ ಮೊಬಲಗಿನ ಯಾವುದೇ ಭಾಗವನ್ನು ಮುಖ್ಯ ನಿಯಂತ್ರಣ ರಾಜಸ್ವ ಪ್ರಾಧಿಕಾರಿಯು ಮಾಫಿ ಮಾಡಬಹುದು.

**59. [1][XXX][1] ಆಡಳಿತಗಾರನು ಯುಕ್ತ ಭದ್ರತೆ ಕೊಡುವುದು.-** ಮೊದಲಲ್ಲಿ ಅತಿ ಕಡಿಮೆ ಫೀಜು ಪಾವತಿಸಲಾಗಿದ್ದ ಆಡಳಿತ ಅಧಿಕಾರದ ಪತ್ರಗಳ ಸಂದರ್ಭದಲ್ಲಿ, ಮೃತನ ಎಸ್ಟೇಟಿನ ಪೂರ್ತಿ ಮೌಲ್ಯವನ್ನು ಖಚಿತಪಡಿಸಿಕೊಂಡಿದ್ದಲ್ಲಿ, ಅವುಗಳನ್ನು ನೀಡಿದ ಮೇಲೆ ಕಾನೂನಿನ ಮೇರೆಗೆ ಕೊಡಲೇಬೇಕಾಗುತ್ತಿದ್ದ ಭದ್ರತೆಯನ್ನು ಆ ಆಡಳಿತ ಅಧಿಕಾರ ಪತ್ರಗಳನ್ನು ನೀಡಿಕೆ ನ್ಯಾಯಾಲಯಕ್ಕೆ ಕೊಡುವವರೆಗೆ ಡೆಪ್ಯುಟಿ ಕಮೀಷರನು, ಮೇಲೆ

ಹೇಳಿರುವ ರೀತಿಯಲ್ಲಿ ಆ ಪತ್ರಗಳಿಗೆ ಯುಕ್ತವಾಗಿ ಸ್ಟಾಂಪು ಹಾಕಿರುವಂತೆ ಮಾಡಿಸಿರದಿದ್ದರೆ [2][ನ್ಯಾಯಾಲಯಕ್ಕೆ ಅಂಥ ಭದ್ರತೆಯನ್ನು ನೀಡುವುದಕ್ಕೆ ಆಡಳಿತಗಾರನನ್ನು ಅಗತ್ಯಪಡಿಸತಕ್ಕದ್ದು.][2]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**60. ಅತಿ ಹೆಚ್ಚು ಫೀಜನ್ನು ಸಲ್ಲಿಸಿದಾಗ ಪರಿಹಾರ.-** (1) ಎಸ್ಟೇಟಿನ ನಿಜವಾದ ಮೌಲ್ಯದ ಮೇಲೆ ಸಂದಾಯ ಮಾಡಬೇಕಾದುದಕ್ಕಿಂತ ಹೆಚ್ಚು ಫೀಜನ್ನು ಪಾವತಿಸಲಾಗಿದೆಯೆಂದು, ಪ್ರೊಬೇಟನ್ನು ಅಥವಾ ಆಡಳಿತ ಅಧಿಕಾರ ಪತ್ರಗಳನ್ನು ನೀಡಿದ ತರುವಾಯ ಯಾವುದೇ ಕಾಲಕ್ಕೆ ಕಂಡುಬಂದಲ್ಲಿ, ಅದರ ಮರುಪಾವತಿಗಾಗಿ ಸಂದರ್ಭಾನುಸಾರ ನಿರ್ವಾಹಕನು ಅಥವಾ ಆಡಳಿತಗಾರನು, 52ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಎಸ್ಟೇಟಿನ ಮೌಲ್ಯ ನಿಗದಿಯ ಪ್ರತಿಯನ್ನು ಯಾವ ಡೆಪ್ಯುಟಿ ಕಮೀಷನರರಿಗೆ ಕಳುಹಿಸಲಾಗಿತ್ತೋ ಆ ಡೆಪ್ಯುಟಿ ಕಮೀಷನರನಿಗೆ, ಅರ್ಜಿಯನ್ನು ಸಲ್ಲಿಸಬಹುದು. IIIನೇ ಅನುಸೂಚಿಯ IIನೇ ಭಾಗದಲ್ಲಿ ವಿವರಿಸಿದ ನಮೂನೆಯಲ್ಲಿರುವ ತಿದ್ದುಪಡಿಯಾದ ಮೌಲ್ಯ ನಿಗದಿಯು, ಮರು ಪಾವತಿಯನ್ನು ಕೋರಿರುವುದಕ್ಕೆ ಸಂಬಂಧಿಸಿದ ಪ್ರೊಬೇಟು ಅಥವಾ ಆಡಳಿತ ಅಧಿಕಾರ ಪತ್ರಗಳು ಅರ್ಜಿಯ ಜೊತೆಗೆ ಇರತಕ್ಕದ್ದು.

(2) [1][ತಿದ್ದುಪಡಿಯಾದ ಮೌಲ್ಯವು, ಯುಕ್ತವಾಗಿದೆಯೆಂದು ಡೆಪ್ಯುಟಿ ಕಮೀಷನರನಿಗೆ ಮನದಟ್ಟಾದರೆ, ಅವನು ಮೂಲದಲ್ಲಿ ಸಂದಾಯಮಾಡಿದ ಫೀಜು ಹಾಗೂ ಸಂದಾಯ ಮಾಡಬೇಕಾದ ಫೀಜಿನ ನಡುವಿನ ವ್ಯತ್ಯಾಸವನ್ನು ಆತನು ಮರುಪಾವತಿಮಾಡತಕ್ಕದ್ದು][1]: ಮತ್ತು ಪ್ರೊಬೇಟ್ ಅಥವಾ ಆಡಳಿತ ಅಧಿಕಾರ ಪತ್ರಗಳ ಮೇಲೆ ತದನುಸಾರ ಹಿಂಬರಹ ಬರೆದು ಪ್ರಮಾಣಪತ್ರ ನೀಡತಕ್ಕದ್ದು:

ಪರಂತು, ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರವನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳೊಳಗಾಗಿ ಅಥವಾ ಡೆಪ್ಯುಟಿ ಕಮೀಷರನು ಅವಕಾಶ ಕೊಡಬಹುದಾದ ಇನ್ನೂ ಹೆಚ್ಚಿನ ಅವಧಿಗಳೊಳಗಾಗಿ, ಮರುಪಾವತಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಿದ್ದ ಹೊರತು ಈ ಪ್ರಕರಣದ ಮೇರೆಗೆ ಯಾವುದೇ ಮರುಪಾವತಿಯನ್ನು ಮಂಜೂರು ಮಾಡತಕ್ಕದ್ದಲ್ಲ.

ಯಾವುದೇ ಕಾನೂನುಬದ್ದ ವ್ಯವಹರಣೆಗಳ ನಿಮಿತ್ತವಾಗಿ, ಮೃತನಿಂದ ಬರಬೇಕಾದ ಋಣಗಳನ್ನು ಖಚಿತಪಡಿಸಿಕೊಂಡಿರದಿದ್ದರೆ ಮತ್ತು ಪಾವತಿಸಿರದಿದ್ದರೆ ಅಥವಾ ಅವನ ವಸ್ತುಗಳನ್ನು ವಸೂಲು ಮಾಡಿಕೊಂಡಿರದಿದ್ದರೆ ಮತ್ತು ಒದಗಿಸಿ ಕೊಟ್ಟಿರದಿದ್ದರೆ ಮತ್ತು ಅದರ ಪರಿಣಾಮವಾಗಿ ಅಂಥ ವ್ಯತ್ಯಾಸವನ್ನು ವಾಪಸಾತಿಯ ಬಗ್ಗೆ ಸದರಿ ಮೂರು ವರ್ಷಗಳ ಅವಧಿಯೊಳಗಾಗಿ ಕ್ಲೇಮು ಮಾಡಲು ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು ಪ್ರತಿಬಂಧಿತವಾಗಿದ್ದರೆ, ಅದನ್ನು ಕ್ಲೇಮು ಮಾಡುವುದಕ್ಕೆ ಸಂಬಂಧಿಸಿದಂತೆ ಡೆಪ್ಯುಟಿ

ಕಮೀಷನರ್ ಅವರು ಸಂದರ್ಭಗಳಿಗನುಸಾರ ನ್ಯಾಯವಾದುವೆಂದು ತನಗೆ ಕಂಡುಬರುವಷ್ಟು ಹೆಚ್ಚಿನ ಕಾಲಾವಕಾಶವನ್ನು ಕೊಡಬಹುದು.

ಡೆಪ್ಯುಟಿ ಕಮೀಷನರ್ ಅವರು ಮರುಪಾವತಿಯನ್ನು ಮಂಜೂರು ಮಾಡದಿದ್ದರೆ, ಸಂದರ್ಭಾನುಸಾರ ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು, ಮರುಪಾವತಿಗೆ ಸಂಬಂಧಿಸಿದಂತೆ ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು. ಇಂಥ ಮರು ಪಾವತಿಗೆ ಸಂಬಂಧಿಸಿದ ಅರ್ಜಿಯ ಜೊತೆಗೆ IIIನೇ ಅನುಸೂಚಿಯ IIನೇ ಭಾಗದಲ್ಲಿ ವಿವರಿಸಿರುವ ನಮೂನೆಯಲ್ಲಿ, ತಿದ್ದುಪಡಿ ಮಾಡಲಾಗಿರುವ ಮೌಲ್ಯ ನಿಗದಿಯು ಇರತಕ್ಕದ್ದು.

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**61. ದಂಡಗಳು, ಇತ್ಯಾದಿಗಳ ವಸೂಲಾತಿ.-** ಕಾರ್ಯನಿರ್ವಾಹಕನಿಂದ ಅಥವಾ ಆಡಳಿತಗಾರನಿಂದ ಅಥವಾ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಸಲುವಾಗಿ ಅರ್ಜಿದಾರನಿಂದ ಸಂದಾಯಮಾಡಬೇಕಾಗಿದೆಯೆಂದು ಕಂಡುಬಂದ ಯಾವುದೇ ಹೆಚ್ಚಿನ ಫೀಜನ್ನು ಅಥವಾ 57ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಯಾವುದೇ ಖರ್ಚುಗಳನ್ನು ಅಥವಾ ಅಂಥ ಕಾರ್ಯನಿರ್ವಾಹಕನು ಅಥವಾ ಆಡಳಿತಗಾರನು ಸಂದಾಯ ಮಾಡಿರುವ ಯಾವುದಾದರೂ ದಂಡವನ್ನು ಅಥವಾ ಮುಟ್ಟುಗೋಲನ್ನು, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ಪ್ರಮಾಣಪತ್ರದ ಮೇಲೆ, ಅದು ಭೂಕಂದಾಯ ಬಾಕಿಯಾಗಿದ್ದರೆ ಹೇಗೆ ವಸೂಲ್ಮಾಡಬಹುದೋ ಹಾಗೆ ಕಾರ್ಯನಿರ್ವಾಹಕನಿಂದ ಅಥವಾ ಆಡಳಿತಗಾರನಿಂದ ವಸೂಲು ಮಾಡಬಹುದು.

**62. ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ಅಧಿಕಾರಗಳು.-** ಈ ಅಧ್ಯಾಯದ ಮೇರೆಗೆ ಡೆಪ್ಯುಟಿ ಕಮೀಷನರ್ ಅವರ ಅಧಿಕಾರಗಳು ಮತ್ತು ಕರ್ತವ್ಯಗಳು, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಯ ನಿಯಂತ್ರಣಕ್ಕೊಳಪಟ್ಟಿರತಕ್ಕದ್ದು.

## ಅಧ್ಯಾಯ VII

## ಮರುಪಾವತಿಗಳು ಮತ್ತು ಮಾಫಿಗಳು

**63. ವಾದಪತ್ರ, ಇತ್ಯಾದಿಗಳನ್ನು ಹಾಜರುಪಡಿಸುವುದರಲ್ಲಾದ ವಿಳಂಬದ ಸಂದರ್ಭದಲ್ಲಿ ಮರುಪಾವತಿ.-** (1) [1][ಪುನಃ ಹಾಜರುಪಡಿಸುವುದರಲ್ಲಿ ಆದ][1] ವಿಳಂಬದ ಕಾರಣಕ್ಕಾಗಿ, ವಾದಪತ್ರವನ್ನು ಅಥವಾ ಅಪೀಲು ವಿವರಣಪತ್ರವನ್ನು ತಿರಸ್ಕರಿಸಿದ್ದಲ್ಲಿ ಅಥವಾ ವಾದಪತ್ರದ ಅಥವಾ ಅಪೀಲು ವಿವರಣಪತ್ರದ ಮೇಲೆ ಪಾವತಿಸಲಾದ ಫೀಜು ಕೊರತೆ ಇದ್ದು ಕಾನೂನಿನ ಮೂಲಕ ಅವಕಾಶ ಕಲ್ಪಿಸಿಕೊಡಲಾದ ಅಥವಾ ನ್ಯಾಯಾಲಯದಿಂದ ಮಂಜೂರಾದ ಅವಧಿಯೊಳಗಾಗಿ, ಆ ಕೊರತೆಯನ್ನು ಭರಿಸದಿರುವಲ್ಲಿ ಅಥವಾ ಕೊರತೆ ಫೀಜಿನ ಸಂದಾಯದಲ್ಲಾದ ವಿಳಂಬವನ್ನು ಮನ್ನಿಸದಿರುವ ಪರಿಣಾಮವಾಗಿ, ವಾದಪತ್ರವನ್ನು ಅಥವಾ ಅಪೀಲು ವಿವರಣಪತ್ರವನ್ನು

ತಿರಸ್ಕರಿಸಲಾಗಿರುವಲ್ಲಿ, ತಿರಸ್ಕರಿಸಲಾದ ವಾದಪತ್ರದ ಅಥವಾ ಅಪೀಲು ವಿವರಣಪತ್ರದ ಮೇಲೆ ಸಲ್ಲಿಸಲಾದ ಫೀಜನ್ನು ವಾದಿಗೆ ಮರುಪಾವತಿ ಮಾಡಲು ನ್ಯಾಯಾಲಯವು ನಿರ್ದೇಶಿಸತಕ್ಕದ್ದು.

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 05.03.1964ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

(2) ಕಾಲಪರಿಮಿತಿ ಕಾನೂನಿನ ಮೂಲಕ ಅವಕಾಶ ಕಲ್ಪಿಸಿಕೊಡಲಾದ ಅವಧಿಯೊಳಗಾಗಿ ಅಪೀಲು ವಿವರಣಪತ್ರವನ್ನು ಹಾಜರು ಮಾಡಿಲ್ಲವೆಂಬ ಕಾರಣಕ್ಕಾಗಿ ಅದನ್ನು ತಿರಸ್ಕರಿಸಿದ್ದಲ್ಲಿ ಫೀಜಿನ ಅರ್ಧದಷ್ಟನ್ನು ಮರುಪಾವತಿ ಮಾಡತಕ್ಕದ್ದು.

**64. ಹಿಂದಕ್ಕೆ ಕಳುಹಿಸುವ ಸಂದರ್ಭಗಳಲ್ಲಿ ಮರುಪಾವತಿ.-** (1) ಅಧೀನ ನ್ಯಾಯಾಲಯದಿಂದ ತಿರಸ್ಕರಿಸಲಾದ ವಾದಪತ್ರವನ್ನು ಅಥವಾ ಅಪೀಲು ವಿವರಣಪತ್ರವನ್ನು ಸ್ವೀಕರಿಸಲು ಆದೇಶ ಮಾಡಲಾಗಿರುವಲ್ಲಿ ಅಥವಾ ಅಪೀಲಿನಲ್ಲಿ ಅಧೀನ ನ್ಯಾಯಾಲಯದ ಹೊಸ ತೀರ್ಮಾನಕ್ಕೆ ಸಂಬಂಧಿಸಿದಂತೆ ದಾವೆಯನ್ನು ಹಿಂದಕ್ಕೆ ಕಳುಹಿಸಲಾಗಿರುವಲ್ಲಿ, ಆ ಆದೇಶವನ್ನು ಮಾಡುವ ಅಥವಾ ಅಪೀಲನ್ನು ಹಿಂದಕ್ಕೆ ಕಳುಹಿಸುವ ನ್ಯಾಯಾಲಯವು, ಇಡೀ ಡಿಕ್ರಿಯನ್ನು ವಿಪರ್ಯಯಗೊಳಿಸಿರುವ ಸಂದರ್ಭದಲ್ಲಿ ಮತ್ತು ದಾವೆಯನ್ನು ಹಿಂದಕ್ಕೆ ಕಳುಹಿಸಿರುವಲ್ಲಿ ಮತ್ತು ಇತರ ಪ್ರಕರಣಗಳಲ್ಲಿ ಅಪೀಲು ವಿವರಣಪತ್ರದ ಮೇಲೆ ಮತ್ತು ಹಿಂದಿರುಗಿಸುವಿಕೆಯು, ಎರಡನೆಯ ಅಪೀಲಿನಲ್ಲಿ ಆಗಿದ್ದರೆ ಮೊದಲ ಅಪೀಲು ನ್ಯಾಯಾಲಯದಲ್ಲಿ ಅಪೀಲು ವಿವರಣಪತ್ರದ ಮೇಲೆ ಕೂಡ ಪಾವತಿಸಲಾದ ಫೀಜಿನ ಪೂರ್ತಿ ಮೊಬಲಗನ್ನು ಅಪೀಲುದಾರನಿಗೆ ಮರುಪಾವತಿ ಮಾಡಬೇಕೆಂದು ನಿರ್ದೇಶಿಸತಕ್ಕದ್ದು.

(2) ಅಧೀನ ಅಪೀಲು ನ್ಯಾಯಾಲಯದಿಂದ ಹೊಸ ತೀರ್ಮಾನಕ್ಕಾಗಿ, ಅಂಥ ಅಪೀಲನ್ನು ಎರಡನೇ ಅಪೀಲಿನಲ್ಲಿ ಹಿಂದಕ್ಕೆ ಕಳುಹಿಸಲಾದಲ್ಲಿ, ಎರಡನೇ ಅಪೀಲು ವಿವರಣಪತ್ರದ ಮೇಲೆ ಸಂದಾಯ ಮಾಡಿದ ಫೀಜಿನ ಪೂರ್ತಿ ಮೊಬಲಗನ್ನು ಅಪೀಲುದಾರನಿಗೆ ಮರುಪಾವತಿ ಮಾಡಬೇಕೆಂದು, ಅಪೀಲನ್ನು ಹಿಂದಕ್ಕೆ ಕಳುಹಿಸಿರುವ ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದು:

ಪರಂತು, ಅನ್ಯಥಾ ಪಕ್ಷಕಾರನು ಮರುಪಾವತಿಗೆ ಹಕ್ಕುಳ್ಳವನಾಗಿದ್ದು, ಅವನ ತಪ್ಪಿನಿಂದಾಗಿ ಅಪೀಲನ್ನು ಹಿಂದಕ್ಕೆ ಕಳುಹಿಸಲಾಗಿದ್ದರೆ, ಯಾವ ಮರುಪಾವತಿಗೂ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಹಿಂದಕ್ಕೆ ಕಳುಹಿಸುವಿಕೆಯ ಆದೇಶವು, ದಾವೆಯ ಇಡೀ ವಸ್ತು ವಿಷಯವನ್ನು ಒಳಗೊಂಡಿರದಿದ್ದರೆ, ದಾವೆಯ ಹಿಂದಕ್ಕೆ ಕಳುಹಿಸುವಿಕೆಗೆ ಸಂಬಂಧಿಸಿದ ವಸ್ತು ವಿಷಯದಲ್ಲಿರುವ ಭಾಗ ಮಾತ್ರದ ಮೇಲೆ ಮೂಲತಃ ಸಂದಾಯವಾಗಬೇಕಾಗುತ್ತಿದ್ದುದಕ್ಕಿಂತ ಹೆಚ್ಚಿನ ಫೀಜಿಗೆ ಮರುಪಾವತಿಯು ಅನ್ವಯಿಸತಕ್ಕದ್ದಲ್ಲ.

**65. ಪ್ರಮಾದದ ಕಾರಣದ ಮೇಲೆ ಮುಂಚಿನ ತೀರ್ಮಾನವನ್ನು ನ್ಯಾಯಾಲಯವು ವಿಪರ್ಯಯಗೊಳಿಸಿದಲ್ಲಿ ಅಥವಾ ಮಾರ್ಪಾಡಿಸಿದಲ್ಲಿ ಮರುಪಾವತಿ.-** ದಾಖಲೆಯ ಮೇಲಿಂದಲೇ ಕಂಡುಬರುವ ಯಾವುದೇ ಪ್ರಮಾದದ ಅಥವಾ ತಪ್ಪಿನ ಕಾರಣದ ಮೇಲೆ ತೀರ್ಮಾನದ ಪುನರವಲೋಕನಕ್ಕೆ ಸಂಬಂಧಿಸಿದ

ಅರ್ಜಿಯನ್ನು ಸ್ವೀಕರಿಸಲಾಗಿರುವಲ್ಲಿ ಮತ್ತು ಮರುಸುನಾವಣೆಯಲ್ಲಿ ನ್ಯಾಯಾಲಯವು ತನ್ನ ಮುಂಚಿನ ತೀರ್ಮಾನವನ್ನು, ಆ ಕಾರಣದ ಮೇಲೆ ವಿಪರ್ಯಯಗೊಳಿಸಿದಲ್ಲಿ ಅಥವಾ ಮಾರ್ಪಡಿಸಿದಲ್ಲಿ, ಅರ್ಜಿಯ ಬಗ್ಗೆ ಸಲ್ಲಿಸಿದ ಫೀಜು IIನೇ ಅನುಸೂಚಿಯ 11 (ಜಿ) ಮತ್ತು (ಟಿ) ಅನುಚ್ಛೇದದ ಮೇರೆಗೆ ಬೇರೆ ಯಾವುದೇ ಅರ್ಜಿಯ ಮೇಲೆ ಆ ನ್ಯಾಯಾಲಯಕ್ಕೆ ಸಂದಾಯಮಾಡುವ ಫೀಜಿಗಿಂತ ಹೆಚ್ಚಾಗಿರುವಷ್ಟನ್ನು ಅರ್ಜಿದಾರನಿಗೆ ಮರುಪಾವತಿ ಮಾಡಲು ಅದು ನಿರ್ದೇಶಿಸತಕ್ಕದ್ದು.

[1][**66. ಸುನಾವಣೆಗೆ ಮುಂಚಿನ ಇತ್ಯರ್ಥದ ಮೇಲೆ ಮರುಪಾವತಿ.-** (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 89ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವಿವಾದ ಇತ್ಯರ್ಥದ ಯಾವುದೇ ಒಂದು ವಿಧಾನವನ್ನು ದಾವೆಯ ಪಕ್ಷಕಾರರಿಗೆ ನ್ಯಾಯಾಲಯವು ಉಲ್ಲೇಖಿಸಿದ್ದು ಹಾಗೂ ವಿವಾದವು ಇತ್ಯರ್ಥವಾದಲ್ಲಿ, ದಾವೆಗಳಲ್ಲಿ ಮಾಡಿದ ಕ್ಲೇಮು ಅಥವಾ ಕ್ಲೇಮುಗಳ ಸಂಬಂಧದಲ್ಲಿ ಸಂದಾಯ ಮಾಡಿದ ಎಲ್ಲಾ ನ್ಯಾಯಾಲಯ ಫೀಜುಗಳ [2][ಶೇಕಡಾ ನೂರರಷ್ಟು][2] ಮೊಬಲಗನ್ನು, ಅದನ್ನು ಸಂದಾಯ ಮಾಡಿದ ಪಕ್ಷಕಾರರಿಗೆ ಅನುಕ್ರಮವಾಗಿ ಮರುಪಾವತಿ ಮಾಡಬೇಕೆಂದು ನ್ಯಾಯಾಲಯವು ಆದೇಶಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಳ್ಳದ ಪ್ರಕರಣಗಳಲ್ಲಿ, ಪಕ್ಷಕಾರರ ಒಪ್ಪಂದದ ಮೂಲಕ,-

(ಎ) ಕ್ಲೇಮಿನ ಗುಣದೋಷಗಳ ಮೇಲೆ ಯಾವುದೇ ಸಾಕ್ಷ್ಯವನ್ನು, ದಾಖಲೆ ಮಾಡುವುದಕ್ಕೆ ಮುಂಚೆ ನ್ಯಾಯಾಲಯದ ಹೊರಗೆ ಇತ್ಯರ್ಥವಾಗಿರುವುದಾಗಿ ಯಾವುದೇ ದಾವೆಯನ್ನು ವಜಾ ಮಾಡಲಾಗಿರುವಾಗ; ಅಥವಾ

(ಬಿ) ಕ್ಲೇಮಿನ ಗುಣದೋಷಗಳ ಮೇಲೆ ಯಾವುದೇ ಸಾಕ್ಷ್ಯವನ್ನು ದಾಖಲೆ ಮಾಡುವುದಕ್ಕೆ ಮುಂಚೆ ಯಾವುದೇ ದಾವೆಯನ್ನು ರಾಜಿ ಮಾಡಿಕೊಂಡು, ರಾಜಿ-ಡಿಕ್ರಿಯಾಗಿ ಮುಕ್ತಾಯವಾಗಿರುವಾಗ; ಅಥವಾ

(ಸಿ) ಅಂಥ ಅಪೀಲಿನ ಸುನಾವಣೆ ಆರಂಭವಾಗುವ ಮುಂಚೆ ಅಂಥ ಅಪೀಲು ಇತ್ಯರ್ಥ ವಾಗಿರುವಾಗ

- ದಾವೆಯಲ್ಲಿ ಅಥವಾ ಅಪೀಲಿನಲ್ಲಿ ಮಾಡಿದ ಕ್ಲೇಮಿನ ಅಥವಾ ಕ್ಲೇಮುಗಳ ಮೇಲೆ ಪಾವತಿಸಿದ ಎಲ್ಲಾ ಫೀಜುಗಳ [2][ಶೇಕಡಾ ನೂರರಷ್ಟು][2] ಮೊಬಲಗನ್ನು ಪಾವತಿಸಿದ್ದ ಆಯಾ ಪಕ್ಷಕಾರರಿಗೆ ಮರುಪಾವತಿ ಮಾಡಬೇಕೆಂದು ನ್ಯಾಯಾಲಯವು ಆದೇಶವನ್ನು ಮಾಡತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 09ರ ಮೂಲಕ ದಿನಾಂಕ 21.01.2015 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 31.07.2020ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**67. ಪ್ರಮಾದದಿಂದ ಅಥವಾ ಅಜಾಗರೂಕತೆಯಿಂದ ಸಂದಾಯ ಮಾಡಿದ ಫೀಜಿನ ಮರುಪಾವತಿ.-** ಪ್ರಮಾದದಿಂದ ಅಥವಾ ಅಜಾಗರೂಕತೆಯಿಂದ ಸಂದಾಯ ಮಾಡಿದ ಫೀಜನ್ನು ಮರುಪಾವತಿ ಮಾಡಲು ಆದೇಶ ಮಾಡತಕ್ಕದ್ದು.

**68. ವಿಭಜನಾ ಪತ್ರಗಳು.-** ವಿಭಜನೆಯ ದಾವೆಯಲ್ಲಿ ಪಕ್ಷಕಾರರು ಒದಗಿಸಿದ ನ್ಯಾಯಿಕೇತರ ಸ್ಟಾಂಪಿನ ಮೇಲೆ ಅಂತಿಮ ಡಿಕ್ರಿಯನ್ನು ದಪ್ಪ ಅಕ್ಷರಗಳಲ್ಲಿ ಬರೆಯಲಾಗಿದ್ದಲ್ಲಿ, ಮೌಲ್ಯದ ಮೇಲೆ ಪಕ್ಷಕಾರರು ಪಾವತಿಸಿದ್ದ ಫೀಜನ್ನು, ಅವರು ಒದಗಿಸಿದ ನ್ಯಾಯಿಕೇತರ ಸ್ಟಾಂಪುಗಳ ಮೌಲ್ಯಕ್ಕೆ ಸಮನಾಗಿರುವಷ್ಟರ ಮಟ್ಟಿಗೆ ಅವರಿಗೆ ನ್ಯಾಯಾಲಯವು ಮರುಪಾವತಿ ಮಾಡತಕ್ಕದ್ದು.

[1][**68ಎ. ಎಲ್ಲಾ ಮರುಪಾವತಿಗಳು ಹಾಗೂ ಮಾಫಿಗಳನ್ನು ಇ-ಪಾವತಿಗಳ ಮೂಲಕವೇ ಮಾಡತಕ್ಕದ್ದು.-** ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ಮರುಪಾವತಿಗಳು ಹಾಗೂ ಮಾಫಿಗಳನ್ನು ಇ-ಪಾವತಿಯ ಮೂಲಕವೇ ಮಾಡತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ: 31.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**69. ಕೆಲವು ದಸ್ತಾವೇಜುಗಳಿಗೆ ವಿನಾಯಿತಿ.-** ಈ ಅಧಿನಿಯಮದಲ್ಲಿರುವುದಾವುದೂ ಈ ಮುಂದೆ ಹೇಳಿರುವ ಯಾವುವೇ ದಸ್ತಾವೇಜುಗಳು, ಯಾವುದೇ ಫೀಜಿಗೆ ಗುರಿಯಾಗತಕ್ಕದ್ದಲ್ಲ;

(i) ಸಿವಿಲ್ ನಿಯೋಜನೆಯಲ್ಲಿಲ್ಲದ MPÆ l z ಯಾವುದೇ ಸಶಸ್ತ್ರ ಬಲದ ಸದಸ್ಯನು ದಾವೆ ಹೂಡಲು ಅಥವಾ ಪ್ರತಿವಾದಿಸಲು ಬರೆದುಕೊಡುವ ಮುಖ್ತ್ಯಾರನಾಮೆ, ವಕಾಲತ್ ನಾಮೆ ಅಥವಾ ಲಿಖಿತ ಅಧಿಕಾರ ಪತ್ರ;

(ii) ಕ್ರಿಮಿನಲ್ ಮೊಕದ್ದಮೆಗಳಲ್ಲಿ, ಕ್ರಮ ಕೈಗೊಳ್ಳಲಾಗುತ್ತಿರುವ ವ್ಯಕ್ತಿಗಳ ಪರವಾಗಿ ಹಾಜರಾಗುವಾಗ, ವಕೀಲರು ಅಥವಾ ನ್ಯಾಯವಾದಿಗಳು ದಾಖಲುಮಾಡಿದ ಹಾಜರಾತಿಯ ವಿವರಣಪತ್ರ;

(iii) ಗ್ರಾಮ ನ್ಯಾಯಾಲಯದಲ್ಲಿ ದಾಖಲು ಮಾಡಿದ ದಾವೆಗಳಲ್ಲಿನ ವಾದಪತ್ರಗಳು ಮತ್ತು ಇತರ ದಸ್ತಾವೇಜುಗಳು;

(iv) ಡೆಪ್ಯುಟಿ ಕಮೀಷನರವರಿಗೆ ಅಥವಾ ಭೂಕಂದಾಯ ವ್ಯವಸ್ಥೆ ಮಾಡುವ ಇತರ ಅಧಿಕಾರಿಗೆ ಅಥವಾ ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾದ ಅರ್ಜಿ ಅಥವಾ ಮನವಿ ಪತ್ರ, ಅಂಥ ವ್ಯವಸ್ಥೆಯ ಅಂತಿಮ ಸ್ಥಿರೀಕರಣದ ಮುಂಚೆ ಅದನ್ನು ಸಲ್ಲಿಸಲಾಗಿದ್ದರೆ, ಭೂಮಿಯ ಕಂದಾಯ ವ್ಯವಸ್ಥೆಗೆ ಅಥವಾ ಅದರ ಹಕ್ಕುಗಳನ್ನು ಅಥವಾ ಅದರಲ್ಲಿನ ಹಿತಾಸಕ್ತಿಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದ ಅರ್ಜಿ ಅಥವಾ ಮನವಿ ಪತ್ರ;

(v) ಸರ್ಕಾರಕ್ಕೆ ಸೇರಿದ ನೀರನ್ನು ನೀರಾವರಿಗಾಗಿ ಪೂರೈಕೆ ಮಾಡುವ ಸಂಬಂಧದ ಅರ್ಜಿ;

(vi) ಕಂದಾಯವನ್ನು ಇತ್ಯರ್ಥಪಡಿಸಲಾಗಿರುವ ಆದರೆ ಅದು ಖಾಯಂ ಆಗಿಲ್ಲದ ಭೂಮಿಯನ್ನು, ಸರ್ಕಾರದೊಡನೆ ನೇರ ವಚನಬಂಧದ ಮೂಲಕ ಧಾರಣ ಮಾಡಿರುವ ವ್ಯಕ್ತಿಯು, ಸಾಗುವಳಿಯನ್ನು ಮುಂದುವರಿಸುವ ಅಥವಾ ಭೂಮಿಯನ್ನು ಬಿಟ್ಟುಕೊಡುವ ಅನುಮತಿಗಾಗಿ ರೆವಿನ್ಯೂ ಅಧಿಕಾರಿಗೆ ಸಲ್ಲಿಸುವ ಅರ್ಜಿ;

(vii) ಭೂಮಿ ಬಿಟ್ಟುಕೊಡುವಿಕೆಯ ಅಥವಾ ಗೇಣಿಯನ್ನು ಹೆಚ್ಚಿಸುವ ನೋಟೀಸನ್ನು ಜಾರಿ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿ;

(viii) ವಶಪಡಿಸಿಕೊಳ್ಳುವುದಕ್ಕಾಗಿ ಏಜೆಂಟ್‌ನಿಗೆ ಲಿಖಿತ ಅಧಿಕಾರ ಪತ್ರ;

(ix) ಹಾಜರಾಗಿ ಸಾಕ್ಷ್ಯ ಕೊಡಲು, ದಸ್ತಾವೇಜು ಹಾಜರುಪಡಿಸಲು, ಸಾಕ್ಷಿದಾರನಿಗೆ ಅಥವಾ ಇತರ ವ್ಯಕ್ತಿಗೆ ಸಮನು ಮಾಡುವುದಕ್ಕೆ ಸಂಬಂಧಿಸಿದಂತೆ ಅಥವಾ ನ್ಯಾಯಾಲಯದಲ್ಲಿ ಕೂಡಲೇ ಹಾಜರುಪಡಿಸುವುದಕ್ಕಾಗಿ ಸಿದ್ಧಪಡಿಸಿದ ಪ್ರಮಾಣಪತ್ರ ಆಗಿರದ ಪ್ರದರ್ಶಿತ ವಸ್ತುವನ್ನು ಹಾಜರುಪಡಿಸುವುದಕ್ಕೆ ಅಥವಾ ದಾಖಲು ಮಾಡುವುದಕ್ಕೆ ಸಂಬಂಧಿಸಿದ (ಮಾಹಿತಿಯ ಕ್ರಿಮಿನಲ್ ಆರೋಪವನ್ನು ಒಳಗೊಂಡಿರದ ಮನವಿ ಪತ್ರವಾಗಿದ್ದ ಹೊರತು) ಮೊದಲ ಅರ್ಜಿ;

(x) ಕ್ರಿಮಿನಲ್ ಮೊಕದ್ದಮೆಗಳಲ್ಲಿನ ಜಾಮೀನು ಪತ್ರಗಳು ಪ್ರಾಸಿಕ್ಯೂಟ್ ಮಾಡಲು ಅಥವಾ ಸಾಕ್ಷ್ಯ ಕೊಡಲು, ಮುಚ್ಚಳಿಕೆ ಮತ್ತು ವೈಯಕ್ತಿಕ ಹಾಜರಾತಿಗೆ ಸಂಬಂಧಿಸಿದ ಅಥವಾ ಇತರ ಬಗೆಯ ಮುಚ್ಚಳಿಕೆ;

(xi) ಪೋಲೀಸ್ ಅಧಿಕಾರಿಗೆ ಅಥವಾ ಆತನ ಮುಂದೆ ಅಥವಾ ಗ್ರಾಮಗಳ ಪ್ರಮುಖರಿಗೆ ಅಥವಾ ಗ್ರಾಮ ಪೋಲೀಸರಿಗೆ ಅವರ ಮುಂದೆ, ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿದ, ಸಲ್ಲಿಸಿದ ಅಥವಾ ಮಂಡಿಸಲಾದ ಮನವಿ, ಅರ್ಜಿ, ಆರೋಪ ಅಥವಾ ಮಾಹಿತಿ;

(xii) ಬಂಧನದಲ್ಲಿ ಕೈದಿಯ ಅಥವಾ ಯಾವುದೇ ನ್ಯಾಯಾಲಯದ ಅಥವಾ ಅದರ ಅಧಿಕಾರಿಯ, ನಿರ್ಬಂಧದಲ್ಲಿನ ಇತರ ವ್ಯಕ್ತಿಯ ಮನವಿ;

(xiii) ಭಾರತ ದಂಡ ಸಂಹಿತೆ (1860ರ ಕೇಂದ್ರ ಅಧಿನಿಯಮ XLV) ಯಲ್ಲಿ ಪರಿಭಾಷಿಸಿರುವಂತೆ ಸರ್ಕಾರಿ ನೌಕರನ ಅಥವಾ ರಾಜ್ಯ ರೈಲ್ವೆ ಅಧಿಕಾರಿಯ ಫಿರ್ಯಾದು;

(xiv) ಸರ್ಕಾರಿ ಅರಣ್ಯಗಳಲ್ಲಿರುವ ಮರಮುಟ್ಟನ್ನು ಕಡಿಯಲು ಮತ್ತು ಒಯ್ಯಲು ಪರವಾನಗಿಗೆ ಸಂಬಂಧಿಸಿದಂತೆ ಅಥವಾ ಅನ್ಯಥಾ ಅಂಥ ಅರಣ್ಯಗಳಿಗೆ ಸಂಬಂಧಿಸಿದ ಆದರೆ, ಅರಣ್ಯದ ಗುತ್ತಿಗೆದಾರರು ಅವರ ಗೇಣಿಗಳ ಅವಧಿಯ ವಿಸ್ತರಣೆಗಾಗಿ ಸಲ್ಲಿಸಿದ ಅರ್ಜಿಗಳಲ್ಲದ, ಇತರ ಅರ್ಜಿ;

(xv) ಯಾವ ದಿನಾಂಕದಂದು ಮೊಬಗಲು, ಸರ್ಕಾರಕ್ಕೆ ಸೇರಿಹೋಗಿತ್ತೋ ಆ ದಿನಾಂಕದಿಂದ ಆರು ತಿಂಗಳ ತರುವಾಯ ಸರ್ಕಾರಕ್ಕೆ ಸೇರಿಹೋದ ಠೇವಣಿಯ ಮರುಪಾವತಿಗೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯ ಹೊರತಾಗಿ, ಸರ್ಕಾರದಿಂದ ಅರ್ಜಿದಾರನಿಗೆ ಬರಬೇಕಾದ ಹಣದ ಸಂದಾಯಕ್ಕೆ ಸಂಬಂಧಿಸಿದ ಅರ್ಜಿ;

(xvi) ಯಾವುದೇ ಮುನ್ಸಿಪಲ್ ತೆರಿಗೆ ವಿರುದ್ಧದ ಅಪೀಲಿನ ಮನವಿ;

(xvii) ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪರಿಹಾರಕ್ಕೆ ಸಂಬಂಧಿಸಿದ ಅರ್ಜಿ;

(xviii) ಭಾರತೀಯ ಕ್ರಿಶ್ಚಿಯನ್ ವಿವಾಹ ಅಧಿನಿಯಮ, 1872 ರ (1872ರ ಕೇಂದ್ರ ಅಧಿನಿಯಮ XV) 48ನೇ ಪ್ರಕರಣದ ಮೇರೆಗಿನ ಮನವಿ;

(xix) ಸರ್ಕಾರಿ ನೌಕರನು ಅಥವಾ ಪ್ರತಿಪಾಲಿತರ ನ್ಯಾಯಾಲಯದ ನೌಕರನು, ವಜಾ, ಕೆಳದರ್ಜೆಗೆ ಇಳಿಸುವುದಕ್ಕೆ ಅಥವಾ ಅಮಾನತು ಮಾಡಿದ ಆದೇಶಗಳ ವಿರುದ್ಧ ಯಾರೇ ಮೇಲಾಧಿಕಾರಿಗೆ ಅಥವಾ ಸರ್ಕಾರಕ್ಕೆ ಸಲ್ಲಿಸಿದ ಮನವಿ ಅಥವಾ ಅಪೀಲು; ಅಂಥ ಅಪೀಲುಗಳೊಡನೆ ದಾಖಲು ಮಾಡಲಾದಂಥ ಆದೇಶಗಳ ಪ್ರತಿಗಳು ಮತ್ತು ಅಂಥ ಪ್ರತಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದ ಅರ್ಜಿಗಳು;

(xx) ವಾದಪತ್ರಗಳೊಡನೆ ಅಥವಾ ಅರ್ಜಿಗಳ ಜೊತೆ ಸಲ್ಲಿಸಿದ ಹಕ್ಕುಗಳ ದಾಖಲೆ ಪ್ರತಿ.

**70. ಫೀಜುಗಳನ್ನು ಕಡಿಮೆ ಮಾಡುವ ಅಥವಾ ಮಾಫಿ ಮಾಡುವ ಅಧಿಕಾರ.-** [1][(1) ದಸ್ತಾವೇಜುಗಳ ಯಾವುದೇ ನಿರ್ದಿಷ್ಟ ವರ್ಗದ ಅಥವಾ ಅಂಥ ವರ್ಗಕ್ಕೆ ಸೇರಿದ ಯಾವುವೇ ದಸ್ತಾವೇಜುಗಳ ಸಂಬಂಧದಲ್ಲಿ ಅಥವಾ ವ್ಯಕ್ತಿಗಳ ಯಾವುದೇ ನಿರ್ದಿಷ್ಟ ವರ್ಗದವರ ಅಥವಾ ಅಂಥ ವರ್ಗದ ಯಾರೇ ಸದಸ್ಯರ ಸಂದರ್ಭದಲ್ಲಿ ಸಲ್ಲಿಸಿದ್ದ, ಪ್ರದರ್ಶಿಸಿದ್ದ ಅಥವಾ ದಾಖಲ್ಮಾಡಿದ್ದ ಅಥವಾ ಅವರ ಕೋರಿಕೆಯ ಮೇರೆಗೆ ವರ್ತಿಸಲಾದ ಅಥವಾ ಅವರಿಗೆ ಒದಗಿಸಲಾದ ಯಾವುವೇ ದಸ್ತಾವೇಜುಗಳ ಮೇಲೆ ಸಂದಾಯಮಾಡತಕ್ಕ ಫೀಜನ್ನು, ಇಡೀ [2][ಕರ್ನಾಟಕ ರಾಜ್ಯ][2]ದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ, ಕಡಿಮೆ ಮಾಡುವುದು ಅಥವಾ ಮಾಫಿ ಮಾಡುವುದು ಸಾರ್ವಜನಿಕ ಹಿತಕ್ಕಾಗಿ ಅವಶ್ಯಕವಿದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ರಾಜ್ಯ ಸರ್ಕಾರವು ಆ ರೀತಿ ಮಾಡಬಹುದು ಮತ್ತು ಅಂಥ ಅಧಿಸೂಚನೆಯನ್ನು ಅದೇ ರೀತಿಯಲ್ಲಿ ರದ್ದುಗೊಳಿಸಬಹುದು ಅಥವಾ ಅದರಲ್ಲಿ ವ್ಯತ್ಯಾಸ ಮಾಡಬಹುದು.][1]

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 05.03.1964ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ಪ್ರತಿಯೊಂದು ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ

ಅವಧಿಯವರೆಗೆ ಮಂಡಿಸತಕ್ಕದ್ದು ಅಥವಾ ಆ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಸಭೆಯು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ ಅಥವಾ ಅಧಿಸೂಚನೆಯು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ನಿರ್ದೇಶಿಸಿದರೆ, ಆ ತರುವಾಯ ಆ ಅಧಿಸೂಚನೆಯು, ಸಂದರ್ಭಾನುಸಾರ ಹಾಗೆ ಮಾರ್ಪಡಿಸಲಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

## ಅಧ್ಯಾಯ VIII

### ಸಂಕೀರ್ಣ

[1][**71. ಫೀಜುಗಳ ಸಂಗ್ರಹಣೆ.-** ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಎಲ್ಲಾ ಫೀಜುಗಳನ್ನು,-

(i) ಫೀಜಿನ ಮೊಬಲಗು ಐದುನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಇಲ್ಲದಿರುವಲ್ಲಿ ನಗದು ರೂಪದಲ್ಲಿ;

(ii) ಫೀಜಿನ ಮೊಬಲಗು ಐದು ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಇರುವಲ್ಲಿ, ಸರ್ಕಾರದ ಖಜಾನೆಯಲ್ಲಿ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ][1] [2][ಮತ್ತು;][2]

[2][(iii) ಇ-ಸಂದಾಯದ ಮೂಲಕ ಸಹ ಸಂದಾಯಮಾಡಬಹುದಾಗಿರುತ್ತದೆ.][2]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 37ರ ಮೂಲಕ ದಿನಾಂಕ 31.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**72.** [1][xxx][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**73. ತಿದ್ದುಪಡಿಯಾದ ದಸ್ತಾವೇಜು.-** ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಫೀಜಿನ ಸಂಬಂಧದಲ್ಲಿ, ಯಾವುದೇ ದಸ್ತಾವೇಜನ್ನು, ಕೇವಲ ಅದರಲ್ಲಿರುವ ಪ್ರಮಾದವನ್ನು ತಿದ್ದುವುದಕ್ಕಾಗಿ ಮತ್ತು ಅದನ್ನು ಪಕ್ಷಕಾರನ ಮೂಲ ಆಶಯಕ್ಕೆ ಸರಿ ಹೊಂದುವಂತೆ ಮಾಡುವುದಕ್ಕಾಗಿ ತಿದ್ದುಪಡಿ ಮಾಡಿದಲ್ಲಿ, ಅದಕ್ಕೆ ಹೊಸ ಫೀಜನ್ನು ವಿಧಿಸುವ ಅವಶ್ಯಕತೆ ಇರತಕ್ಕದ್ದಲ್ಲ.][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ: 01.04.2003ರ ಮೂಲಕ ಪ್ರತ್ಯಾಯೋಜಿಸಲಾಗಿದೆ.

**74.** [1][xxx][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**75.** [3][[2][[1][xxx][1]][2]][3]

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 05.03.1964ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1984ರ ಅಧಿನಿಯಮ ಸಂಖ್ಯೆ 16ರ ಮೂಲಕ ದಿನಾಂಕ 19.04.1984ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
3. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**76.** [1][xxx][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**76ಎ. ಕಾನೂನು ಸಹಾಯಾರ್ಥ ನಿಧಿ.-** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ಹೊರತಾಗಿ, ನ್ಯಾಯ ಮಂಡಳಿಗಳು ಅಥವಾ ಅಪೀಲು ಪ್ರಾಧಿಕಾರಗಳಿಗೆ, ಪ್ರತಿಯೊಂದು ಅಪೀಲು ಅಥವಾ ಪುನರೀಕ್ಷಣೆಗಾಗಿ ಸಲ್ಲಿಸಿದ ಅಪೀಲುಗಳಿಗೆ ಅಥವಾ ಪುನರೀಕ್ಷಣೆಗಳಿಗೆ ಸಂಬಂಧಿಸಿದಂತೆ, ಅಧಿಸೂಚನೆ ಮೂಲಕ ಒಂದು ನೂರು ರೂಪಾಯಿಗಳನ್ನು ಮೀರದ ದರದಲ್ಲಿ, ಹೆಚ್ಚುವರಿ ನ್ಯಾಯಾಲಯ ಫೀಜನ್ನು ವಿಧಿಸುವುದು ರಾಜ್ಯ ಸರ್ಕಾರಕ್ಕೆ ಸಕ್ಷಮವಾಗಿರತಕ್ಕದ್ದು.

ಉಪಪ್ರಕರಣ (1)ರ ಅಡಿಯಲ್ಲಿ ವಿಧಿಸಲಾದ ಮತ್ತು ಸಂಗ್ರಹಿಸಿದ ಹೆಚ್ಚುವರಿ ನ್ಯಾಯಾಲಯ ಫೀಜಿನ ಉತ್ಪತ್ತಿಗಳನ್ನು ಕಾನೂನು ಸಹಾಯಾರ್ಥ ನಿಧಿ ಎಂದು ರಚಿಸಲಾದ ನಿಧಿಗೆ ಮಾಡತಕ್ಕದ್ದು.

(2) ಉಪಪ್ರಕರಣ (2)ರ ಮೇರೆಗೆ ರಚಿಸಲಾದ ನಿಧಿಯನ್ನು ರಾಜ್ಯದ ಜನತೆಗೆ, ದಕ್ಷ ಕಾನೂನು ಸೇವೆಯನ್ನು ಒದಗಿಸುವ ಮತ್ತು ನ್ಯಾಯವಾದಿ ವೃತ್ತಿಗೆ ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸುವ ಉದ್ದೇಶಕ್ಕಾಗಿ ಬಳಸತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

(3) ಜನತೆಗೆ ಕಾನೂನು ಸೇವೆಯನ್ನು ಒದಗಿಸಬಹುದಾದ, ನ್ಯಾಯವಾದಿ ವೃತ್ತಿಗಾಗಿ ಅತಿ ಹೆಚ್ಚಿನ ದಕ್ಷ ಮತ್ತು ಸಾಮಾಜಿಕ ಭದ್ರತಾ ಕ್ರಮಗಳನ್ನು ಒದಗಿಸಬಹುದಾದ ವಿಧಾನ ಮತ್ತು ರೀತಿಯು, ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದಂಥದ್ದು ಆಗಿರತಕ್ಕದ್ದು.][1]

1. 1985ರ ಅಧಿನಿಯಮ ಸಂಖ್ಯೆ 2ನ್ನು 01.11.1986ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ.

**77. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.-** (1) ಈ ಮುಂದೆ ಹೇಳಿರುವ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಅಥವಾ ವಿನಿಯಮನಗೊಳಿಸುವುದಕ್ಕಾಗಿ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವು ನಿಯಮಗಳನ್ನು ರಚಿಸಬಹುದು ಎಂದರೆ:-

(ಎ) ಉಚ್ಚ ನ್ಯಾಯಾಲಯವು [1][XXX][1] ಮತ್ತು ಅದರ ಅಧೀನದ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳು ಹೊರಡಿಸಿದ ಆದೇಶಿಕೆಗಳ ಜಾರಿ ಅಥವಾ ಅಮಲ್ಜಾರಿಗೆ ಸಂಬಂಧಿಸಿದಂತೆ ಸಂದಾಯಮಾಡತಕ್ಕ ಫೀಜುಗಳು;

1. 1964ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ: 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) (ಎ) ಖಂಡದಲ್ಲಿ ನಮೂದಿಸಿರುವ ನ್ಯಾಯಾಲಯಗಳಿಂದ ಆದೇಶಿಕೆಗಳ ಜಾರಿಗಾಗಿ ಅಥವಾ ಅಮಲ್ಜಾರಿಗಾಗಿ ನಿಯೋಜಿಸಲಾದ ವ್ಯಕ್ತಿಗಳ ಸಂಭಾವನೆ;

(ಸಿ) ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರು ತಮ್ಮ ತಮ್ಮ ನ್ಯಾಯಾಲಯಗಳಿಂದ ಮತ್ತು ತಮ್ಮ ಅಧೀನ ನ್ಯಾಯಾಲಯಗಳಿಂದ ಹೊರಡಿಸಲಾಗುವ ಆದೇಶಿಕೆಗಳ ಜಾರಿ ಮತ್ತು ಅಮಲ್ಜಾರಿಗೆ ಸಂಬಂಧಿಸಿದಂತೆ ನಿಯೋಜಿಸಲ್ಪಡುವ, ಅವಶ್ಯಕವಿರುವ ಆದೇಶಿಕೆಗಳನ್ನು ಜಾರಿಗೊಳಿಸುವವರ ಸಂಖ್ಯೆಯನ್ನು ನಿಗದಿ ಮಾಡುವುದು;

(ಡಿ) ಆದೇಶಿಕೆಗಳ ಜಾರಿಗಾಗಿ ಅಥವಾ ಅಮಲ್ಜಾರಿಗಾಗಿ ಸಂದಾಯಮಾಡತಕ್ಕ ಫೀಜುಗಳ ಕೋಷ್ಟಕವನ್ನು ಪ್ರತಿಯೊಂದು ನ್ಯಾಯಾಲಯದಲ್ಲಿ ಇಂಗ್ಲೀಷಿನಲ್ಲಿ ಮತ್ತು ಸ್ಥಳೀಯ ಭಾಷೆ ಅಥವಾ ಭಾಷೆಗಳಲ್ಲಿ ಮುದ್ರಿಸಿ ಪ್ರದರ್ಶಿಸುವುದು.

(2) ಉಪಪ್ರಕರಣ (1)ರ ಮೇರೆಗೆ ರಚಿಸಲಾದ ಎಲ್ಲ ನಿಯಮಗಳು, ರಾಜ್ಯ ಸರ್ಕಾರದ ಸ್ಥಿರೀಕರಣಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಸ್ಥಿರೀಕರಣದ ತರುವಾಯ, ಅವುಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಅವು ಕಾನೂನಿನ ಬಲವನ್ನು ಹೊಂದಿರತಕ್ಕದ್ದು.

**78. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ:-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಿ ನಿಯಮಗಳನ್ನು ರಚಿಸಬಹುದು.

(2) ಮುಂದೆ ಹೇಳಿರುವ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಮತ್ತು ನಿರ್ದಿಷ್ಟವಾಗಿ ಈ ಮುಂದೆ ಹೇಳಿರುವ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕೆ ಅಥವಾ ವಿನಿಯಮನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು, ಎಂದರೆ:_

(ಎ) [1][ಕರ್ನಾಟಕ][1] ರೆವಿನ್ಯೂ ಅಪೀಲು ನ್ಯಾಯಾಧಿಕರಣದಿಂದ ಮತ್ತು ರೆವಿನ್ಯೂ ನ್ಯಾಯಾಲಯಗಳಿಂದ ಹೊರಡಿಸಲಾದ ಆದೇಶಿಕೆಗಳ ಜಾರಿಯ ಅಥವಾ ಅಮಲ್ಜಾರಿಗೆ ಸಂಬಂಧಿಸಿದಂತೆ ವಿಧಿಸಬಹುದಾದ ಫೀಜುಗಳು;

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ ದಿನಾಂಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) ಅಂಥ ಆದೇಶಿಕೆಗಳ ಜಾರಿ ಅಥವಾ ಅಮಲ್ಜಾರಿಗೆ ಸಂಬಂಧಿಸಿದಂತೆ ನಿಯೋಜಿಸಲು ಅವಶ್ಯಕವಿರುವ ವ್ಯಕ್ತಿಗಳ ಸಂಭಾವನೆ;

(ಸಿ) ಇಂಥ ಆದೇಶಿಕೆಗಳ ಜಾರಿ ಮತ್ತು ಅಮಲ್ಜಾರಿಗೆ ಸಂಬಂಧಿಸಿದಂತೆ ನಿಯೋಜಿಸಲು ಅವಶ್ಯಕವಿರುವ ವ್ಯಕ್ತಿಗಳ ಸಂಖ್ಯೆಯನ್ನು ಡೆಪ್ಯುಟಿ ಕಮೀಷನರು ನಿಗದಿ ಮಾಡುವುದು;

(ಡಿ) ಅಧ್ಯಾಯ VIರ ಮೇರೆಗೆ ಡೆಪ್ಯುಟಿ ಕಮೀಷನರನಿಗಿರುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಅವರಿಗೆ ಮಾರ್ಗದರ್ಶನ;

[1][(ಇ) ಯಿಂದ (ಜೆ) ವರೆಗೆ [XXX][1]

1. 2003ರ ಅಧಿನಿಯಮ ಸಂಖ್ಯೆ 10ರ ಮೂಲಕ ದಿನಾಂಕ 01.04.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಹೆಚ್ಚು ಅಧಿವೇಶನಗಳನ್ನು ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಆ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಸಭೆಯು ನಿಯಮಗಳಲ್ಲಿ ಯಾವುದೇ ಮಾರ್ಪಾಡುಗಳನ್ನು ಮಾಡಿದರೆ ಅಥವಾ ಯಾವುದೇ ನಿಯಮವು ಪರಿಣಾಮಕಾರಿಯಾಗತಕ್ಕದ್ದಲ್ಲವೆಂದು ನಿರ್ದೇಶಿಸಿದರೆ, ಆ ತರುವಾಯ ಆ ನಿಯಮಗಳು ಸಂದರ್ಭಾನುಸಾರ ಹಾಗೆ ಮಾರ್ಪಡಿಸಲಾದಂಥ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

**79. ನಿರಸನ ಮತ್ತು ಉಳಿಸುವಿಕೆಗಳು.-** (1) ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಯ ಮುಂದೆ ಹಾಜರುಪಡಿಸಲಾದ ಅಥವಾ ಹಾಜರುಪಡಿಸಬೇಕಾದ ದಸ್ತಾವೇಜುಗಳಿಗೆ ಸಂಬಂಧಿಸಿದ ಫೀಜುಗಳನ್ನು ಮತ್ತು ಸ್ಟಾಂಪುಗಳನ್ನು ಹೊರತುಪಡಿಸಿ, ಇತರ ಫೀಜುಗಳಿಗೆ ಮತ್ತು ಸ್ಟಾಂಪುಗಳಿಗೆ ಸಂಬಂಧಿಸಿದಂತೆ, [1][ಬೆಳಗಾಂ ಪ್ರದೇಶದಲ್ಲಿ][1] ಮತ್ತು ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವ ನ್ಯಾಯಾಲಯ ಫೀಜು ಅಧಿನಿಯಮ, 1870 (1870 ರ ಕೇಂದ್ರ ಅಧಿನಿಯಮ VII) [1][ಗುಲ್ಬರ್ಗಾ ಪ್ರದೇಶ][1]ದಲ್ಲಿ ಜಾರಿಯಲ್ಲಿದ್ದ ಹೈದರಾಬಾದ್ ನ್ಯಾಯಾಲಯ ಫೀಜು ಅಧಿನಿಯಮ, 1324 ಎಫ್(1324 ಎಫ್ ಹೈದರಾಬಾದ್ ಅಧಿನಿಯಮ VI) ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಯ ಮುಂದೆ ಹಾಜರುಪಡಿಸಿದ ಅಥವಾ ಹಾಜರುಪಡಿಸಲಾಗುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಫೀಜುಗಳು ಹಾಗೂ ಸ್ಟಾಂಪುಗಳನ್ನು ಹೊರತುಪಡಿಸಿ, ಫೀಜುಗಳು ಹಾಗೂ ಸ್ಟಾಂಪುಗಳಿಗೆ ಸಂಬಂಧಿಸಿದಂತೆ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದಂಥ ಮೈಸೂರು ನ್ಯಾಯಾಲಯ ಫೀಜು ಅಧಿನಿಯಮ (1900ರ ಮೈಸೂರು ಅಧಿನಿಯಮ III) ಹಾಗೂ ಮೈಸೂರು ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1883 (1883ರ ಮೈಸೂರು ಅಧಿನಿಯಮ I)ರ 11 ಮತ್ತು 17ಎ ಪ್ರಕರಣಗಳು ಮತ್ತು [1][ಬೆಳಗಾಂ ಪ್ರದೇಶ][1] ಹಾಗೂ ಕೊಡಗು ಜಿಲ್ಲೆಯಲ್ಲಿ ಅನ್ವಯದಲ್ಲಿರುವ ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1887 (1887ರ ಕೇಂದ್ರ ಅಧಿನಿಯಮ VII) [1][ಗುಲ್ಬರ್ಗಾ ಪ್ರದೇಶದಲ್ಲಿ][1] ಜಾರಿಯಲ್ಲಿದ್ದ ಹೈದರಾಬಾದ್ ದಾವೆಗಳ ಮೌಲ್ಯ ನಿಗದಿ (ಅಧಿಕಾರವ್ಯಾಪ್ತಿಯ ಉದ್ದೇಶಗಳಿಗಾಗಿ) ಅಧಿನಿಯಮ, 1318 ಎಫ್. (1318 ಫಸ್ಲಿ ಹೈದರಾಬಾದ್ ಅಧಿನಿಯಮ IV) ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದ ಮೈಸೂರು ದಾವೆಗಳ ಮೌಲ್ಯ ನಿಗದಿ ಅಧಿನಿಯಮ 1951 (1951 ರ ಮೈಸೂರು ಅಧಿನಿಯಮ XXXIX) ಮತ್ತು [1][ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶ][1] ದಲ್ಲಿ ಜಾರಿಯಲ್ಲಿದ್ದ ಮದ್ರಾಸು ನ್ಯಾಯಾಲಯ ಫೀಜು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1955 (1955 ರ ಮದ್ರಾಸು ಅಧಿನಿಯಮ XIV), -ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ: ಪರಂತು ಅಂಥ ನಿರಸನವು,-

(ಎ) ಮೇಲೆ ಹೇಳಿದ ಅಧಿನಿಯಮಿತಿಗಳ ಪೂರ್ವ ಪ್ರವರ್ತನೆ ಅಥವಾ ಅವುಗಳ ಮೇರೆಗೆ ಯುಕ್ತವಾಗಿ ಮಾಡಲಾದ ಅಥವಾ ಅವಕಾಶ ಕೊಡಲಾದ ಯಾವುದೇ ಕೃತ್ಯ ಅಥವಾ;

(ಬಿ) ಸದರಿ ಅಧಿನಿಯಮಿತಿಗಳ ಮೇರೆಗೆ ಆರ್ಜಿತ, ಸಂಚಿತ ಅಥವಾ ಸೃಜನೆಯಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ; ಅಥವಾ

(ಸಿ) ಸದರಿ ಅಧಿನಿಯಮಿತಿಗಳಿಗೆ ವಿರೋಧವಾಗಿ ಎಸಗಿದ ಯಾವುದೇ ಅಪರಾಧಕ್ಕಾಗಿ ವಿಧಿಸಿದ ದಂಡ, ಮುಟ್ಟುಗೋಲು ಅಥವಾ ದಂಡನೆ; ಅಥವಾ

(ಡಿ) ಈ ಮುಂಚೆ ಹೇಳಿರುವಂಥ ಯವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಯ ಬಗೆಗಿನ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಕ್ರಮೋಪಾಯಗಳಿಗೆ

- ಬಾಧಕವಾಗತಕ್ಕದ್ದಲ್ಲ; ಮತ್ತು ಈ ಅಧಿನಿಯಮವನ್ನು ಅನುಮೋದಿಸಲಾಗಿರದಿದ್ದರೆ ಹೇಗೋ ಹಾಗೆ, ಅಂಥ ತನಿಖೆಗಳನ್ನು, ಕಾನೂನು ವ್ಯವಹರಣೆಗಳನ್ನು ಅಥವಾ ಕ್ರಮೋಪಾಯಗಳನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂಥ ಯಾವುದೇ ದಂಡವನ್ನು, ಮುಟ್ಟುಗೋಲನ್ನು ಅಥವಾ ದಂಡನೆಯನ್ನು ವಿಧಿಸಬಹುದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿನಾಂಕ: 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಹಿಂದಿನ ಸದರಿ (1)ನೇ ಉಪಪ್ರಕರಣದ ಪರಂತುಕವನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು,-

(ಎ) ನಿರಸನಗೊಳಿಸಲಾದ ಅಧಿನಿಯಮಿತಿಗಳ ಮೇರೆಗೆ ಹೊರಡಿಸಲಾದ ನಿಯಮಗಳಲ್ಲಿ, ಅಧಿಸೂಚನೆಗಳಲ್ಲಿ ಮತ್ತು ಆದೇಶಗಳಲ್ಲಿ ಆದ ಲೋಪಗಳನ್ನು ಸರಿಪಡಿಸುವುದಕ್ಕಾಗಿ, ಸೇರ್ಪಡೆಗಳನ್ನು, ಅಳವಡಿಕೆಗಳನ್ನು ಮತ್ತು ಮಾರ್ಪಾಡುಗಳನ್ನು ಮಾಡಲು;

(ಬಿ) ನಿರಸನಗೊಳಿಸಲಾದ ಯಾವುದೇ ಅಧಿನಿಯಮಿತಿಗಳ ಅಥವಾ ಅವುಗಳಡಿಯಲ್ಲಿ ಹೊರಡಿಸಲಾದ, ಯಾವುವೇ ನಿಯಮಗಳ, ಅಧಿಸೂಚನೆಗಳ ಅಥವಾ ಆದೇಶಗಳ ಮೇರೆಗೆ ಚಲಾಯಿಸಬಹುದಾದಂಥ ಮತ್ತು ಸದರಿ ಅಧಿಸೂಚನೆಯಲ್ಲಿ ಹೇಳಿರುವಂಥ ಪ್ರಕಾರ್ಯಗಳನ್ನು ಚಲಾಯಿಸಲು ಸಕ್ಷಮ ಪ್ರಾಧಿಕಾರಿಯನ್ನು, ಅಧಿಕಾರಿಯನ್ನು ಅಥವಾ ವ್ಯಕ್ತಿಯನ್ನು ನಿರ್ದಿಷ್ಟಪಡಿಸಲು

- ತನಗೆ ಅವಶ್ಯಕವೆಂದು ಅಥವಾ ಯುಕ್ತವೆಂದು ಕಂಡುಬರುವಂಥ ಉಪಬಂಧಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ರಚಿಸಬಹುದು.

(3) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಹೂಡಲಾದ ಎಲ್ಲಾ ದಾವೆಗಳು ಮತ್ತು ವ್ಯವಹರಣೆಗಳು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಗಳನ್ನು ನಿರಸನಗೊಳಿಸಲಾಗಿದ್ದರೂ, ಸದರಿ ಅಧಿನಿಯಮಗಳ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಲಾದ ನಿಯಮಗಳಿಗೆ ಒಳಪಡತಕ್ಕದ್ದು.

**ಅನುಸೂಚಿ I**

**ಮೌಲ್ಯಾನುಸಾರ ಫೀಜುಗಳು**

| ಅನುಚ್ಛೇದ (1) | ವಿವರಗಳು (2) | ಯುಕ್ತ ಫೀಜು (3) |
|---|---|---|
| 1. ವಾದಪತ್ರ, ವಜಾವಟ್ಟನ್ನು ಅಥವಾ ಎದುರು ಕ್ಲೇಮನ್ನು ಪ್ರತಿಪಾದಿಸುವ ಲಿಖಿತ ವಿವರಣ ಅಥವಾ ಯಾವುದೇ ನ್ಯಾಯಾಲಯಕ್ಕೆ ಹಾಜರುಪಡಿಸಿದ ಅಪೀಲು ವಿವರಣಪತ್ರ. ವಿವಾದಕ್ಕೊಳಗಾದ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು,- | | |
| [2][[1][(i) | 15,000 ರೂಪಾಯಿಗಳಿಗೆ ಮೀರದಿರುವಾಗ | ಪ್ರತಿ ಶತ $2^{1}/_{2}$ |
| (ii) | 15,000 ರೂಪಾಯಿಗಳಿಗೆ ಮೀರಿದ ಆದರೆ 75,000 ರೂಪಾಯಿಗಳಿಗೆ ಮೀರದಿರುವಾಗ | 15,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 375 ರೂಪಾಯಿಗಳ ಜೊತೆಗೆ ಪ್ರತಿಶತ $7^{1}/_{2}$ |
| (iii) | 75,000 ರೂಪಾಯಿಗಳಿಗೆ ಮೀರಿದ ಆದರೆ 2,50,000 ರೂಪಾಯಿಗಳಿಗೆ ಮೀರದಿರುವಾಗ | 75,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 4,875 ರೂಪಾಯಿಗಳ ಜೊತೆಗೆ ಪ್ರತಿಶತ 7 |
| (iv) | 2,50,000 ರೂಪಾಯಿಗಳಿಗೆ ಮೀರಿದ ಆದರೆ 5,00,000 ರೂಪಾಯಿಗಳಿಗೆ ಮೀರದಿರುವಾಗ | 2,50,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 17,125 ರೂಪಾಯಿಗಳ ಜೊತೆಗೆ ಪ್ರತಿಶತ $6^{1}/_{2}$ |
| (v) | 5,00,000 ರೂಪಾಯಿಗಳಿಗೆ ಮೀರಿದ ಆದರೆ 7,50,000 ರೂಪಾಯಿಗಳಿಗೆ ಮೀರದಿರುವಾಗ. | 5,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 33,375 ರೂಪಾಯಿಗಳ ಜೊತೆಗೆ ಪ್ರತಿಶತ 6 |
| (vi) | 7,50,000 ರೂಪಾಯಿಗಳಿಗೆ ಮೀರಿದ ಆದರೆ 10,00,000 ರೂಪಾಯಿಗಳಿಗೆ ಮೀರದಿರುವಾಗ | 7,50,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 48,375 ರೂಪಾಯಿಗಳ ಜೊತೆಗೆ ಪ್ರತಿಶತ $5^{1}/_{2}$ |
| (vii) | 10,00,000 ರೂಪಾಯಿಗಳಿಗೆ ಮೀರಿದ ಆದರೆ 15,00,000 ರೂಪಾಯಿಗಳಿಗೆ ಮೀರದಿರುವಾಗ | 10,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 62,125 ರೂಪಾಯಿಗಳ ಜೊತೆಗೆ ಪ್ರತಿಶತ 5 |

| | | |
|---|---|---|
| (viii) | 15,00,000 ರೂಪಾಯಿಗಳಿಗೆ ಮೀರಿದ ಆದರೆ 20,00,000 ರೂಪಾಯಿಗಳಿಗೆ ಮೀರದಿರುವಾಗ | 15,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 87,125 ರೂಪಾಯಿಗಳ ಜೊತೆಗೆ ಪ್ರತಿಶತ $4^1/_2$ |
| (ix) | 20,00,000 ರೂಪಾಯಿಗಳಿಗೆ ಮೀರಿದ ಆದರೆ 25,00,000 ರೂಪಾಯಿಗಳಿಗೆ ಮೀರದಿರುವಾಗ | 20,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 1,09,625 ರೂಪಾಯಿಗಳ ಜೊತೆಗೆ ಪ್ರತಿಶತ 4 |
| (x) | 25,00,000 ರೂಪಾಯಿಗಳಿಗೆ ಮೀರಿದ ಆದರೆ 30,00,000 ರೂಪಾಯಿಗಳಿಗೆ ಮೀರದಿರುವಾಗ | 25,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 1,29,625 ರೂಪಾಯಿಗಳ ಜೊತೆಗೆ ಪ್ರತಿಶತ $3^1/_2$ |
| (xi) | 30,00,000 ರೂಪಾಯಿಗಳಿಗೆ ಮೀರಿದ ಆದರೆ 40,00,000 ರೂಪಾಯಿಗಳಿಗೆ ಮೀರದಿರುವಾಗ. | 30,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 1,47,125 ರೂಪಾಯಿಗಳ ಜೊತೆಗೆ ಪ್ರತಿಶತ 3 |
| (xii) | 40,00,000 ರೂಪಾಯಿಗಳಿಗೆ ಮೀರಿದ ಆದರೆ 50,00,000 ರೂಪಾಯಿಗಳಿಗೆ ಮೀರದಿರುವಾಗ | 40,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 1,77,125 ರೂಪಾಯಿಗಳ ಜೊತೆಗೆ ಪ್ರತಿಶತ $2^1/_2$ |
| (xiii) | 50,00,000 ರೂಪಾಯಿಗಳಿಗೆ ಮೀರಿದ ಆದರೆ 60,00,000 ರೂಪಾಯಿಗಳಿಗೆ ಮೀರದಿರುವಾಗ | 50,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 2,02,125 ರೂಪಾಯಿಗಳ ಜೊತೆಗೆ ಪ್ರತಿಶತ 2 |
| (xiv) | 60,00,000 ರೂಪಾಯಿಗಳಿಗೆ ಮೀರಿದ ಆದರೆ 70,00,000 ರೂಪಾಯಿಗಳಿಗೆ ಮೀರದಿರುವಾಗ | 60,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 2,22,125 ರೂಪಾಯಿಗಳ ಜೊತೆಗೆ ಪ್ರತಿಶತ $1^1/_2$ |
| (xv) | 70,00,000 ರೂಪಾಯಿಗಳಿಗೆ ಮೀರಿದ ಆದರೆ 80,00,000 ರೂಪಾಯಿಗಳಿಗೆ ಮೀರದಿರುವಾಗ | 70,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 2,37,125 ರೂಪಾಯಿಗಳ ಜೊತೆಗೆ ಪ್ರತಿಶತ 1 |

| | | |
|---|---|---|
| (xvi) | 80,00,000 ರೂಪಾಯಿಗಳ ಮೇಲ್ಪಟ್ಟು | 80,00,000 ರೂಪಾಯಿಗಳನ್ನು ಮೀರಿದ ಮೊಬಲಗಿಗೆ 2,47,125 ರೂಪಾಯಿಗಳ ಜೊತೆಗೆ ಪ್ರತಿಶತ $^1/_2$]^1]^2 |
| 1. 1979ರ ಅಧಿನಿಯಮ ಸಂಖ್ಯೆ 21ರ ಮೂಲಕ 31.03.1979ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. (i) ರಿಂದ (xvi)ನೇ ಖಂಡವನ್ನು, ದಿನಾಂಕ: 29.01.1993 ರಿಂದ ಜಾರಿಗೆ ಬರುವಂತೆ ಅಧಿನಿಯಮ 2ರ ಮೂಲಕ ಪ್ರತ್ಯಾಯೋಜಿಸಲಾಗಿದೆ. | | |
| 2(ಎ) | [1][ಪ್ರಾಂತೀಯ ದಿವಾಳಿ (ಕರ್ನಾಟಕ ವಿಸ್ತರಣೆ ಮತ್ತು ತಿದ್ದುಪಡಿ) ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 7) ರ ಮೂಲಕ ಅನ್ವಯವಾಗುವ ಹಾಗೂ ತಿದ್ದುಪಡಿಯಾದ][1] ಪ್ರಾಂತೀಯ ದಿವಾಳಿ ಅಧಿನಿಯಮ, 1920ರ 26ನೇ ಪ್ರಕರಣದ ಮೇರೆಗಿನ ಅರ್ಜಿ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 95ನೇ ಪ್ರಕರಣದ ಮೇರೆಗಿನ ಅರ್ಜಿ. | ಕ್ಲೇಮು ಮಾಡಲಾದ ಮೊಬಲಗಿನ ಅಥವಾ ನಷ್ಟಪರಿಹಾರದ ಮೇಲೆ 1ನೇ ಅನುಚ್ಛೇದದಲ್ಲಿ ನಿಯಮಿಸಲಾದ ಫೀಜಿನ ಪ್ರಮಾಣದ ಅರ್ಧದಷ್ಟು ಮೊಬಲಗು. |
| 1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973 ರ ಮೂಲಕ ದಿನಾಂಕ 01.11.1973 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಬಿ) | (ಎ) ಖಂಡದ ಮೇರೆಗೆ ಬರುವ ಮನವಿಯ ಅಥವಾ ಅರ್ಜಿಯ ಮೇಲೆ ಆದ ಆದೇಶದ ವಿರುದ್ಧದ ಅಪೀಲು. | ವಿವಾದದಲ್ಲಿರುವ ಮೊಬಲಗಿನ ಮೇಲೆ Iನೇ ಅನುಚ್ಛೇದದಲ್ಲಿ ನಿಯಮಿಸಲಾದ ಪ್ರಮಾಣದ ಮೇಲೆ. |
| 3(ಎ) | [1][ಪ್ರಾಂತೀಯ ದಿವಾಳಿ (ಕರ್ನಾಟಕ ವಿಸ್ತರಣೆ ಮತ್ತು ತಿದ್ದುಪಡಿ) ಅಧಿನಿಯಮ, 1962 (1963ರ ಕರ್ನಾಟಕ ಅಧಿನಿಯಮ 7) ರ ಮೂಲಕ ಅನ್ವಯವಾಗುವ ಹಾಗೂ ತಿದ್ದುಪಡಿಯಾದ][1] ಪ್ರಾಂತೀಯ ದಿವಾಳಿ ಅಧಿನಿಯಮ, 1920ರ 53 ಅಥವಾ 54ನೇ ಪ್ರಕರಣದ ಮೇರೆಗಿನ ಮನವಿ. | ಐದುನೂರು ರೂಪಾಯಿಗಳ ಗರಿಷ್ಠ ಫೀಜಿಗೆ ಒಳಪಟ್ಟು, ವಸ್ತು ವಿಷಯದ ಮಾರುಕಟ್ಟೆ ಮೌಲ್ಯದ ಮೇಲೆ 1ನೇ ಅನುಚ್ಛೇದದಲ್ಲಿ ನಿಯಮಿಸಲಾದ ಪ್ರಮಾಣದ ಫೀಜಿನ ಅರ್ಧದಷ್ಟು ಮೊಬಲಗು. |

| | | |
|---|---|---|
| 1. ದಿನಾಂಕ 01.11.1973 ರಿಂದ ಜಾರಿಗೆ ಬರುವಂತೆ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973 ರ ಮೂಲಕ ಪ್ರತ್ಯಾಯೋಜಿಸಲಾಗಿದೆ. | | |
| (ಬಿ) | (ಎ)ಖಂಡದ ಮೇರೆಗೆ ಬರುವ ಮನವಿಗಳ ಮೇಲೆ ಆದ ಆದೇಶಗಳ ವಿರುದ್ಧ ಸರ್ಕಾರಿ ರಿಸೀವರನ ಅಥವಾ ವಿಫಲನಾದ ಪಕ್ಷಕಾರನ ಅಪೀಲು | ಐದುನೂರು ರೂಪಾಯಿಗಳ ಗರಿಷ್ಠ ಫೀಜಿಗೆ ಒಳಪಟ್ಟು ವಸ್ತು-ವಿಷಯದ ಮಾರುಕಟ್ಟೆ ಮೌಲ್ಯದ ಮೇಲೆ 1ನೇ ಅನುಚ್ಛೇದದಲ್ಲಿ ನಿಯಮಿಸಲಾದ ಫೀಜಿನ ಪ್ರಮಾಣದ ಅರ್ಧದಷ್ಟು ಮೊಬಲಗು. |
| 4 | ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925ರ ಮೇರೆಗಿನ ವ್ಯವಹರಣೆಗಳಲ್ಲಿ ಮಾಡಿದ ಆದೇಶದ ವಿರುದ್ಧ ಅಪೀಲು ವಿವರಣಪತ್ರ. | ವಸ್ತು-ವಿಷಯದ ಮೊಬಲಗಿನ ಅಥವಾ ಮೌಲ್ಯದ ಮೇಲೆ 1ನೇ ಅನುಚ್ಛೇದದಲ್ಲಿ ನಿಯಮಿಸಲಾದ ಫೀಜಿನ ಪ್ರಮಾಣದ ಅರ್ಧದಷ್ಟು ಮೊಬಲಗು. |
| 5 | [1][ಡಿಕ್ರಿಯ ದಿನಾಂಕದಿಂದ ತೊಂಬತ್ತನೆಯ ದಿನಕ್ಕಿಂತ ಮುಂಚೆ ಸಲ್ಲಿಸಿದ್ದರೆ][1] ತೀರ್ಪಿನ ಪುನರಾವಲೋಕನಕ್ಕೆ ಸಂಬಂಧಿಸಿದ ಅರ್ಜಿ | ವಾದಪತ್ರದ ಅಥವಾ ಅಪೀಲು ವಿವರಣಪತ್ರದ ಮೇಲೆ ವಿಧಿಸಬಹುದಾದ ಫೀಜಿನ ಅರ್ಧದಷ್ಟು. [2][XXX][2] |
| 1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.<br>2. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ. | | |
| [1][5ಎ. | ಡಿಕ್ರಿಯ ದಿನಾಂಕದಿಂದ ತೊಂಭತ್ತನೆಯ ದಿನದಂದು ಅಥವಾ ಆ ಬಳಿಕ ಸಲ್ಲಿಸಿದ್ದರೆ ತೀರ್ಪಿನ ಪುನರಾವಲೋಕನಕ್ಕೆ ಸಂಬಂಧಿಸಿದ ಅರ್ಜಿ. | ವಾದಪತ್ರದ ಅಥವಾ ಅಪೀಲು ವಿವರಣಪತ್ರದ ಮೇಲೆ ವಿಧಿಸಬಹುದಾದ ಫೀಜು.][1] |
| 1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |
| [1][5ಎಎ. | ಕರ್ನಾಟಕ ಆಡಳಿತ ನ್ಯಾಯಾಧಿಕರಣದ ಆದೇಶದ ಪುನರವಲೋಕನಕ್ಕೆ ಸಂಬಂಧಿಸಿದ ಅರ್ಜಿ. | ಇಪ್ಪತ್ತು ರೂಪಾಯಿಗಳು][1] |
| 1. 1989ರ ಅಧಿನಿಯಮ 5ರ ಮೂಲಕ ದಿನಾಂಕ 09.02.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |

| | | |
|---|---|---|
| [2][[1][6. | ಮರಣಶಾಸನದ ಪ್ರೊಬೇಟು ಅಥವಾ ಮರಣಶಾಸನ ಪತ್ರದೊಡನೆ ಅನುಬಂಧಿತವಾದ ಅಥವಾ ಅನುಬಂಧಿತವಾಗಿರದ ಆಡಳಿತ ಅಧಿಕಾರ ಪತ್ರಗಳು, - | |
| | (ಎ)ಪ್ರೊಬೇಟನ್ನು ಅಥವಾ ಅಧಿಕಾರಪತ್ರಗಳನ್ನು ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದ ಸ್ವತ್ತಿನ ಮೊಬಲಗು ಅಥವಾ ಮೌಲ್ಯವು ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಇರುವಾಗ, ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿರುವ ಮೊಬಲಗಿನ ಅಥವಾ ಮೌಲ್ಯದ ಭಾಗದ ಮೇಲೆ ಮೂರು ಲಕ್ಷ ರೂಪಾಯಿಗಳವರೆಗೆ.<br>(ಬಿ) ಪ್ರೊಬೇಟನ್ನು ಅಥವಾ ಅಧಿಕಾರಪತ್ರಗಳನ್ನು ಮಂಜೂರು ಮಾಡಿರುವುದಕ್ಕೆ ಸಂಬಂಧಿಸಿದ ಸ್ವತ್ತಿನ ಮೊಬಲಗು ಅಥವಾ ಮೌಲ್ಯವು ಮೂರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಇರುವಾಗ, ಮೂರು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ಇರುವ ಮೊಬಲಗಿನ ಅಥವಾ ಮೌಲ್ಯದ ಭಾಗದ ಮೇಲೆ | ಶೇಕಡಾ ಮೂರು.<br><br>ಶೇಕಡಾ ಐದು ಅಥವಾ ಮೂವತ್ತು ಸಾವಿರ ರೂಪಾಯಿಗಳು ಇದರಲ್ಲಿ ಯಾವುದು ಕಡಿಮೆಯೋ ಅದು.][1]][2] |
| | 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 2000ರ ಅಧಿನಿಯಮ 12ರ ಮೂಲಕ ದಿನಾಂಕ 27.04.2000 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | |
| 7 | ಭಾರತ ಉತ್ತರಾಧಿಕಾರ ಅಧಿನಿಯಮ, 1925ರ ಭಾಗ X ರ ಮೇರೆಗಿನ ಪ್ರಮಾಣಪತ್ರ. | ಅಧಿನಿಯಮದ 374ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಋಣದ ಅಥವಾ ಭದ್ರತೆಯ ಮೊಬಲಗಿನ ಅಥವಾ ಮೌಲ್ಯದ ಪ್ರೊಬೇಟಿನ ಮೇಲೆ (ಅನುಚ್ಛೇದ 6) ವಿಧಿಸಬಹುದಾದ ಫೀಜು ಮತ್ತು ಅಧಿನಿಯಮದ 376ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ವಿಸ್ತರಿಸಲಾದಲ್ಲಿ ಆ ಋಣದ ಅಥವಾ |

| | | |
|---|---|---|
| | | ಭದ್ರತೆಯ ಮೊಬಲಗಿನ ಅಥವಾ ಮೌಲ್ಯದ ಮೇಲೆ ಈ ಫೀಜಿನ ಒಂದೂವರೆಯಷ್ಟು. |
| | | **ಟಿಪ್ಪಣಿ-** (1) ಋಣದ ಮೊಬಲಗು ಎಂದರೆ, ಅಂಥ ಮೊಬಲಗನ್ನು ಖಚಿತಪಡಿಸಬಹುದಾದ ಮಟ್ಟಿಗೆ ಪ್ರಮಾಣಪತ್ರದಲ್ಲಿ ಋಣದ ಸೇರ್ಪಡೆಗೆ ಸಂಬಂಧಿಸಿದ ಅರ್ಜಿಯನ್ನು ಸಲ್ಲಿಸಿದ ದಿನಾಂಕದವರೆಗೆ ಲೆಕ್ಕಹಾಕಲಾದ ಬಡ್ಡಿಯನ್ನು ಒಳಗೊಂಡ ಮೊಬಲಗು.<br>(2) ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಲಾದ ಭದ್ರತೆಯ ಸಂಬಂಧದಲ್ಲಿ ಆ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ಪ್ರದಾನ ಮಾಡಿರಲಿ ಅಥವಾ ಮಾಡದಿರಲಿ ಮತ್ತು ಅಂಥ ಅಧಿಕಾರವನ್ನು ಪ್ರದಾನ ಮಾಡಲಾಗಿರುವಲ್ಲಿ, ಆ ಅಧಿಕಾರವು ಭದ್ರತೆಯ ಮೇಲಿನ ಬಡ್ಡಿಯನ್ನು ಅಥವಾ ಲಾಭಾಂಶವನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಅಥವಾ ಅದರ ಹಸ್ತಾಂತರದ ಅಥವಾ ವರ್ಗಾವಣೆಗೆ ಸಂಬಂಧಿಸಿದಂತೆಯೇ ಇರಲಿ ಅಥವಾ ಆ ಎರಡೂ ಉದ್ದೇಶಗಳಿಗಾಗಿಯೇ ಇರಲಿ, ಮೌಲ್ಯವನ್ನು ಖಚಿತಪಡಿಸಬಹುದಾದಷ್ಟು ಮಟ್ಟಿಗೆ ಆ ಭದ್ರತೆಯನ್ನು ಪ್ರಮಾಣಪತ್ರದಲ್ಲಿ ಸೇರ್ಪಡೆ ಮಾಡಲು ಅರ್ಜಿಯನ್ನು ಸಲ್ಲಿಸಲಾದ ದಿನದಂದು ಇರುವ ಭದ್ರತೆಯ ಮಾರುಕಟ್ಟೆ ಮೌಲ್ಯವೇ ಭದ್ರತೆಯ ಮೌಲ್ಯವಾಗಿರುತ್ತದೆ. |

**ಅನುಸೂಚಿ II**

| ಅನುಚ್ಛೇದ (1) | ವಿವರಗಳು (2) | ಯುಕ್ತ ಫೀಜು (3) |
|---|---|---|
| [1][1. | ಮೈಸೂರು ಮತಾಂತರಿತರ ವಿವಾಹ ವಿಚ್ಛೇದನ ಅಧಿನಿಯಮ, 1866ರ (1866ರ ಮೈಸೂರು ಅಧಿನಿಯಮ XXI); ಅಥವಾ ಮತಾಂತರಿತರ ವಿವಾಹ ವಿಚ್ಛೇದನ ಅಧಿನಿಯಮ, 1866ರ (1866ರ ಕೇಂದ್ರ ಅಧಿನಿಯಮ XXI) ಮೇರೆಗಿನ ದಾವೆಯಲ್ಲಿನ ಮನವಿ;<br><br>ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮ, 1869ರ (1869ರ ಕೇಂದ್ರ ಅಧಿನಿಯಮ IV) 44ನೇ ಪ್ರಕರಣದ ಮೇರೆಗಿನ ಮನವಿಯನ್ನು ಹೊರತುಪಡಿಸಿ ಆ ಅಧಿನಿಯಮದಡಿಯಲ್ಲಿನ ಮನವಿ ಮತ್ತು ಆ ಅಧಿನಿಯಮದ 55ನೇ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲು ವಿವರಣಪತ್ರ;<br><br>ಪಾರ್ಸಿ ವಿವಾಹ ಮತ್ತು ವಿವಾಹ ವಿಚ್ಛೇದನ ಅಧಿನಿಯಮ, 1936 (1936 ರ ಕೇಂದ್ರ ಅಧಿನಿಯಮ III) ಮೇರೆಗಿನ ವಾದಪತ್ರ ಅಥವಾ ಅಪೀಲು ವಿವರಣಪತ್ರ ಅಥವಾ ಆ ಅಧಿನಿಯಮದ 37ನೇ ಪ್ರಕರಣದ ಮೇರೆಗಿನ ಎದುರು ಕ್ಲೇಮು;<br><br>ಮುಸ್ಲಿಂ ವಿವಾಹ ವಿಚ್ಛೇದನ ಅಧಿನಿಯಮ, 1939 (1939ರ ಕೇಂದ್ರ ಅಧಿನಿಯಮ VIII), ಮೈಸೂರು ಮುಸ್ಲಿಂ ವಿವಾಹ ವಿಚ್ಛೇದನ ಅಧಿನಿಯಮ, 1943 (1943ರ ಮೈಸೂರು ಅಧಿನಿಯಮ XLIII).<br><br>ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಸ್ಲಿಂ ವಿವಾಹ ವಿಚ್ಛೇದನ ಅಧಿನಿಯಮ, 1939 (1939ರ ಕೇಂದ್ರ ಅಧಿನಿಯಮ VIII) ಮತ್ತು | [2][ಒಂದು ನೂರು ರೂಪಾಯಿಗಳು][2] |

| | | |
|---|---|---|
| | ವಿಶೇಷ ವಿವಾಹ ಅಧಿನಿಯಮ, 1954ರ (1954ರ ಕೇಂದ್ರ ಅಧಿನಿಯಮ 43) 22, 23, 24, 25 ಅಥವಾ 27ನೇ ಪ್ರಕರಣಗಳ ಮೇರೆಗಿನ ಮನವಿ ಮತ್ತು ಆ ಅಧಿನಿಯಮದ 39ನೇ ಪ್ರಕರಣದ ಮೇರೆಗಿನ ಅಪೀಲು ವಿವರಣಪತ್ರ.<br>ಹಿಂದೂ ವಿವಾಹ ಅಧಿನಿಯಮ, 1955 (1955ರ ಕೇಂದ್ರ ಅಧಿನಿಯಮ 26) 9, 10, 11, 12 ಅಥವಾ 13ನೇ ಪ್ರಕರಣಗಳ ಮೇರೆಗಿನ ಮನವಿ ಮತ್ತು ಆ ಅಧಿನಿಯಮದ 28ನೇ ಪ್ರಕರಣದ ಮೇರೆಗಿನ ಅಪೀಲು ವಿವರಣಪತ್ರ. ಮೇಲಿನ ಯಾವುದೇ ಪ್ಯಾರಾದ ಮೇರೆಗೆ ಬರುವ ದಾವೆಯಲ್ಲಿ ನಷ್ಟಭರ್ತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕ್ಲೇಮು ಇದ್ದರೆ, ಕ್ಲೇಮು ಮಾಡಲಾದ ನಷ್ಟಭರ್ತಿಯ ಮೊಬಲಗಿನ ಮೇಲೆ ಅನುಸೂಚಿ I ರ 1ನೇ ಅನುಚ್ಛೇದದಲ್ಲಿ ನಿಯಮಿಸಲಾದ ದರದ ಮೇರೆಗೆ ಪ್ರತ್ಯೇಕ ಫೀಜನ್ನು ವಿಧಿಸತಕ್ಕದ್ದು. | |
| 1. 1958ರ ಅಧಿನಿಯಮ 24ರ ಮೂಲಕ ದಿನಾಂಕ 25.12.1958 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| 2. | ಭಾರತೀಯ ವಿವಾಹ ವಿಚ್ಛೇದನ ಅಧಿನಿಯಮ, 1869ರ 49ನೇ ಪ್ರಕರಣದ ಮೇರೆಗಿನ ಮುಚ್ಚಳಿಕೆ ಪತ್ರ. | [1]ಐದು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ: 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| 3. | ಸಿವಿಲ್ ಪ್ರಕ್ರಿಯಾ ಸಂಹಿತೆ, 1908 47ನೇ ಅಥವಾ 144ನೇ ಪ್ರಕರಣಗಳ ಮೇರೆಗೆ ಯಾವುದೇ ಪ್ರಶ್ನೆಯನ್ನು ನಿರ್ಧರಿಸುವ ಆದೇಶವನ್ನು ಒಳಗೊಂಡ [1][ತೀರ್ಮಾನದ, ಐತೀರ್ಪಿನ ಅಥವಾ ಆದೇಶದ ವಿರುದ್ಧವಾಗಿರುವ][1] ಅಪೀಲು ವಿವರಣಪತ್ರ ಮತ್ತು ಆ ಬಗ್ಗೆ ಬೇರೆ ರೀತಿಯಲ್ಲಿ ಉಪಬಂಧಿಸಿರದಿದ್ದಲ್ಲಿ,- | |
| | (i) ಉಚ್ಚ ನ್ಯಾಯಾಲಯವನ್ನುಳಿದು ಬೇರೆ ಯಾವುದೇ ನ್ಯಾಯಾಲಯಕ್ಕೆ ಅಥವಾ ನಿರ್ವಾಹಕ ಅಧಿಕಾರಿಗೆ ಸಲ್ಲಿಸಿದಾಗ; | [2][ನಾಲ್ಕು ರೂಪಾಯಿಗಳು][2] |

<table>
<tr><td colspan="3">1. 1969ರ ಅಧಿನಿಯಮ 11ರ ಮೂಲಕ ದಿನಾಂಕ 22.05.1969 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td></td><td>(ii) ಕರ್ನಾಟಕ ಕಂದಾಯ ಅಪೀಲು ನ್ಯಾಯಾಧಿಕರಣ [1][ಅಥವಾ ಸಹಕಾರ ಅಪೀಲು ನ್ಯಾಯಾಧಿಕರಣ][1]ಕ್ಕೆ ಸಲ್ಲಿಸಿದಾಗ;</td><td>[2][ಎಂಟು ರೂಪಾಯಿಗಳು][2]</td></tr>
<tr><td colspan="3">1. 1966ರ ಅಧಿನಿಯಮ 27ರ ಮೂಲಕ ದಿನಾಂಕ 01.10.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2.1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td></td><td>(iii) ಉಚ್ಚ ನ್ಯಾಯಾಲಯಕ್ಕೆ-<br>(1) ಆದೇಶವನ್ನು ಅಧೀನ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಮಾಡಿದ್ದಲ್ಲಿ,-<br>(ಎ) ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಮೌಲ್ಯದ ದಾವೆಗೆ ಅಥವಾ ವ್ಯವಹರಣೆಗೆ ಆ ಆದೇಶವು ಸಂಬಂಧಿಸಿದ್ದರೆ,</td><td>[1][ಹದಿನೈದು ರೂಪಾಯಿಗಳು][1]</td></tr>
<tr><td colspan="3">1. 1979ರ ಅಧಿನಿಯಮ 21ರ ಮೂಲಕ ದಿನಾಂಕ: 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td></td><td>(ಬಿ) ಬೇರೆ ಯಾವುದೇ ಸಂದರ್ಭದಲ್ಲಿ.</td><td>[1][ಎಂಟು ರೂಪಾಯಿಗಳು][1]</td></tr>
<tr><td colspan="3">1. 1979ರ ಅಧಿನಿಯಮ 21ರ ಮೂಲಕ ದಿನಾಂಕ: 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td></td><td>(2) ಅಪೀಲು, ಬ್ಯಾಂಕಿಂಗ್ ಕಂಪನಿಗಳ ಅಧಿನಿಯಮ, 1949ರ 45-ಬಿ ಪ್ರಕರಣದ ಮೇರೆಗೆ ಇರುವಲ್ಲಿ</td><td>ಒಂದು ನೂರು ರೂಪಾಯಿಗಳು</td></tr>
<tr><td></td><td>(3) ಅಪೀಲು, ದಂಡ ಪ್ರಕ್ರಿಯಾ ಸಂಹಿತೆ, 1898ರ 411-ಎ ಪ್ರಕರಣದ ಮೇರೆಗೆ ಇರುವಲ್ಲಿ,</td><td>ಐದು ರೂಪಾಯಿಗಳು</td></tr>
<tr><td></td><td>(iv) ಬೇರೆ ಯಾವುದೇ ಅಧಿನಿಯಮಿತಿಯ ಮೇರೆಗೆ ನ್ಯಾಯಾಲಯ ಫೀಜು ವಿಧಿಸಲಾಗದಿರುವುದಕ್ಕೆ ಸಂಬಂಧಿಸಿದಂತೆ ಅಪೀಲು ಮಾಡಲು ಇರುವ ಶಾಸನಬದ್ಧ ಹಕ್ಕಿಗನುಸಾರವಾಗಿ ಸರ್ಕಾರಕ್ಕೆ ಸಲ್ಲಿಸಿದಾಗ.</td><td>[1][ಹತ್ತು ರೂಪಾಯಿಗಳು][1]</td></tr>
<tr><td colspan="3">1. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.</td></tr>
<tr><td>4.</td><td>ಮಧ್ಯಸ್ಥಿಕೆ ಅಧಿನಿಯಮ, 1940ರ 39ನೇ ಪ್ರಕರಣದ ಮೇರೆಗೆ ಅಪೀಲು ವಿವರಣಪತ್ರ-</td><td></td></tr>
</table>

| | | |
|---|---|---|
| | (i) ಅಧಿಕಾರವ್ಯಾಪ್ತಿಗಾಗಿನ ಮೌಲ್ಯವು 5000 ರೂ. ಗಳಿಗೆ ಮೀರದಿದ್ದ ಸಂದರ್ಭದಲ್ಲಿ.<br>[1][(iಎ) ಅಧಿಕಾರವ್ಯಾಪ್ತಿಗಾಗಿನ ಮೌಲ್ಯವು 5000 ರೂಪಾಯಿಗಳಿಗೆ ಮೀರಿದ ಆದರೆ 50,000 ರೂಪಾಯಿಗಳಿಗೆ ಮೀರದ ಸಂದರ್ಭದಲ್ಲಿ. | ಹದಿನೈದು ರೂಪಾಯಿಗಳು<br>ಐವತ್ತು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |
| | (ii) ಬೇರೆ ಯಾವುದೇ ಸಂದರ್ಭದಲ್ಲಿ | [1][ಒಂದು ನೂರ ಐವತ್ತು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| 5. | ಡಿಕ್ರಿಯಾಗಿರದ ಅಥವಾ ಅದರ ಬಲವನ್ನು ಹೊಂದಿರದ ತೀರ್ಪಿನ ಅಥವಾ ಆದೇಶದ ಪ್ರತಿ ಅಥವಾ ಭಾಷಾಂತರ. | ಒಂದು ರೂಪಾಯಿ |
| 6. | ಕ್ರಿಮಿನಲ್ ನ್ಯಾಯಾಲಯದ ತೀರ್ಪಿನ ಅಥವಾ ಆದೇಶದ ಪ್ರತಿ ಅಥವಾ ಭಾಷಾಂತರ. | ಐವತ್ತು ನಯಾಪೈಸೆ |
| 7. | ಡಿಕ್ರಿಯ ಅಥವಾ ಡಿಕ್ರಿಯ ಬಲ ಹೊಂದಿರುವ ಆದೇಶದ ಪ್ರತಿ, ಉಚ್ಚ ನ್ಯಾಯಾಲಯವಲ್ಲದ ಬೇರೆ ಯಾವುದೇ ನ್ಯಾಯಾಲಯವು ಅಂಥ ಡಿಕ್ರಿ ಅಥವಾ ಆದೇಶವನ್ನು ಮಾಡಿದಾಗ.<br>ಅಂಥ ಡಿಕ್ರಿ ಅಥವಾ ಆದೇಶವನ್ನು ಉಚ್ಚ ನ್ಯಾಯಾಲಯವು ಮಾಡಿದಾಗ. | ಒಂದು ರೂಪಾಯಿ<br>ನಾಲ್ಕು ರೂಪಾಯಿಗಳು |
| 8. | ಸ್ಟಾಂಪುಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಪ್ರಕಾರ ಸ್ಟಾಂಪು ಶುಲ್ಕಕ್ಕೆ ಹೊಣೆಯಾದ ಯಾವುದೇ ಮೂಲ ದಸ್ತಾವೇಜನ್ನು ದಾವೆಯ ಅಥವಾ ವ್ಯವಹರಣೆಯ ಪಕ್ಷಕಾರನು ಹಿಂತೆಗೆದುಕೊಂಡು ಅದರ ಬದಲು ಇಟ್ಟ ಪ್ರತಿ.<br>(ಎ) ಮೂಲ ಪ್ರತಿಯ ಮೇಲೆ ವಿಧಿಸತಕ್ಕ ಸ್ಟಾಂಪು ಶುಲ್ಕವು ಒಂದು ರೂಪಾಯಿಯನ್ನು ಮೀರದಿದ್ದಾಗ. | ಮೂಲ ಪ್ರತಿಯ ಮೇಲೆ ವಿಧಿಸತಕ್ಕ ಶುಲ್ಕದ ಮೊಬಲಗು. |

| | | |
|---|---|---|
| | (ಬಿ) ಬೇರೆ ಯಾವುದೇ ಪ್ರಕರಣದಲ್ಲಿ. | ಒಂದು ರೂಪಾಯಿ ಮತ್ತು ಇಪ್ಪತ್ತೈದು ನಯಾಪೈಸೆ. |
| 9. | ಈ ಅಧಿನಿಯಮದ ಮೂಲಕ ಅನ್ಯಥಾ ಉಪಬಂಧಿಸದೆ ಇದ್ದಲ್ಲಿ, ಯಾವುದೇ ರೆವಿನ್ಯೂ ಅಥವಾ ನ್ಯಾಯಿಕ ವ್ಯವಹರಣೆಗಳ ಅಥವಾ ಆದೇಶದ ಪ್ರತಿ ಅಥವಾ ಯಾವುದೇ ನ್ಯಾಯಾಲಯದಿಂದ ಅಥವಾ 2[ಸರ್ಕಾರಿ ಕಚೇರಿ]2ಯಿಂದ ಪಡೆಯಲಾದ ಯಾವುದೇ ಲೆಕ್ಕ ಪತ್ರದ, ತಃಖ್ತೆಯ, ವರದಿಯ 1[ಆದೇಶ]1ದ ಅಥವಾ ಅದೇ ರೀತಿಯ - ಪ್ರತಿ ಮುನ್ನೂರಾ ಅರವತ್ತು ಪದಗಳಿಗೆ ಅಥವಾ ಮುನ್ನೂರ ಅರವತ್ತು ಪದಗಳ ಭಾಗಕ್ಕೆ. | ಐವತ್ತು ನಯಾಪೈಸೆ |

1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| 4[3[2[1[10 | (ಎ) ಸರ್ಕಾರದೊಡನೆ ವ್ಯವಹಾರ ಹೊಂದಿರುವ ಯಾರೇ ವ್ಯಕ್ತಿಯು, ಅಬಕಾರಿ ಅಥವಾ ಪಾನ ನಿರೋಧ ಇಲಾಖೆಯ ಯಾರೇ ಅಧಿಕಾರಿಗೆ ಅಥವಾ ಯಾರೇ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸುವ ಅರ್ಜಿ ಅಥವಾ ಮನವಿ ಮತ್ತು ಅಂಥ ಅರ್ಜಿಯ ವಸ್ತು ವಿಷಯವು, ಆ ವ್ಯವಹಾರಗಳಿಗೆ ಮಾತ್ರವೇ ಸಂಬಂಧಿಸಿರುವಾಗ; | 1[ಒಂದು ರೂಪಾಯಿ]1 |

1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| | (ಬಿ) ಹಂಗಾಮಿಯಾಗಿ, ಕಂದಾಯ ವ್ಯವಸ್ಥೆ ಮಾಡಿದ ಭೂಮಿಯನ್ನು ಸರ್ಕಾರದೊಡನೆ ಮಾಡಿಕೊಂಡ ನೇರ ವಚನಬಂಧ ಪತ್ರದ ಮೇರೆಗೆ ಹೊಂದಿರುವ ಯಾರೇ ವ್ಯಕ್ತಿಯು, ಭೂಕಂದಾಯದ ಯಾರೇ ಅಧಿಕಾರಿಗೆ ಸಲ್ಲಿಸಿದ ಅರ್ಜಿ ಅಥವಾ ಮನವಿ; ಇಂಥ ಅರ್ಜಿಯ ಅಥವಾ | 1[ಒಂದು ರೂಪಾಯಿ]1 |

| | | |
|---|---|---|
| | ಮನವಿಯ ವಸ್ತು ವಿಷಯವು ಅಂಥ ವಚನಬಂಧ ಪತ್ರಕ್ಕೆ ಮಾತ್ರವೇ ಸಂಬಂಧಿಸಿರುವಾಗ; | |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಸಿ) | ಯಾವುದೇ ಸ್ಥಳದ ಸಂರಕ್ಷಣೆಗೆ ಅಥವಾ ಸುಧಾರಣೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಅಧಿನಿಯಮದ ಮೇರೆಗೆ ಇರುವ ಯಾವುದೇ ಪೌರನಿಗಮ, ಪುರಸಭೆ, ನೈರ್ಮಲ್ಯ ಮಂಡಲಿಗೆ, ಅಧಿಸೂಚಿತ ಪ್ರದೇಶದ ಸಮಿತಿಗೆ, ಪಟ್ಟಣ ಪ್ರದೇಶ ಸಮಿತಿಗೆ, ಕಮೀಷನರ್ ಅವರಿಗೆ, ಕಾರ್ಯನಿರ್ವಾಹಕ ಅಧಿಕಾರಿಗೆ, ಮುಖ್ಯ ಅಧಿಕಾರಿಗೆ, ಕಾರ್ಯದರ್ಶಿಗೆ, ಅಧ್ಯಕ್ಷರಿಗೆ ಅಥವಾ ಚೇರ್ಮನ್‌ಗೆ ಅರ್ಜಿ ಅಥವಾ ಮನವಿ.- ಅರ್ಜಿ ಅಥವಾ ಮನವಿಯು ಅಂಥ ಸಂರಕ್ಷಣೆಗೆ ಅಥವಾ ಸುಧಾರಣೆಗೆ ಮಾತ್ರ ಸಂಬಂಧಿಸಿದ್ದರೆ, | [1][ಒಂದು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಡಿ) | ದರಖಾಸ್ತಿನ ಮೇಲೆ ಭೂಮಿಯ ಮಂಜೂರಾತಿಗೆ ಸಂಬಂಧಿಸಿದಂತೆ, ಯಾರೇ ಭೂ ಕಂದಾಯದ ಅಧಿಕಾರಿಗೆ ಸಲ್ಲಿಸಲಾದ ಅರ್ಜಿ ಅಥವಾ ಮನವಿ ಪತ್ರ. | [1][ಒಂದು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಇ) | ಕೃಷಿ ಅಥವಾ ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯ ಗೇಣಿಗೆ ಸಂಬಂಧಿಸಿದಂತೆ ಡೆಪ್ಯುಟಿ ಕಮೀಷನರ್ ಅವರಿಗೆ ಅರ್ಜಿ. | [1][ಎರಡು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಎಫ್) | ಗೇಣಿಯ ಅವಧಿಯ ವಿಸ್ತರಣೆಗಾಗಿ ಅರಣ್ಯ ಗುತ್ತಿಗೆದಾರನಿಂದ ಅರಣ್ಯ ಅಧಿಕಾರಿಗೆ ಅರ್ಜಿ-<br><br>(i) ಗೇಣಿ ವಸ್ತು ವಿಷಯ ಮೌಲ್ಯವು 5000 ರೂ. ಅಥವಾ ಕಡಿಮೆ ಇದ್ದರೆ. | [1][ಇಪ್ಪತ್ತೈದು ರೂಪಾಯಿಗಳು][1] |

| | | |
|---|---|---|
| | (ii) ಇಂಥ ಮೌಲ್ಯವು 5000 ರೂ. ಗಳಿಗೆ ಮೀರಿದ್ದರೆ, 5000 ರೂ.ಗಳಿಗೆ ಮೀರಿದ ಪ್ರತಿ 1000 ರೂ.ಗೆ ಅಥವಾ ಅದರ ಭಾಗಕ್ಕೆ. | [1][ಐದು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಜಿ) | ಭಾರತದ ಹೊರಗಡೆ ಉಪಯೋಗಿಸಲು ಉದ್ದೇಶಿಸಿದ ಖಾಸಗಿ ದಸ್ತಾವೇಜುಗಳ ಅನುಪ್ರಮಾಣಕ್ಕಾಗಿ ಅರ್ಜಿ. | [1][ಹತ್ತು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಎಚ್) | ಅವಧಿ ಮೀರಿದ ಠೇವಣಿಗೆ ಸಂಬಂಧಿಸಿದಂತೆ, ಮೊಬಲಗು ಸರ್ಕಾರಕ್ಕೆ ಸೇರಿಹೋದ ದಿನಾಂಕದ ತರುವಾಯ ಆರು ತಿಂಗಳುಗಳ ಬಳಿಕ ಸಲ್ಲಿಸಿದ ಅರ್ಜಿ.<br>(i)ಠೇವಣಿಯ ಮೊಬಲಗು 50 ರೂ, ಮೀರದಿದ್ದಾಗ.<br>(ii) ಠೇವಣಿ ಮೊಬಲಗು 50 ರೂ. ಮೀರಿದ್ದು, ಆದರೆ ಒಂದು ಸಾವಿರ ರೂಪಾಯಿಗಳನ್ನು ಮೀರದಿದ್ದಾಗ<br>(iii)ಅದು ಒಂದು ಸಾವಿರ ರೂಪಾಯಿಗಳನ್ನು ಮೀರಿರುವಾಗ | ಒಂದು ರೂಪಾಯಿ<br>ಎರಡು ರೂಪಾಯಿಗಳು<br>ನಾಲ್ಕು ರೂಪಾಯಿ |
| (ಐ) | ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯ ಅಥವಾ ಮನವಿ ಮತ್ತು ಈ ಮುಂದಿನವುಗಳಿಗಾಗಿ ಅನ್ಯಥಾ ಉಪಬಂಧಿಸದೆ ಇದ್ದಲ್ಲಿ,-<br>(i) ಕಾನೂನಿನಿಂದ ಅಥವಾ ಕಾನೂನಿನ ಬಲ ಹೊಂದಿರುವ ನಿಯಮದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಅಥವಾ ಚಲಾಯಿಸದಿರುವುದು ಅದರಲ್ಲಿ ಅಂತರ್ಗತವಾಗಿರುವಾಗ;<br>(ii) ಬೇರೆ ಸಂದರ್ಭಗಳಲ್ಲಿ. | ನಾಲ್ಕು ರೂಪಾಯಿಗಳು<br>ಎರಡು ರೂಪಾಯಿ ಐವತ್ತು ಪೈಸೆ. |
| (ಜೆ) | ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣಕ್ಕೆ ಅಥವಾ ಡಿವಿಜನಲ್ ಕಮೀಷನರ್ ಅವರಿಗೆ ಅಥವಾ ಮುಖ್ಯ ನಿರ್ವಾಹಕ ಪ್ರಾಧಿಕಾರಿಗೆ ಸಲ್ಲಿಸಿದ ಅರ್ಜಿ ಅಥವಾ ಮನವಿ | ನಾಲ್ಕು ರೂಪಾಯಿಗಳು |

| | | |
|---|---|---|
| | ಮತ್ತು ಈ ಮುಂದಿನವುಗಳಿಗಾಗಿ ಅನ್ಯಥಾ ಉಪಬಂಧಿಸದೆ ಇದ್ದಲ್ಲಿ,- (i) ಕಾನೂನಿನಿಂದ ಅಥವಾ ಕಾನೂನಿನ ಬಲ ಹೊಂದಿರುವ ನಿಯಮದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಅಥವಾ ಚಲಾಯಿಸದಿರುವುದು ಅದರಲ್ಲಿ ಅಂತರ್ಗತವಾಗಿರುವಾಗ; (ii) ಬೇರೆ ಸಂದರ್ಭಗಳಲ್ಲಿ; | ಎರಡು ರೂಪಾಯಿ ಐವತ್ತು ಪೈಸೆ. |
| (ಕೆ) | ಕೃಷಿಯೇತರ ಉದ್ದೇಶಗಳಿಗೆ ಸಂಬಂಧಿಸಿದಂತೆ ಕೃಷಿ ಭೂಮಿಯ ಬಳಕೆಗಾಗಿ ಅನುಮತಿ ಕೋರಿ ಮನವಿ. | [1][ಹತ್ತು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಎಲ್) | (ಐ) ಅಥವಾ (ಜೆ) ಖಂಡಗಳ ಅಡಿಯಲ್ಲಿ ಬಾರದಿರುವ ಅರ್ಜಿ ಅಥವಾ ಮನವಿಯನ್ನು ಸರ್ಕಾರದ ಅಧಿಕಾರಿಗೆ ಅಥವಾ ಸರ್ಕಾರದ ಕಚೇರಿಯಲ್ಲಿ ಸಲ್ಲಿಸಿದಾಗ ಮತ್ತು ಈ ಮುಂದಿನವುಗಳಿಗಾಗಿ ಅನ್ಯಥಾ ಉಪಬಂಧಿಸದೆ ಇದ್ದಲ್ಲಿ,- (i) ಕಾನೂನಿನಿಂದ ಅಥವಾ ಕಾನೂನಿನ ಬಲ ಹೊಂದಿದ ನಿಯಮದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಅಥವಾ ಚಲಾಯಿಸದಿರುವುದು, ಅದರಲ್ಲಿ ಅಂತರ್ಗತವಾಗಿರುವಾಗ; (ii) ಇತರೆ ಸಂದರ್ಭದಲ್ಲಿ; | [5][ಎರಡು ರೂಪಾಯಿಗಳು][5] [5][ಒಂದು ರೂಪಾಯಿ][5]][1]][2]][3]][4] |

1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1966ರ ಅಧಿನಿಯಮ 27ರ ಮೂಲಕ ದಿನಾಂಕ ………..(ಅಧಿಸೂಚನೆ ಲಭ್ಯವಿಲ್ಲ) ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1976ರ ಅಧಿನಿಯಮ 80ರ ಅನುಚ್ಛೇದ 10ರ ಮೂಲಕ ದಿನಾಂಕ 07.12.1976 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
5. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| 11.(ಎ) | ಮೂಲ ಅಧಿಕಾರವ್ಯಾಪ್ತಿಯನ್ನುಳ್ಳ ಮುಖ್ಯ ಸಿವಿಲ್ ನ್ಯಾಯಾಲಯವನ್ನು ಹೊರತುಪಡಿಸಿ, ಬೇರೆ ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಅಥವಾ ಯಾವುದೇ ಲಘು ವಿವಾದಗಳ ನ್ಯಾಯಾಲಯಕ್ಕೆ ಅಥವಾ ಡೆಪ್ಯೂಟಿ ಕಮೀಷನರರಿಗೆ ಅಥವಾ ಬೇರೆ ರೆವಿನ್ಯೂ ಅಧಿಕಾರಿಗೆ ಅಥವಾ ಸರ್ಕಾರಿ ಅಧಿಕಾರಿಗೆ, ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು, ಐವತ್ತು ರೂಪಾಯಿಗಿಂತ ಕಡಿಮೆ ಇರುವ ಯಾವುದೇ ದಾವೆಗೆ ಅಥವಾ ಮೊಕದ್ದಮೆಗೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿ ಅಥವಾ ಮನವಿ | [1][ಒಂದು ರೂಪಾಯಿ][1] |
| 1. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಬಿ) | ಯಾವುದೇ ನ್ಯಾಯಾಲಯಕ್ಕೆ ಅಥವಾ ಯಾವುದೇ [2][ಮಂಡಲಿಗೆ, ಶಾಸನಬದ್ಧ ಪ್ರಾಧಿಕಾರಿಗೆ ಅಥವಾ ಸರ್ಕಾರಿ ಅಧಿಕಾರಿಗೆ][2], ಆ ನ್ಯಾಯಾಲಯವು, ಮಂಡಲಿಯು, [3][ಶಾಸನಬದ್ಧ ಪ್ರಾಧಿಕಾರಿ][3]ಯು ಅಥವಾ ಅಧಿಕಾರಿಯು, ಹೊರಡಿಸಿದ ಯಾವುದೇ ತೀರ್ಪಿನ ಡಿಕ್ರಿಯ ಅಥವಾ ಆದೇಶದ ಅಥವಾ ಅಂಥ ನ್ಯಾಯಾಲಯದಲ್ಲಿ, ಮಂಡಲಿಯಲ್ಲಿ [3][ಶಾಸನಬದ್ಧ ಪ್ರಾಧಿಕಾರಿಯ][3] ಬಳಿಯಲ್ಲಿ, ಅಥವಾ ಕಛೇರಿಯಲ್ಲಿ ದಾಖಲೆಯಲ್ಲಿರುವ ಬೇರೆ ಯಾವುದೇ ದಸ್ತಾವೇಜಿನ ಪ್ರತಿಯನ್ನು ಅಥವಾ ಭಾಷಾಂತರವನ್ನು ಪಡೆಯುವ ಉದ್ದೇಶಕ್ಕಾಗಿ ಹಾಜರುಪಡಿಸಿದ ಅರ್ಜಿ ಅಥವಾ ಮನವಿ. | [1][ಒಂದು ರೂಪಾಯಿ][1] |
| 1. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>3. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |

| | | |
|---|---|---|
| (ಸಿ) | ಬೇರೊಂದು ನ್ಯಾಯಾಲಯದಿಂದ ದಾಖಲೆಗಳನ್ನು ತರಿಸಬಹುದೆಂದು ಯಾವುದೇ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿ, ಆ ನ್ಯಾಯಾಲಯದ ಅರ್ಜಿಗೆ ಮಂಜೂರಾತಿ ನೀಡಿದಾಗ ಮತ್ತು ಅಂಥ ದಾಖಲೆಗಳ ಸಾಗಾಣಿಕೆಯನ್ನು ಅಂಚೆ ಮೂಲಕ ಮಾಡಲಾಗಿರುವುದೆಂದು ಅಭಿಪ್ರಾಯಪಟ್ಟಾಗ. | ಅರ್ಜಿಯ ಮೇಲೆ ವಿಧಿಸಬಹುದಾದ ಫೀಜಿನ ಜೊತೆಗೆ ಒಂದು ರೂಪಾಯಿ. |
| (ಡಿ) | ದಂಡ ಪ್ರಕ್ರಿಯಾ ಸಂಹಿತೆ, 1898ರ ಮೇರೆಗೆ ಯಾವ ಅಪರಾಧಕ್ಕಾಗಿ ಪೊಲೀಸ್ ಅಧಿಕಾರಿಗಳು ವಾರಂಟು ಇಲ್ಲದೆ ಬಂಧಿಸಿ ಯಾವುದೇ ಕ್ರಿಮಿನಲ್ ನ್ಯಾಯಾಲಯಕ್ಕೆ ಹಾಜರುಪಡಿಸಬಹುದೋ, ಆ ಅಪರಾಧವನ್ನುಳಿದು, ಬೇರೆ ಅಪರಾಧದ ಫಿರ್ಯಾದನ್ನು ಅಥವಾ ದೋಷಾರೋಪವನ್ನು ಒಳಗೊಂಡ ಅರ್ಜಿ ಅಥವಾ ಮನವಿ. | ಒಂದು ರೂಪಾಯಿ |
| (ಇ) | ನ್ಯಾಯಾಲಯದಲ್ಲಿ ಅಥವಾ ಡೆಪ್ಯುಟಿ ಕಮೀಷನರ್ ಅಥವಾ ಇತರೆ ರೆವಿನ್ಯೂ ಅಧಿಕಾರಿಯ ಕಛೇರಿಯಲ್ಲಿ ಕಂದಾಯವನ್ನು ಅಥವಾ ಗೇಣಿಯನ್ನು ಠೇವಣಿ ಮಾಡಲು ಅರ್ಜಿ ಅಥವಾ ಮನವಿ. | 2[ಒಂದು ರೂಪಾಯಿ]2 |

1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| (ಎಫ್) | ಭೂ ಮಾಲಿಕನು ತನ್ನ ಗೇಣಿದಾರನಿಗೆ ಸಲ್ಲಿಸಬಹುದಾದ ಪರಿಹಾರದ ಮೊಬಲಗಿನ ಬಗ್ಗೆ ನ್ಯಾಯಾಲಯದ ನಿರ್ಧರಣೆಗೆ ಸಂಬಂಧಿಸಿದಂತೆ ಅರ್ಜಿ ಅಥವಾ ಮನವಿ. | 1[2[ಒಂದು ರೂಪಾಯಿ]2]1 |

1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| (ಜಿ) | ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದರ ಹೊರತು, ನ್ಯಾಯಾಲಯಕ್ಕೆ ಅಥವಾ ಡೆಪ್ಯುಟಿ ಕಮೀಷನರ್ ಅವರಿಗೆ ಅಥವಾ ಯಾರೇ ರೆವಿನ್ಯೂ ಅಧಿಕಾರಿಗೆ ಅಥವಾ ಡೆಪ್ಯುಟಿ ಕಮೀಷನರ್ ಅವರಿಗೆ | 1[ಒಂದು ರೂಪಾಯಿ]1 |

<table>
<tr><td></td><td>ಸಮಾನವಾದ ಅಥವಾ ಅಧೀನ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸರ್ಕಾರಿ ಅಧಿಕಾರಿಗೆ ಅಥವಾ ಯಾರೇ ಮ್ಯಾಜಿಸ್ಟ್ರೇಟನು ಕಾರ್ಯನಿರ್ವಾಹಕ ಸಾಮರ್ಥ್ಯವನ್ನು ಹೊಂದಿರುವಾಗ ಆತನಿಗೆ ಸಲ್ಲಿಸಿದ ಅರ್ಜಿ ಅಥವಾ ಮನವಿ.</td><td></td></tr>
<tr><td colspan="3">1. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td>[1][(ಎಚ್)</td><td>ಯಾವುದೇ ದಾವೆಗೆ ಅಥವಾ ವ್ಯವಹರಣೆಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಗೆ ಸಂಬಂಧಿಸಿದ ಅರ್ಜಿಯನ್ನು,-<br>(i) ಯಾವುದೇ ನ್ಯಾಯಾಲಯಕ್ಕೆ ಸಲ್ಲಿಸಿದಾಗ;<br>(ii) ಯಾವುದೇ ಇತರೆ ಪ್ರಾಧಿಕಾರಿಗೆ ಸಲ್ಲಿಸಿದಾಗ.</td><td>ಹತ್ತು ರೂಪಾಯಿಗಳು<br>ಐದು ರೂಪಾಯಿಗಳು</td></tr>
<tr><td>(ಎಚ್ಎ)</td><td>ಯಾವುದೇ ದಾವೆಗೆ ಅಥವಾ ವ್ಯವಹರಣೆಗೆ ಸಂಬಂಧಿಸಿದಂತೆ ತೀರ್ಪಿಗಿಂತ ಮುಂಚೆ ಬಂಧನದ ಅಥವಾ ಜಪ್ತಿಗೆ ಸಂಬಂಧಿಸಿದ ಮನವಿಯನ್ನು ಉಚ್ಚ ನ್ಯಾಯಾಲಯವಲ್ಲದೆ ಬೇರೆ ಸಿವಿಲ್ ನ್ಯಾಯಾಲಯಕ್ಕೆ ಅಥವಾ ರೆವಿನ್ಯೂ ನ್ಯಾಯಾಲಯಕ್ಕೆ ಸಲ್ಲಿಸಿದಾಗ</td><td>ಐದು ರೂಪಾಯಿಗಳು][1]</td></tr>
<tr><td colspan="3">1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td>(ಐ)</td><td>ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 58ನೇ ನಿಯಮದ ಮತ್ತು ಕ್ರಮಾದೇಶ XXI ರ ಅಡಿಯಲ್ಲಿನ ಅನುಬಂಧಿತವಾದ ಕ್ಲೇಮುಗಳಿಗೆ ಸಂಬಂಧಿಸಿದಂತೆ ಅರ್ಜಿಯನ್ನು -<br>[1][(i) ರೆವಿನ್ಯೂ ನ್ಯಾಯಾಲಯದಲ್ಲಿ ಸಲ್ಲಿಸಿದಾಗ<br>(ii) ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸಿದಾಗ</td><td>ಐದು ರೂಪಾಯಿಗಳು.<br>ಹತ್ತು ರೂಪಾಯಿಗಳು.][1]</td></tr>
<tr><td colspan="3">1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
</table>

| | | |
|---|---|---|
| (ಜೆ) | ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 47ನೇ ಪ್ರಕರಣದ ಅಡಿಯಲ್ಲಿ ಹಾಗೂ 90ನೇ ನಿಯಮದ XXIನೇ ಕ್ರಮಾದೇಶದ ಅಡಿಯಲ್ಲಿನ ಅರ್ಜಿಯನ್ನು ಅಥವಾ ಮನವಿಯನ್ನು ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸಿದಾಗ. | [1][ಐದು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| [1][(ಜೆಎ) | ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 1 ಹಾಗೂ 2ನೇ ನಿಯಮಗಳ 17ನೇ ಕ್ರಮಾದೇಶದ ಅಡಿಯಲ್ಲಿನ ಅರ್ಜಿಯನ್ನು ಅಥವಾ ಮನವಿಯನ್ನು<br>(i) ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದಾಗ.<br>(ii) ಯಾವುದೇ ಇತರೆ ನ್ಯಾಯಾಲಯದಲ್ಲಿ ಸಲ್ಲಿಸಿದಾಗ. | ಹತ್ತು ರೂಪಾಯಿಗಳು.<br>ಐದು ರೂಪಾಯಿಗಳು.][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |
| (ಕೆ) | ಭಾರತೀಯ ನ್ಯಾಸಗಳ ಅಧಿನಿಯಮ, 1882 ರ 34, 72, 73 ಮತ್ತು 74ನೇ ಪ್ರಕರಣಗಳ ಮೇರೆಗಿನ ಅರ್ಜಿ ಅಥವಾ ಮನವಿ. | ಐದು ರೂಪಾಯಿ |
| (ಎಲ್) | (i) ಭಾರತದಾದ್ಯಂತ ಪರಿಣಾಮಕಾರಿಯಾಗಿರ ಬೇಕಾಗಿರುವ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಅಥವಾ ಅವುಗಳ ರದ್ದಿಯಾತಿಗೆ ಸಂಬಂಧಿಸಿದ ಅರ್ಜಿ<br>(ii) (i)ನೇ ಖಂಡದಡಿಯಲ್ಲಿ ಒಳಪಡದಿರುವ ಪ್ರೊಬೇಟಿನ ಅಥವಾ ಆಡಳಿತ ಅಧಿಕಾರ ಪತ್ರಗಳ ಅಥವಾ ಅವುಗಳ ರದ್ಧತಿಗೆ ಸಂಬಂಧಿಸಿದ ಅರ್ಜಿ ಅಥವಾ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925ರ ಭಾಗ X ಅಥವಾ 1927ರ ಮುಂಬಯಿ ವಿನಿಯಮ VIII ರ ಮೇರೆಗಿನ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಅರ್ಜಿ,- | ಇಪ್ಪತ್ತೈದು ರೂಪಾಯಿಗಳು<br>[1][ಐದು ರೂಪಾಯಿಗಳು][1]<br>[2][ಹತ್ತು ರೂಪಾಯಿಗಳು.][2] |

<table>
<tr><td></td><td>(1) ಎಸ್ಟೇಟಿನ ಮೊಬಲಗು ಅಥವಾ ಮೌಲ್ಯವು 2000 ರೂ.ಗಳಿಗೆ ಮೀರದಿದ್ದರೆ,<br>1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>[1][(2) ಮೌಲ್ಯವು 2000 ರೂ. ಮೀರಿದ್ದು, ಆದರೆ 10,000 ರೂ.ಗಳನ್ನು ಮೀರದಿದ್ದರೆ;<br>(3) ಮೊಬಲಗು ಅಥವಾ ಮೌಲ್ಯವು ಹತ್ತು ಸಾವಿರ ರೂಪಾಯಿಗಳನ್ನು ಮೀರಿದ್ದರೆ:<br>ಪರಂತು, ಆಕ್ಷೇಪಣಾ ಪತ್ರವು ದಾಖಲಾಗಿ ಅರ್ಜಿಯನ್ನು ದಾವೆಯಂತೆ ನೋಂದಾಯಿಸಲಾಗಿದ್ದರೆ, ಎಸ್ಟೇಟು ಮಾರುಕಟ್ಟೆ ಮೌಲ್ಯದ ಮೇಲೆ ಅನುಸೂಚಿ Iರ ಅನುಚ್ಛೇದ Iರಲ್ಲಿ ನಿಯಮಿಸಲಾದ ಫೀಜಿನ ಪ್ರಮಾಣದ ಅರ್ಧದಲ್ಲಿ, ಈಗಾಗಲೇ ಅರ್ಜಿಯ ಮೇಲೆ ಸಲ್ಲಿಸಲಾದ ಫೀಜನ್ನು ಕಳೆದ ಬಳಿಕ ಉಳಿಯುವಷ್ಟು ವಿಧಿಸಲ್ಪಡತಕ್ಕದ್ದು.][1]</td><td>[2][ಇಪ್ಪತ್ತು ರೂಪಾಯಿಗಳು][2]</td></tr>
<tr><td colspan="3">1. 1976ರ ಅಧಿನಿಯಮ 80ರ ಮೂಲಕ ದಿನಾಂಕ 07.12.1976 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td>(ಎಂ)</td><td>ಅನ್ಯಥಾ ಉಪಬಂಧಿಸಿರದ ಮೂಲ ಮನವಿಗಳನ್ನು-<br>(i) ಉಚ್ಚ ನ್ಯಾಯಾಲಯಕ್ಕೆ ಅಧೀನವಾದ ಯಾವುದೇ ನ್ಯಾಯಾಲಯದಲ್ಲಿ ದಾಖಲು ಮಾಡಿದಾಗ.<br>(ii) ಉಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿದಾಗ.</td><td>[1][ಎರಡು ರೂಪಾಯಿಗಳು][1]<br><br>[1][ಹನ್ನೆರಡು ರೂಪಾಯಿಗಳು][1]</td></tr>
<tr><td colspan="3">1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.</td></tr>
<tr><td>(ಎನ್)</td><td>ಮಧ್ಯಸ್ಥಿಕೆ ಅಧಿನಿಯಮ, 1940ರ ಮೇರೆಗೆ ಐತೀರ್ಪನ್ನು ತಳ್ಳಿಹಾಕುವುದಕ್ಕಾಗಿ ಅರ್ಜಿ-</td><td></td></tr>
</table>

| | | |
|---|---|---|
| | [1][1. ತೀರ್ಪಿನ ವಸ್ತು ವಿಷಯದ ಮೌಲ್ಯವು 500 ರೂಪಾಯಿಗಳಿಗೆ ಮೀರದಿದ್ದರೆ<br>2. ಇಂಥ ಮೌಲ್ಯವು 5000 ರೂ.ಗಳನ್ನು ಮೀರಿದ್ದರೆ | ಇಪ್ಪತ್ತೈದು ರೂಪಾಯಿಗಳು<br>ಒಂದು ನೂರು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಒ) | ಮಧ್ಯಸ್ಥಿಕೆ ಅಧಿನಿಯಮ 1940ರ 14ನೇ ಅಥವಾ 20ನೇ ಪ್ರಕರಣದ ಮೇರೆಗೆ ಐತೀರ್ಪು ದಾಖಲು ಮಾಡುವ ನಿರ್ದೇಶನಕ್ಕೆ ಸಂಬಂಧಿಸಿದ ಅಥವಾ ಕರಾರನ್ನು ದಾಖಲುಮಾಡುವ ಆದೇಶಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಮತ್ತು ವಿದೇಶೀಯ ಐತೀರ್ಪುಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು-<br>1.ಮುನ್ಸೀಫ್, [2][XXX][2] ನ್ಯಾಯಾಲಯಕ್ಕೆ ಸಲ್ಲಿಸಿದಾಗ<br>2. ಇತರೆ ಯಾವುದೇ ನ್ಯಾಯಾಲಯಕ್ಕೆ ಸಲ್ಲಿಸಿದಾಗ | [1][ಐವತ್ತು ರೂಪಾಯಿಗಳು][1]<br>[1][ಎರಡು ನೂರು ರೂಪಾಯಿ][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ ದಿನಾಂಕ 01.11.1973 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ. | | |
| [1][(ಪಿ) | [1][XXX][1] | |
| 1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ. | | |
| (ಕ್ಯೂ) | ದಾವೆಯಿಂದ ಅಥವಾ ವ್ಯವಹರಣೆಯಿಂದ ಉದ್ಭವಿಸುವ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 115ನೇ ಪ್ರಕರಣದ ಮೇರೆಗೆ ಅಥವಾ ಯಾವುದೇ ಇತರೆ ಅಧಿನಿಯಮದ ಉಪಬಂಧಗಳ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಪುನರೀಕ್ಷಣಾ ಅರ್ಜಿ- | ಐದು ರೂಪಾಯಿಗಳು |

| | | |
|---|---|---|
| | (i) ಪುನರೀಕ್ಷಿಸಲು ಕೋರಲಾದ ಆದೇಶಕ್ಕೆ ಸಂಬಂಧಿಸಿದ ದಾವೆಯ ಅಥವಾ ವ್ಯವಹರಣೆಯ ಮೌಲ್ಯವು 1000 ರೂ.ಗಳನ್ನು ಮೀರದಿದ್ದರೆ.<br>[1][(ii) ಇಂಥ ಮೌಲ್ಯವು 1000 ರೂ.ಗಳನ್ನು ಮೀರಿದ್ದರೆ ಆದರೆ 10,000 ರೂ.ಗಳನ್ನು ಮೀರದಿದ್ದರೆ<br>(iii) ಮೌಲ್ಯವು 10,000 ರೂ.ಗಳನ್ನು ಮೀರಿದ್ದರೆ | ಹದಿನೈದು ರೂಪಾಯಿಗಳು<br>ಇಪ್ಪತ್ತು ರೂಪಾಯಿಗಳು][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| (ಆರ್) | ಕಂಪನಿಗಳ ಅಧಿನಿಯಮ, 1956ರ 391, 439 ಮತ್ತು 522ನೇ ಪ್ರಕರಣಗಳ ಮೇರೆಗೆ ಕಂಪನಿಯ ಸಮಾಪನಕ್ಕೆ ಸಂಬಂಧಿಸಿದ ಮನವಿ. | ಒಂದು ನೂರು ರೂಪಾಯಿ |
| (ಎಸ್) | ಉಚ್ಚ ನ್ಯಾಯಾಲಯಕ್ಕೆ, ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿಯನ್ನು ಅಥವಾ ಸಂವಿಧಾನದ 227ನೇ ಅನುಚ್ಛೇದದ ಮೇರೆಗಿನ ಇತರೆ ರಿಟ್‌ಗೆ ಸಂಬಂಧಿಸಿದ ಮನವಿ. | [1][ಒಂದು ನೂರು ರೂಪಾಯಿಗಳು][1] |
| 1. 1973ರ ಅಧಿನಿಯಮ 3ರ ಮೂಲಕ ದಿನಾಂಕ 25.01.1973 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| [1][(ಎಸ್‌ಎ) | ಭಾರತ ಸಂವಿಧಾನದ 226ನೇ ಅನುಚ್ಛೇದದ (1)ನೇ ಖಂಡದ, 227ನೇ ಅನುಚ್ಛೇದದ ಮತ್ತು 228ನೇ ಅನುಚ್ಛೇದದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ನ್ಯಾಯಾಧೀಶನು ಮಾಡಿದ ಮೂಲ ತೀರ್ಪು, ಡಿಕ್ರಿ ಅಥವಾ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಅಪೀಲು ಮನವಿಗಳು. | ಒಂದು ನೂರು ರೂಪಾಯಿಗಳು][1] |
| 1. 1973ರ ಅಧಿನಿಯಮ 12ನ್ನು ದಿನಾಂಕ: 16.07.1973 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಠ್ಯವು ಅಧಿನಿಯಮದ ಕೊನೆಯಲ್ಲಿದೆ. | | |
| (ಟಿ) | ನಿರ್ದಿಷ್ಟ ಪರಿಹಾರ ಅಧಿನಿಯಮ, 1877ರ 45ನೇ ಪ್ರಕರಣದ ಮೇರೆಗೆ ಅರ್ಜಿ. | ಹತ್ತು ರೂಪಾಯಿಗಳು |

| | | |
|---|---|---|
| (ಯು) | ಉಚ್ಚ ನ್ಯಾಯಾಲಯಕ್ಕೆ [1][ಕರ್ನಾಟಕ ಆಡಳಿತ ನ್ಯಾಯಾಧಿಕರಣಕ್ಕೆ][1] ಸಲ್ಲಿಸಿದ ಮತ್ತು ಅನ್ಯಥಾ ನಿರ್ದಿಷ್ಟವಾಗಿ ಉಪಬಂಧಿಸಿರದ ಅರ್ಜಿ ಅಥವಾ ಮನವಿ. | ಎರಡು ರೂಪಾಯಿಗಳು |
| 1. 1989ರ ಅಧಿನಿಯಮ 5ರ ಮೂಲಕ ದಿನಾಂಕ 09.02.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | | |
| (ವಿ) | ಒಬ್ಬ ವ್ಯಕ್ತಿಯ ಚುನಾವಣೆಯನ್ನು ಪ್ರಶ್ನಿಸಿ ಸಿವಿಲ್ ನ್ಯಾಯಾಲಯಕ್ಕೆ ಅಥವಾ ನ್ಯಾಯಿಕ ಅಧಿಕಾರಿಗೆ ಚುನಾವಣಾ ತಕರಾರು ಅರ್ಜಿ -<br>(i) [1]ತಾಲ್ಲೂಕು ಮಂಡಲಿಯ ಅಥವಾ ಪಂಚಾಯಿತಿಯ ಸದಸ್ಯನ[1] ಪದದ ಸಂಬಂಧದಲ್ಲಿ<br>1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>(ii) [1][ತಾಲ್ಲೂಕು ಮಂಡಲಿಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಅಥವಾ ಪಂಚಾಯಿತಿಯ ಸಭಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಪದದ ಸಂಬಂಧದಲ್ಲಿ][1]<br>1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>(iii) [1][XXX][1] ಪಟ್ಟಣ ಮುನಿಸಿಪಲ್ ಕೌನಿಲ್ ಸದಸ್ಯನ ಸಂಬಂಧದಲ್ಲಿ<br>1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.<br>2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | [2][ಹದಿನೈದು ರೂಪಾಯಿಗಳು][2]<br>[2][ಇಪ್ಪತ್ತೈದು ರೂಪಾಯಿಗಳು][2]<br>[2][ಐವತ್ತು ರೂಪಾಯಿಗಳು][2] |

| | | |
|---|---|---|
| | (iv) [1][ರಾಜ್ಯದಲ್ಲಿನ ಮುನಿಸಿಪಲ್ ಕಾರ್ಪೋರೇಷನ್ನಿನ][1] ಸದಸ್ಯನ ಅಥವಾ ನಗರದ ಮುನಿಸಿಪಲ್ ಕೌನ್ಸಿಲ್, [3][XXX][3] [2][XXX][2] ಸದಸ್ಯನ ಪದದ ಸಂಬಂಧದಲ್ಲಿ<br>1. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>2. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.<br>3. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.<br>(v) [2][[1][ಮುನಿಸಿಪಲ್ ಕಾರ್ಪೋರೇಷನ್ನಿನ][1]][2] ಮೇಯರನ ಅಥವಾ ಡೆಪ್ಯುಟಿ ಮೇಯರ್, ಅಥವಾ ಮುನಿಸಿಪಾಲಿಟಿಯ [3][XXX][3] ಸಭಾಧ್ಯಕ್ಷನ ಪದದ ಸಂಬಂಧದಲ್ಲಿ<br>1. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.<br>2. 1979ರ ಅಧಿನಿಯಮ 21ರ ಮೂಲಕ ದಿನಾಂಕ 31.03.1979 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>3. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ. | [1][ಒಂದು ನೂರು ರೂಪಾಯಿಗಳು][1]<br><br>ಎರಡು ನೂರು ರೂಪಾಯಿ |
| 12. | ನಿರ್ಗತಿಕನೆಂದು ದಾವೆ ಹೂಡಲು ಅನುಮತಿಗಾಗಿ ಅರ್ಜಿ | ಎಪ್ಪತ್ತೈದು ನಯಾಪೈಸೆ |
| 13. | ನಿರ್ಗತಿಕನೆಂದು ಅಪೀಲು ಹೂಡಲು ಅನುಮತಿಗಾಗಿ ಅರ್ಜಿಯನ್ನು,-<br>(ಎ) ಉಚ್ಚ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ<br>(ಬಿ) ಯಾವುದೇ ಇತರೆ ನ್ಯಾಯಾಲಯಕ್ಕೆ ಸಲ್ಲಿಸಿದಾಗ | <br>ಎರಡು ರೂ. ಐವತ್ತು ನಯಾಪೈಸೆ<br>ಒಂದು ರೂ. ಇಪ್ಪತ್ತೈದು ನಯಾಪೈಸೆ |

| | | |
|---|---|---|
| 14. | ದಂಡ ಪ್ರಕ್ರಿಯಾ ಸಂಹಿತೆ, 1898ರ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಯಾವುದೇ ಪ್ರಕರಣದ ಮೇರೆಗೆ, ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಮಾಡಿದ ಆದೇಶದ ಅನುಸಾರ ನೀಡಲಾದ, ಈ ಅಧಿನಿಯಮದ ಮೂಲಕ ಅನ್ಯಥಾ ಉಪಬಂಧಿಸಿರದ, ಮುಚ್ಚಳಿಕೆ ಅಥವಾ ಇತರೆ ಲಿಖಿತ ಪತ್ರ. | ಒಂದು ರೂ. ಇಪ್ಪತ್ತೈದು ನಯಾಪೈಸೆ |
| 15. | ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ದಾಖಲು ಮಾಡಿದಾಗಿನ ಮುಖ್ತ್ಯಾರನಾಮೆಯ ಪ್ರತಿಯೊಂದು ಪ್ರತಿ. | [1][ಎರಡು ರೂಪಾಯಿಗಳು.][1] |
| 1. 1982ರ ಅಧಿನಿಯಮ 13ರ ಮೂಲಕ ದಿನಾಂಕ 01.04.1982 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ. | | |
| 16. | ಮುಖ್ತ್ಯಾರನಾಮೆ ಅಥವಾ ವಕಾಲತ್ತು ನಾಮೆ ಅಥವಾ ವಕೀಲನು, ತನ್ನನ್ನು ಪಕ್ಷಕಾರನ ಪರ ಗೊತ್ತು ಮಾಡಿಕೊಳ್ಳಲಾಗಿದೆಯೆಂದು ಸೂಚಿಸಲು ಅಥವಾ ತಿಳಿಯಪಡಿಸಲು ಅವನು ಸಹಿ ಮಾಡಿದ ಯಾವುದೇ ಕಾಗದ ಪತ್ರ-<br>(ಎ) ಯಾವುದೇ ನ್ಯಾಯಾಲಯಕ್ಕೆ (ಉಚ್ಚ ನ್ಯಾಯಾಲಯ [1][ಅಥವಾ ಕರ್ನಾಟಕ ಆಡಳಿತ ನ್ಯಾಯಾಧಿಕರಣ][1] [2][ಕರ್ನಾಟಕ][2] ರೆವಿನ್ಯೂ ಅಪೀಲು ನ್ಯಾಯಾಧಿಕರಣ ಅಥವಾ ಮಾರಾಟ ತೆರಿಗೆ ಅಪೀಲು ನ್ಯಾಯಾಧಿಕರಣ [3][XXX][3] ಇವುಗಳ ಹೊರತಾಗಿ ಅಥವಾ ಡೆಪ್ಯುಟಿ ಕಮೀಷನರ್‌ರಿಗೆ, ಅಥವಾ [4][ಯಾವುದೇ ಶಾಸನಬದ್ಧ ಅಥವಾ ಇತರೆ ಪ್ರಾಧಿಕಾರಕ್ಕೆ ಅಥವಾ ಯಾರೇ ಅಧಿಕಾರಿಯ][4] ಮುಂದೆ ಸಲ್ಲಿಸಿದಾಗ.<br>1. 1989ರ ಅಧಿನಿಯಮ 5ರ ಮೂಲಕ ದಿನಾಂಕ 09.02.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. | ಒಂದು ರೂಪಾಯಿ<br><br>ಎರಡು ರೂಪಾಯಿಗಳು |

| | | |
|---|---|---|
| | 2. ಕರ್ನಾಟಕ ಕಾನೂನು ಆದೇಶಗಳ ಅಳವಡಿಕೆ 1973ರ ಮೂಲಕ ದಿನಾಂಕ: 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.<br>3. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.<br>4. 1964ರ ಅಧಿನಿಯಮ 10ರ ಮೂಲಕ ದಿನಾಂಕ 05.03.1964 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.<br>(ಬಿ) [1][ಕರ್ನಾಟಕ][1] ರೆವಿನ್ಯೂ ಅಪೀಲು ನ್ಯಾಯಾಧಿಕರಣಕ್ಕೆ ಅಥವಾ [1][ಕರ್ನಾಟಕ][1] ಮಾರಾಟ ತೆರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸಿದಾಗ,<br>1. ಕರ್ನಾಟಕ ಕಾನೂನು ಆದೇಶಗಳ ಅಳವಡಿಕೆ 1973ರ ಮೂಲಕ ದಿನಾಂಕ: 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.<br>(ಸಿ) ಉಚ್ಚ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ<br>[1][(ಸಿಸಿ). ಕರ್ನಾಟಕ ಆಡಳಿತ ನ್ಯಾಯಾಧಿಕರಣಕ್ಕೆ ಹಾಜರುಪಡಿಸಿದಾಗ<br>1. 1989ರ ಅಧಿನಿಯಮ 5ರ ಮೂಲಕ ದಿನಾಂಕ 09.02.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.<br>(ಡಿ) ಸರ್ಕಾರಕ್ಕೆ ಸಲ್ಲಿಸಿದಾಗ | ಮೂರು ರೂಪಾಯಿಗಳು<br>ಮೂರು ರೂಪಾಯಿಗಳು][1]<br>ಮೂರು ರೂಪಾಯಿಗಳು |
| 17. | ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ನ್ಯಾಯಾಲಯದ ಅಭಿಪ್ರಾಯಕ್ಕಾಗಿ ಸೂಚಿಸಿದ ಪ್ರಶ್ನೆಯನ್ನು ಒಳಗೊಂಡಂತೆ ಲಿಖಿತ ಒಪ್ಪಂದ,-<br>i) ವಸ್ತು ವಿಷಯದ ಮೌಲ್ಯವು 5000 ರೂ.ಗೆ ಮೀರದಿದ್ದಲ್ಲಿ<br>ii) ಇತರೆ ಯಾವುದೇ ಸಂದರ್ಭದಲ್ಲಿ | ಹದಿನೈದು ರೂಪಾಯಿಗಳು<br>ಒಂದು ನೂರು ರೂಪಾಯಿಗಳು |
| [1][18. | ಕೇವಿಯಟ್ ಅನ್ನು,-<br>(1) ಭಾರತ ಉತ್ತರಾಧಿಕಾರ ಅಧಿನಿಯಮದ ಮೇರೆಗೆ ಸಲ್ಲಿಸಿದಾಗ | |

| | | |
|---|---|---|
| | (i) ಸಂಬಂಧಪಟ್ಟ ಸ್ವತ್ತಿನ ಮೌಲ್ಯವು ಎರಡು ಸಾವಿರ ರೂಪಾಯಿಗಳಿಗೆ ಮೀರದಿರುವಾಗ. | ಆರು ರೂಪಾಯಿ ಇಪ್ಪತ್ತೈದು ಪೈಸೆ |
| | (ii) ಸಂಬಂಧಪಟ್ಟ ಸ್ವತ್ತಿನ ಮೌಲ್ಯವು ಎರಡು ಸಾವಿರ ರೂಪಾಯಿಗಳಿಗೆ ಮೀರಿದಾಗ. | ಹನ್ನೆರಡು ರೂಪಾಯಿ ಐವತ್ತು ಪೈಸೆ |
| | (2) ಇತರೆ ಸಂದರ್ಭಗಳಲ್ಲಿ | |
| | (i) ಉಚ್ಚ ನ್ಯಾಯಾಲಯಲದಲ್ಲಿ ಅರ್ಜಿ ಸಲ್ಲಿಸಿದಾಗ | ಹತ್ತು ರೂಪಾಯಿಗಳು |
| | [2][(iಎ) ಕರ್ನಾಟಕ ಆಡಳಿತ ನ್ಯಾಯಾಧಿಕರಣದಲ್ಲಿ ಅರ್ಜಿಸಲ್ಲಿಸಿದಾಗ | ಹತ್ತು ರೂಪಾಯಿಗಳು][2] |
| | (ii) ಇತರೆ ನ್ಯಾಯಾಲಯಗಳಲ್ಲಿ ಅರ್ಜಿಸಲ್ಲಿಸಿದಾಗ | ಐದು ರೂಪಾಯಿ][1] |

1. 1981ರ ಅಧಿನಿಯಮ 13ರ ಮೂಲಕ ದಿನಾಂಕ 17.01.1981 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.
2. 1989ರ ಅಧಿನಿಯಮ 5ರ ಮೂಲಕ ದಿನಾಂಕ 09.02.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅನುಸೂಚಿ III

## ಭಾಗ 1

**(52ನೇ ಪ್ರಕರಣವನ್ನು ನೋಡಿ)**

**ಎಸ್ಟೇಟಿನ ಮೌಲ್ಯ ನಿಗದಿಯ (ಅವಶ್ಯಕವಿರುವಂಥ ಯಾವುದಾದರೂ ಮಾರ್ಪಾಡುಗಳಿದ್ದರೆ ಅವುಗಳೊಡನೆ ಉಪಯೋಗಿಸಬೇಕಾದ) ನಮೂನೆ.**

ನ್ಯಾಯಾಲಯದಲ್ಲಿ

ವಿಷಯ:..........ಮೃತನ ಎಸ್ಟೇಟಿನ ಮರಣ ಶಾಸನದ ಪ್ರೊಬೇಟು (ಅಥವಾ ಎಸ್ಟೇಟಿನ ಆಡಳಿತ)

1. (ಎ.ಬಿ) ಎಂಬ ನಾನು ಮೃತ........ ...... ........ ..................ನ ಕಾರ್ಯನಿರ್ವಾಹಕನಿರುವೆನೆಂದೂ (ಕಾರ್ಯನಿರ್ವಾಹಕರ ಪೈಕಿ ಒಬ್ಬನೆಂದೂ ಅಥವಾ ಆತನ ಅತಿ ಹತ್ತಿರದ ಸಂಬಂಧಿಯೆಂದೂ), ಮತ್ತು ಮೇಲೆ ಹೆಸರಿಸಿರುವ ಮೃತನು ಮರಣ ಹೊಂದಿದಾಗ ಅಥವಾ ಅವನ ಸ್ವಾಧೀನದಲ್ಲಿದ್ದ ಅಥವಾ ಅವನು ಮರಣದ ಕಾಲಕ್ಕೆ ಹಕ್ಕುಳ್ಳವನಿದ್ದ ಮತ್ತು ನನ್ನ ಕೈಗೆ ಬಂದಿರುವ ಅಥವಾ ಬರುವ ಸಂಭವವಿರುವ ಎಲ್ಲಾ ಎಸ್ಟೇಟಿನ ಬಗ್ಗೆ, ಈ ಮೌಲ್ಯ ನಿಗದಿಯ ನಮೂನೆಯ ಎ-ಅನುಬಂಧದಲ್ಲಿ, ಸತ್ಯವಾಗಿರುವುದನ್ನು ವಿವರಿಸಿದ್ದೇನೆಂದೂ, ನಾನು ಶ್ರದ್ಧಾ ಪೂರ್ವಕವಾಗಿ ಪ್ರತಿಜ್ಞೆ /ಪ್ರಮಾಣ ಮಾಡುತ್ತೇನೆ.

2. ಅಲ್ಲದೇ ನನಗೆ ಕಾನೂನಿನ ಮೂಲಕ ಕಳೆಯಲು ಅವಕಾಶ ಕಲ್ಪಿಸಿರುವ ಎಲ್ಲಾ ಬಾಬುಗಳ ಬಗ್ಗೆ ಸತ್ಯವಾಗಿ ಬಿ-ಅನುಬಂಧದಲ್ಲಿ ವಿವರಿಸಿರುವನೆಂದೂ ಕೂಡ ನಾನು ಹೇಳುತ್ತೇನೆ.

3. ಅಷ್ಟೇ ಅಲ್ಲದೇ ಕೊನೆಯಲ್ಲಿ ಹೇಳಿರುವ ಬಾಬುಗಳನ್ನು ಮಾತ್ರವೇ ಹೊರತುಪಡಿಸಿ ಎಸ್ಟೇಟು, ಸದರಿ ಮೃತನ ಮರಣದ ದಿನಾಂಕದಂದು ..... ...... ..................ರೂ. ಗಿಂತ ಕಡಿಮೆ ಮೌಲ್ಯದ್ದಾಗಿ ಇದ್ದಿತೆಂದು* ಅಥವಾ ಈಗ ಇದೆಯೆಂದು ನಾನು ಘೋಷಿಸುತ್ತೇನೆ.

* ಇದನ್ನು ಮರಣದ ದಿನಾಂಕದಿಂದ ಒಂದು ವರ್ಷದ ನಂತರ ಮಾಡಿದ ಅರ್ಜಿಯ ಸಂದರ್ಭದಲ್ಲಿ ಬಳಸುವುದು.

4. ಮತ್ತು (ಎ.ಬಿ) ಎಂಬ ನಾನು, ಮೌಲ್ಯ ನಿಗದಿಯ ಈ ನಮೂನೆಯಲ್ಲಿ ಹೇಳಿರುವುದು ನನಗೆ ತಿಳಿದ ಮಾಹಿತಿಯ ಮತ್ತು ನಂಬುಗೆಯ ಪ್ರಕಾರ ಸತ್ಯವಾಗಿದೆಯೆಂದು ಕೂಡ ಘೋಷಿಸುತ್ತೇನೆ.

5.

(ಸಹಿ).................ಎ. ಬಿ.

## ಅನುಬಂಧ ಎ

### ಮೃತನ ಸ್ಥಿರ ಮತ್ತು ಚರ ಸ್ವತ್ತಿನ ಮೌಲ್ಯ ನಿಗದಿ ರೂ. ನಯಾಪೈಸೆ.

ಕೈಯಲ್ಲಿರುವ ಮತ್ತು ಬ್ಯಾಂಕಿನಲ್ಲಿ ಇರುವ ನಗದು, ಗೃಹೋಪಯೋಗಿ ವಸ್ತುಗಳು, ಉಡುಗೆಗಳು, ಪುಸ್ತಕಗಳು, ತಟ್ಟೆ, ಚಿನ್ನಾಭರಣಗಳು, ಇತ್ಯಾದಿ.

(ಕಾರ್ಯನಿರ್ವಾಹಕನ ಅಥವಾ ಆಡಳಿತಗಾರನ ಪೂರ್ಣ ನಂಬಿಕೆಯ ಪ್ರಕಾರ ಅಂದಾಜು ಮೌಲ್ಯವನ್ನು ಬರೆಯಿರಿ) ಸಾರ್ವಜನಿಕ-ಋಣ- ಕಛೇರಿಯಲ್ಲಿ ವರ್ಗಾಯಿಸಬಹುದಾದ ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಸ್ವತ್ತು.

(ಸ್ವತ್ತಿನ ವಿವರಣೆಗಳನ್ನು ಸಂದರ್ಭಾನುಸಾರ ಮೃತನ ಮರಣದ ದಿನಾಂಕದಂದು ಅಥವಾ ಅರ್ಜಿಯ ದಿನಾಂಕದಂದು ಇದ್ದ ಮೌಲ್ಯವನ್ನು ಬರೆಯಿರಿ)

ಇವುಗಳನ್ನೊಳಗೊಂಡ ಸ್ಥಿರಸ್ವತ್ತು ........................

(ಸ್ವತ್ತಿನ ವಿವರಣೆಗಳನ್ನು ಮತ್ತು ಸಂದರ್ಭಾನುಸಾರ ಮೃತನ ಮರಣದ ದಿನಾಂಕದಂದು ಅಥವಾ ಅರ್ಜಿಯ ದಿನಾಂಕದಂದು, ಅವುಗಳ ಮಾರುಕಟ್ಟೆ-ಮೌಲ್ಯವನ್ನು ಬರೆಯಿರಿ).

ಗೇಣಿಗೆ ಪಡೆದ ಸ್ವತ್ತು

(ಮುಕ್ತಾಯಗೊಳಿಸಬಹುದಾದ ವರ್ಷಗಳಿಗಾಗಿ ಮೃತನು ಯಾವುದೇ ಗೇಣಿಗಳನ್ನು ಪಡೆದಿದ್ದರೆ, ಗೇಣಿಯ ಅವಧಿಯನ್ನು ಮತ್ತು ಗೇಣಿಯ ಅಂದಾಜು ಮೊಬಲಗನ್ನು ಬರೆಯಿರಿ ಮತ್ತು ಸಂದರ್ಭಾನುಸಾರ ಮರಣದ ದಿನಾಂಕದಂದು ಅಥವಾ ಅರ್ಜಿಯ ದಿನಾಂಕದಂದು ಇದ್ದ ಬಾಕಿಗಳನ್ನು ಪ್ರತ್ಯೇಕವಾಗಿ ಸೇರಿಸಿರಿ).

ಸಾರ್ವಜನಿಕ ಕಂಪನಿಗಳಲ್ಲಿರುವ ಸ್ವತ್ತು.

(ಸ್ವತ್ತಿನ ವಿವರಣೆಗಳನ್ನು ಮತ್ತು ಸಂದರ್ಭಾನುಸಾರ ಮರಣದ ದಿನಾಂಕದಂದು ಅಥವಾ ಅರ್ಜಿಯ ದಿನಾಂಕದಂದು ಇದ್ದ ಬೆಲೆಯಂತೆ ಲೆಕ್ಕ ಮಾಡಲಾದ ಮೌಲ್ಯವನ್ನು ಬರೆಯಿರಿ).

ಜೀವ ವಿಮೆಯ ಪಾಲಿಸಿಗಳು, ಅಡಮಾನಗಳು ಮತ್ತು ಇತರೆ ಭದ್ರತೆಗಳ ಅಂದರೆ ಬಾಂಡುಗಳು, ಬಿಲ್‌ಗಳು, ನೋಟುಗಳು ಮತ್ತು ಹಣಕ್ಕೆ ಸಂಬಂಧಿಸಿದ ಇತರೆ ಭದ್ರತೆಗಳು ಇವುಗಳ ಮೇಲೆ ಕೊಟ್ಟಿರುವ ಹಣ.

(ಸಂದರ್ಭಾನುಸಾರ ಮರಣದ ದಿನಾಂಕದಂದು ಅಥವಾ ಅರ್ಜಿಯ ದಿನಾಂಕದಂದು ಇದ್ದಂತೆ ಈ ಎಲ್ಲ ಮೊಬಲಗನ್ನು ಬರೆಯಿರಿ).

ಸಾಲಗಳು

(ವಸೂಲಾಗದ ಸಾಲಗಳನ್ನು ಹೊರತುಪಡಿಸಿ) ವ್ಯಾಪಾರ ವ್ಯವಹಾರದಲ್ಲಿರುವ ಸರಕು

(ಅಂದಾಜು ಮೌಲ್ಯವಿದ್ದರೆ ಬರೆಯಿರಿ).

ಮೇಲಿನ ಶೀರ್ಷಿಕೆಗಳಲ್ಲಿ ಒಳಗೊಳ್ಳದ ಇತರೆ ಸ್ವತ್ತು (ಅಂದಾಜು ಮೌಲ್ಯ ಯಾವುದಾದರೂ ಇದ್ದರೆ ಬರೆಯಿರಿ).

------------------------

ಒಟ್ಟು ------------------------

ಅನುಬಂಧ ಬಿ ನಲ್ಲಿ ತೋರಿಸಿರುವ ಬಾಬುಗಳನ್ನು 53ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಕಳೆಯಿರಿ.

ಎಸ್ಟೇಟಿನ ನಿವ್ವಳ ಮೌಲ್ಯ

---------------------------------------------------------------

**ಅನುಬಂಧ ಬಿ**

**ಋಣಗಳು, ಇತ್ಯಾದಿಗಳ ಅನುಸೂಚಿ.**

ರೂ. ನಯಾಪೈಸೆ.

ಎಸ್ಟೇಟಿನಿಂದ ಕಾನೂನುಬದ್ಧವಾಗಿ ಸಂದಾಯಮಾಡತಕ್ಕ ಮತ್ತು ಮೃತನಿಂದ ಬರಬೇಕಾದ ಮತ್ತು ಅವನು ತೆರಬೇಕಾದ ಋಣಗಳ ಮೊಬಲಗು, ಅಂತ್ಯಕ್ರಿಯೆ ಹಾಗೂ ಉತ್ತರ ಕ್ರಿಯೆಗಳಿಗೆ ಸಂಬಂಧಿಸಿದ ಮೊಬಲಗು, ಅಡಮಾನದ ಭಾಗಗಳ ಮೊಬಲಗು, ಫಲಾನುಭವಿ ಅಥವಾ ಹಿತಾಸಕ್ತಿಯನ್ನು ಪ್ರದತ್ತ ಮಾಡುವ ಪ್ರಯೋಜನಕಾರಿ ಅಥವಾ ಸಾಮಾನ್ಯ ಅಧಿಕಾರವಿರದ ನ್ಯಾಸವಾಗಿರುವ ಸ್ವತ್ತು.

ಶುಲ್ಕಕ್ಕೆ ಒಳಪಡದ ಇತರೆ ಸ್ವತ್ತು.

------------------------------

ಒಟ್ಟು

------------------------------

**ಭಾಗ II**

**ಎಸ್ಟೇಟಿನ ಮೌಲ್ಯ ನಿಗದಿಯ ತಿದ್ದುಪಡಿ ಮಾಡಲಾದ ನಮೂನೆ.**

(58 ಮತ್ತು 60ನೇ ಪ್ರಕರಣಗಳನ್ನು ನೋಡಿ.)

ನ್ಯಾಯಾಲಯದಲ್ಲಿ,

ವಿಷಯ:- ಮೃತ......... ...... ಎಂಬಾತನ ಮರಣ ಶಾಸನದ ಪ್ರೊಬೇಟು ಅಥವಾ-ಎಸ್ಟೇಟಿನ ಆಡಳಿತ.)

1. (ಎ.ಬಿ) ಎಂಬ ನಾನು,...............ಎಂಬಾತನ ಕಾರ್ಯನಿರ್ವಾಹಕನಾಗಿರುತ್ತೇನೆ.

(ಕಾರ್ಯನಿರ್ವಾಹಕರ ಪೈಕಿ ಒಬ್ಬನಾಗಿರುತ್ತೇನೆ ಅಥವಾ ಅತಿ ಹತ್ತಿರದ ಸಂಬಂಧಿಯಾಗಿರುತ್ತೇನೆ.)

2. ಪ್ರೊಬೇಟನ್ನು (ಅಥವಾ ಆಡಳಿತ ಅಧಿಕಾರ ಪತ್ರವನ್ನು) ನನಗೆ...............ರಂದು ಮಂಜೂರು ಮಾಡಲಾಗಿದೆ.

3. ನ್ಯಾಯಾಲಯ ಫೀಜನ್ನು ಸಂದಾಯ ಮಾಡಲಾಗಿರುವ ಎಸ್ಟೇಟಿನ ನಿವ್ವಳ ಮೌಲ್ಯವನ್ನು ಸರಿಯಾಗಿ ಖಚಿತ ಪಡಿಸಿರುವುದಿಲ್ಲವೆಂದು ಈಗ ಕಂಡುಬಂದಿದೆ.

4. ಅವನ ಮರಣದ............ ದಿನಾಂಕದಂದು ಮೃತನಿಗಿದ್ದ ಪ್ರೊಬೇಟಿಗೆ (ಅಥವಾ ಆಡಳಿತ ಅಧಿಕಾರ ಪತ್ರಕ್ಕೆ) ಸಂಬಂಧಿಸಿದ ಅರ್ಜಿಯ............ ದಿನಾಂಕದಂದು ಇರುವ ಮತ್ತು ಈಗ ನನ್ನ ಕೈಗೆ ಬಂದಿರುವ ಅಥವಾ ಬರುವ ಸಂಭವವಿರುವ ಎಸ್ಟೇಟಿನ ಮೌಲ್ಯ ನಿಗದಿಯ ತಿದ್ದುಪಡಿಯಾದ ಈ ನಮೂನೆಯೊಡನಿರುವ ಅನುಬಂಧ-ಎ ದಲ್ಲಿ ಸತ್ಯವನ್ನೇ ವಿವರಿಸಿದ್ದೇನೆ.

5. ಮತ್ತು ಈಗ, ಕಾನೂನಿನ ಮೂಲಕ ನನಗೆ ಕಡಿತಗೊಳಿಸಲು ಅವಕಾಶ ಕಲ್ಪಿಸಲಾಗಿರುವ ಎಲ್ಲ ಬಾಬುಗಳನ್ನು ಅನುಬಂಧ-ಬಿ ಯಲ್ಲಿ ನಾನು ಸತ್ಯವಾಗಿ ವಿವರಿಸಿದ್ದೇನೆ.

6. ಮತ್ತು ಕೊನೆಯಲ್ಲಿ ಹೇಳಿರುವ ಬಾಬುಗಳನ್ನು ಮಾತ್ರವೇ ಹೊರತುಪಡಿಸಿ ಸದರಿ ಎಸ್ಟೇಟು

   ಮೃತನ ಮರಣದ
   
   ಈ ಅರ್ಜಿಯ ದಿನಾಂಕದಂದು.......... ರೂ. ಗಳೊಳಗೆ ಇದ್ದಿತೆಂದು, ನಾನು ಘೋಷಿಸುತ್ತೇನೆ.

7. ಮತ್ತು (ಎ,ಬಿ) ಎಂಬ ನಾನು, ಮೌಲ್ಯ ನಿಗದಿಯ ತಿದ್ದುಪಡಿಮಾಡಲಾದ ಈ ನಮೂನೆಯಲ್ಲಿ ಹೇಳಿರುವುದು, ನನಗೆ ತಿಳಿದುಬಂದ ಪೂರ್ಣ ಮಾಹಿತಿಯ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿದೆಯೆಂದೂ ಘೋಷಿಸುತ್ತೇನೆ.

(ಸಹಿ) ಎ,ಬಿ............

**ಅನುಬಂಧ ಎ**

**ಮೃತನ ಎಸ್ಟೇಟಿನ ಮೌಲ್ಯ ನಿಗದಿಯ ತಿದ್ದುಪಡಿಮಾಡಲಾದ ನಮೂನೆ.**

| ಯಾವುದರ ಮೇಲೆ ನ್ಯಾಯಾಲಯದ ಫೀಜನ್ನು ಸಂದಾಯ ಮಾಡಲಾಗಿದೆಯೋ ಆ ಮೌಲ್ಯ | ಹೆಚ್ಚಳ, ಕಡಿತ. | ಪ್ರಸ್ತುತ ತಿದ್ದುಪಡಿ ಮಾಡಲಾದ ಮೌಲ್ಯ. |
|---|---|---|
| ಒಟ್ಟು | | |

ಅನುಬಂಧ-ಬಿ ದಲ್ಲಿ ಕಾಣಿಸಿರುವ ಬಾಬುಗಳನ್ನು 53ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಕಳೆಯಿರಿ.

ಎಸ್ಟೇಟಿನ ತಿದ್ದುಪಡಿಯಾದ ನಿವ್ವಳ ಮೌಲ್ಯ---------------

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ಅನುಬಂಧ ಬಿ**

**ಋಣಗಳು, ಇತ್ಯಾದಿಗಳ ತಿದ್ದುಪಡಿಮಾಡಲಾದ ಅನುಸೂಚಿ.**

| ಯಾವುದರ ಮೇಲೆ ನ್ಯಾಯಾಲಯದ ಫೀಜನ್ನು ಸಂದಾಯ ಮಾಡಲಾಗಿದೆಯೋ ಆ ಮೌಲ್ಯ | ಹೆಚ್ಚಳ, ಕಡಿತ. | ಪ್ರಸ್ತುತ ತಿದ್ದುಪಡಿ ಮಾಡಲಾದ ಮೌಲ್ಯ. |
|---|---|---|
| ಒಟ್ಟು | | |

The above translation of the Karnataka Court-Fee and Suits Valuation Act, 1958 (Karnataka Act 16 of 1958) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE